ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 7 ಸೋಮವಾರ 2022

ಸಂಪುಟ: 43 | ಸಂಚಿಕೆ: 200 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಬೆಂಗಳೂರಲ್ಲಿ ಅದ್ದೂರಿ ಸ್ವಾಗತ

ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತನ್ನಿ



ಬೆಂಗಳೂರಿನ ಅರಮನೆ ಮೈದಾನದಲ್ಲಿ ಕೆಪಿಸಿಸಿ ವತಿಯಿಂದ ಭಾನುವಾರ ನಡೆದ ನವೋದಯ ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬೆಳ್ಳಿ ಗದೆ ನೀಡಿ, ಅಭಿನಂದಿಸಲಾಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೆವಾಲಾ, ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಈಶ್ವರ ಖಂಡ್ರೆ, ಸಲೀಂ ಅಹಮದ್ ಚಿತ್ರದಲ್ಲಿದ್ದಾರೆ.

ಅದೇ ನೀವು ನನಗೆ ಕೊಡುವ ಗೌರವ: ಖರ್ಗೆ

ಬೆಂಗಳೂರು,ನ.6–ನಮ್ಮ ಜನ ಜಾಗೃತ ರಾಗಬೇಕು. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ನಾವು ಗೆಲ್ಲಲೇಬೇಕು ಎಂಬ ಪಣ ತೊಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆ ಕೊಟ್ಟರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭ ನವೋದಯ ಸಮಾವೇಶದಲ್ಲಿ ಮಾತನಾಡಿದ ಅವರು, ನನಗೆ ನಿಜವಾದ ಗೌರವ ಸಲ್ಲಿಸಬೇಕು ಎಂದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು. ವೇದಿಕೆ ಮೇಲಿರುವ ಎಲ್ಲಾ ಕಾಂಗ್ರೆಸ್ ನಾಯಕರು ಒಗ್ಗಟ್ಟು ಮೂಡಿಸಿಕೊಳ್ಳಿ, ಸಣ್ಣ ಪುಟ್ಟ ವೈಮನಸ್ಸು ಮರೆಯಿರಿ. 40 ಪರ್ಸೆಂಟ್ ಕಮಿಷನ್ ಸರ್ಕಾರ ತೊಲಗಬೇಕು. ಪಕ್ಷದ ಕಾರ್ಯಕರ್ತರು ಒಗ್ಗಟ್ಟಿನಿಂದ ಹೋರಾಡಬೇಕು. ಹಿಂದಿನ ಸರ್ಕಾರ ನೀಡಿದ ವಿವಿಧ ಕಾರ್ಯಕ್ರಮವನ್ನು ಜನರಿಗೆ ತಿಳಿಸಿ. ನಾವು ಸಾಧನೆಗಳನ್ನು ಮುಂದಿಟ್ಟು ಹೋದರೆ ಸಾಧಿಸಬಹುದು. ಪಕ್ಷದ ವಿರುದ್ಧ ಮುನಿಸಿಕೊಂಡವರು, ಕಾರಣಾಂತರದಿಂದ ದೂರಾದವರು, ಯುವಕರನ್ನು ಪಕ್ಷಕ್ಕೆ ಮರಳಿ ಕರೆಸಬೇಕು ಎಂದು ಖರ್ಗೆ ಹೇಳಿದರು.

ಪಕ್ಷದ ಅಧ್ಯಕ್ಷನಾಗಿ ನನ್ನ ಜವಾಬ್ದಾರಿ ಹೆಚ್ಚಿದೆ ಸಾಕಷ್ಟು ಡಿಕ್ಲರೇಷನ್‌ಗಳನ್ನು ನಾನು ಈಡೇರಿಸಬೇಕಿದೆ. ಅದನ್ನು ಒಂದೊಂದಾಗಿ ಆರಂಭಿಸಿದ್ದೇನೆ. ಯುವಕರಿಗೆ, ಮಹಿಳೆಯರಿಗೆ ಪ್ರಾಧಾನ್ಯತೆ ನೀಡಬೇಕಿದೆ. ಅವರವರ ಶಕ್ತ್ಯಾನುಸಾರ ಕೆಲಸ ಕೊಡಿಸಬೇಕಿದೆ. ಪ್ರತಿಯೊಬ್ಬ ಯುವಕರಲ್ಲೂ ಒಗ್ಗಟ್ಟು ಮೂಡಿಸಬೇಕು. ಜನರ ಬಳಿ ತೆರಳಿ ವಿಷಯ ಮನದಟ್ಟು ಮಾಡಿ. ಕಾಂಗ್ರೆಸ್ ಸರ್ಕಾರ ತಂದಿದ್ದ ಯೋಜನೆಯನ್ನು ಇಂದಿನ ಸರ್ಕಾರ ನಿಲ್ಲಿಸಿದೆ. ಅದನ್ನು ಅರಿತು, ಜನರಿಗೆ ತಿಳಿಸಬೇಕು.

ಪಕ್ಷದ ಕಾರ್ಯಕರ್ತರು ಪಟ್ಟಣ ಬಿಟ್ಟು ಹಳ್ಳಿ ಹಳ್ಳಿಗೆ ಹೋಗಿ ಜನ ಜಾಗೃತಿ ಮೂಡಿಸಿದಾಗ ಮಾತ್ರ ಬಿಜೆಪಿಯನ್ನು ಕಿತ್ತೆಸೆದು ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಸಾಧ್ಯ. ಪಕ್ಷದ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ನಮಗೆ ಶಕ್ತಿ ತುಂಬಿದ್ದಾರೆ. ನಾವು ನಮ್ಮನ್ನು ತೊಡಗಿಸಿಕೊಂಡು ಮುಂದುವರಿಯಬೇಕು. ಭಾರತ್ ಜೋಡೊ ಯಾತ್ರೆ ಯಶಸ್ವಿಯಾಗಿದೆ ಎಂದರು.

ನನ್ನ ಸೇವೆಯನ್ನು ಪಕ್ಷ ಪರಿಗಣಿಸಿದೆ: ಬೃಹತ್ ಸಂಸ್ಥೆಗಳಲ್ಲಿ ಸಾವಿರಾರು ಮಂದಿ ನಡುವೆ ಕೆಲಸ ಮಾಡುವಾಗ ಅಲ್ಲಿ ಸಂಘಟನೆ ಕಟ್ಟಿ ನೇತೃತ್ವ ವಹಿಸಿ ನಮ್ಮವರನ್ನು ಮುಂದುವರಿಸಿಕೊಂಡು ಹೋಗುವ ಕಾರ್ಯ ಮಾಡಿದೆ. ನಮ್ಮ ಕೆಲಸಕ್ಕೆ ಬೆಲೆ ಸಿಗಬೇಕಾದರೆ ಈ ರೀತಿ ▶ 8ನೇ ಪುಟಕ್ಕೆ

ಕುರ್ಚಿ ಆಸೆ ಬಿಟ್ಟು ಕೆಲಸ ಮಾಡಿ

ಬೆಂಗಳೂರು: ಯಾರೇ ಆದರೂ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಕೆಲಸ ಮಾಡಿ, ಕುರ್ಚಿ ಆಸೆಗಾಗಿ ಕೆಲಸ ಮಾಡಬೇಡಿ ಎಂದು ಮಲ್ಲಿಕಾರ್ಜುನ ಖರ್ಗೆ ಕರೆ ನೀಡಿದರು.

ಪಕ್ಷ ಸಿದ್ಧಾಂತ ನಂಬಿದವರು ಎಂದಿಗೂ ಪಕ್ಷ ಬಿಡಲ್ಲ. ಹಾಗಾಗಿ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಕೆಲಸ ಮಾಡಿ ಎಂದರು. ಕೆಟ್ಟ ಸರ್ಕಾರಗಳನ್ನ ಕಿತ್ತೊಗೆಯಿರಿ. ಪ್ರಧಾನಿ ಮೋದಿ ನಮ್ಮನ್ನು ಕೇಳ್ತಾರೆ 70 ವರ್ಷದಲ್ಲಿ ಏನು ಮಾಡಿದ್ರಿ ಅಂತಾ, ನಾವು ಏನೂ ಮಾಡದೇ ಹೋಗಿದ್ದರೆ ದೇಶ ಉಳಿಯುತ್ತಿರಲಿಲ್ಲ. ಕಾಂಗ್ರೆಸ್ ಈ ದೇಶಕ್ಕೆ ಬುನಾದಿ ಹಾಕಿಕೊಟ್ಟಿದೆ. ಅಂಬೇಡ್ಕರ್ ಸಂವಿಧಾನ ಉಳಿದರೆ ದೇಶ ಉಳಿಯುತ್ತೆ, ಸಂವಿಧಾನ ಇದ್ದರೆ ಮಾತ್ರ ಮೋದಿ, ಅಮಿತ್ ಶಾ ಉಳಿತಾರೆ. ಹಾಗಾಗಿ ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ದೇಶ ಉಳಿಯಬೇಕು. ಅದಕ್ಕಾಗಿ ಜನರನ್ನು ಒಗ್ಗೂಡಿಸಿ ಹೋರಾಟ ಮಾಡಿ. ಇರುವ ಕೆಟ್ಟ ಸರ್ಕಾರಗಳನ್ನು ಕಿತ್ತೊಗೆಯಿರಿ ಎಂದು ಗುಡುಗಿದರು.

ಇವತ್ತು ಮಾತನಾಡುವ ನಾಯಕರು ಮೋದಿ ಅವರ ಶಾಲೆಯಲ್ಲಿ ಕಲಿತಿದ್ದಾರಾ? ಕಾಂಗ್ರೆಸ್ ನಿರ್ಮಿಸಿದ ಶಾಲೆಯಲ್ಲಿ ಕಲಿತು ಮಾತನಾಡುತ್ತಿದ್ದಾರೆ. ಇಂದಿರಾಗಾಂಧಿ ಹೋರಾಟ ಮಾಡದೇ ಇದ್ದಿದ್ದರೇ ಬಾಂಗ್ಲಾದೇಶ ಇರುತ್ತಿರಲಿಲ್ಲ. ▶ 8ನೇ ಪುಟಕ್ಕೆ

ಬಿಜೆಪಿ ಸರ್ಕಾರ ಕಿತ್ತೊಗೆಯುವುದು ನಮ್ಮ ಸವಾಲು

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ಜನ ಸಂಕಲ್ಪ ಮಾಡಿದ್ದಾರೆ. ಈ ರಾಜ್ಯದಲ್ಲಿರುವ ಭ್ರಷ್ಟ ಹಾಗೂ ದುರಾಡಳಿತದಿಂದ ಕೂಡಿರುವ ನಿಷ್ಕ್ರಿಯ ಸರ್ಕಾರವನ್ನು ಕಿತ್ತೊಗೆಯುವ ಸಂಕಲ್ಪ ಮಾಡಿದ್ದಾರೆ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎಲ್ಲಾ ನಾಯಕರೂ ಒಟ್ಟಾಗಿ ದುಡಿದು ಬಿಜೆಪಿಯ ಭ್ರಷ್ಟ ಸರ್ಕಾರವನ್ನು ಕಿತ್ತೊಗೆದು ಅಧಿಕಾರಕ್ಕೆ ಬಂದರೆ, ನನಗೆ ಸಂತಸವಾಗುತ್ತದೆ ಎಂದು ಖರ್ಗೆ ಹೇಳಿದ್ದಾರೆ. ಬಿಜೆಪಿ ಸರ್ಕಾರ ಕಿತ್ತೊಗೆಯುವುದು ನಮ್ಮ ಸವಾಲು. ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿರುವುದರಿಂದ ರಾಜ್ಯದ ಜನತೆಗೆ ಹೆಮ್ಮೆಯಾಗಿದೆ. ಪಕ್ಷದ ಕಾರ್ಯಕರ್ತರಂತೂ ಸಂತಸಗೊಂಡಿದ್ದಾರೆ. ನಾವು ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ನಿಮಗೆ ಗೌರವ ಸಲ್ಲಿಸುತ್ತೇವೆ. ಸಣ್ಣಪುಟ್ಟ ಭಿನ್ನಾಭಿಪ್ರಾಯ ಇರಬಹುದು. ಆದರೆ ನಮ್ಮ ಮುಂದಿರುವ ಸವಾಲು ಬಿಜೆಪಿ ಸರ್ಕಾರ ಕಿತ್ತೊಗೆಯಬೇಕು ಎಂಬುದು ಎಂದಿದ್ದಾರೆ. ಬಡವರ, ರೈತರ, ಯುವಕರ, ಅಲ್ಪಸಂಖ್ಯಾತರ ವಿರೋಧಿ ಸರ್ಕಾರ ಕಿತ್ತೊಗೆಯುವ ಚರ್ಚೆ ನಡೆದಿದೆ. ಅವರು ಅಧಿಕಾರಕ್ಕೆ ಬಂದು 3 ವರ್ಷವಾಗಿದ್ದು, ರಾಜ್ಯದ ಸಂಪತ್ತನ್ನು ಲೂಟಿ ಮಾಡಿದ್ದನ್ನು ಬಿಟ್ಟರೆ, ಜನರ ಕಷ್ಟಕ್ಕೆ ಸ್ಪಂದಿಸುವ ಕಾರ್ಯ ಮಾಡಿಲ್ಲ. 40 ಪರ್ಸೆಂಟ್ ಸರ್ಕಾರ ಎಂದು ನಾವಲ್ಲ, ಗುತ್ತಿಗೆದಾರರ ಸಂಘವೇ ಈ ಮಾತನ್ನು ಹೇಳಿ ಪ್ರಧಾನಿಗೆ ಪತ್ರ ಬರೆದಿದೆ. ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಜನ ಸಿಡಿದೆದ್ದಿದ್ದಾರೆ. ಖರ್ಗೆ ಅಭಿವೃದ್ಧಿಪರ ಕಾರ್ಯ ಮಾಡುವ ಅಭಿಲಾಷೆಯೊಂದಿಗೆ ರಾಜಕಾರಣ ಮಾಡಿದವರು. ಶ್ರೀಮಂತರ ಪರ ರಾಜಕಾರಣ ಮಾಡಿಲ್ಲ. ಬಡವರು, ಶೋಷಿತರ ಪರವಾಗಿ ಕೆಲಸ ಮಾಡಿದ್ದೀರಿ. ನಿಮ್ಮ ರಾಜಕಾರಣದ ಉದ್ದಕ್ಕೂ ಸಹ ಒಪ್ಪಿಕೊಂಡ ತತ್ವ ಸಿದ್ಧಾಂತಕ್ಕೆ ಬದ್ಧವಾಗಿ ಬಾಳಿದ್ದೀರಿ. ವಿಭಿನ್ನ ವ್ಯಕ್ತಿತ್ವ ನಿಮ್ಮದು. ನೀವು ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ನಾಡಿನ ಕಾಂಗ್ರೆಸ್ ನಾಯಕರಿಗೆ ಬಲ ಬಂದಿದೆ. 2023ರಲ್ಲಿ ಮತ್ತೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂಬ ಭರವಸೆ ನೀಡುತ್ತೇವೆ ಎಂದರು.

ಮೈಸೂರು ವಿವಿ ಕುಲಪತಿ ಆಯ್ಕೆಗೆ ಶೋಧನಾ ಸಮಿತಿ ರಚನೆ



ಪ್ರೊ.ಶಿವಕುಮಾರ್



ಪ್ರೊ. ತ್ರಿಪತಿ



ಪ್ರೊ. ತಿವಾರಿ



ಡಾ. ರೆಡ್ಡಿ

ಮೈಸೂರು,ನ.6(ಆರ್‌ಕೆ)–ಶತಮಾನೋತ್ಸವ ಇತಿಹಾಸವಿರುವ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಅವರ ಅಧಿಕಾರಾವಧಿ ನವೆಂಬರ್ 15ಕ್ಕೆ ಅಂತ್ಯಗೊಳ್ಳಲಿದೆ.



ಈ ಹಿನ್ನೆಲೆಯಲ್ಲಿ ನೂತನ ಕುಲಪತಿ ಆಯ್ಕೆಗಾಗಿ ರಾಜ್ಯ ಉನ್ನತ ಶಿಕ್ಷಣ ಇಲಾಖೆಯು ಶೋಧನಾ ಸಮಿತಿ ರಚಿಸಿದೆ. ಬೆಂಗಳೂರಿನ ಸಿಎಂಆರ್ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಎಸ್.ಶಿವಕುಮಾರ್ ನೇತೃತ್ವದ ಸಮಿತಿಗೆ ಇಂದಿರಾ ಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪ್ರಕಾಶಮಣಿ ತ್ರಿಪತಿ, ಮಧ್ಯಪ್ರದೇಶದ ಅಮರ್ ಕಂಟಕ್, ಪಂಜಾಬ್‌ನ ಸೆಂಟ್ರಲ್ ಯೂನಿವರ್ಸಿಟಿ ಕುಲಪತಿ ಪ್ರೊ. ರಾಘವೇಂದ್ರ ಪಿ. ತಿವಾರಿ ಹಾಗೂ ಲಕ್ನೋದ ಸಿಎಸ್‌ಐಆರ್–ಸೆಂಟ್ರಲ್ ಡ್ರಗ್ ರೀಸರ್ಚ್ ಇನ್ಸ್‌ಟಿಟ್ಯೂಟ್ ನಿರ್ದೇಶಕರಾದ ಡಾ. ಡಿ. ಶ್ರೀನಿವಾಸ ರೆಡ್ಡಿ ಅವರನ್ನು ಸದಸ್ಯರಾಗಿ ನೇಮಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯ ಅರ್ಜಿಗಳನ್ನು ಪರಿಶೀಲಿಸಿ ಅತೀ ಬೇಗ ಮೂವರ ಹೆಸರನ್ನು ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಸೂಚಿಸಲಾಗಿದೆ. ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗ (ಯುಜಿಸಿ)ದ ನಿಯಮಗಳನ್ವಯ ಅರ್ಹ ಅಭ್ಯರ್ಥಿಗಳಿಂದ ಬರುವ ಅರ್ಜಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ಉನ್ನತ ಶಿಕ್ಷಣ ಇಲಾಖೆ ಸಮಿತಿ ಸದಸ್ಯರಿಗೆ ತಿಳಿಸಿದೆ.

ನವೆಂಬರ್ 15ರಂದು ಪ್ರೊ.ಜಿ.ಹೇಮಂತಕುಮಾರ್ ಅವರ ಅಧಿಕಾರ ಅಂತ್ಯವಾಗುತ್ತಿದ್ದು, ಖಾಯಂ ಕುಲಪತಿ ನೇಮಕವಾಗುವವರೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಭಾರ ಜವಾಬ್ದಾರಿ ವಹಿಸಲು ಹಿರಿಯ ಪ್ರಾಧ್ಯಾಪಕರ ಹೆಸರುಗಳನ್ನು ಪಡೆಯಲಾಗಿದ್ದು, ಅತೀ ಶೀಘ್ರದಲ್ಲೇ ಸರ್ಕಾರ ಆದೇಶ ಹೊರಡಿಸಲಿದೆ.

ಮೈಸೂರು ವಿವಿ ಪ್ರಭಾರ ಕುಲಪತಿಗೆ ಪ್ರೊ.ರಾಜಶೇಖರ ಹೆಸರು ಶಿಫಾರಸು

ಮೈಸೂರು,ನ.6–ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಹುದ್ದೆಗೆ ವಾಣಿಜ್ಯ ಮತ್ತು ನಿರ್ವಹಣಾ ನಿಕಾಯದ ಡೀನ್ ಪ್ರೊ. ಹೆಚ್. ರಾಜಶೇಖರ ಹೆಸರನ್ನು ಶಿಫಾರಸ್ಸು ಮಾಡಲಾಗಿದೆ.



ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಅವರ ಅಧಿಕಾರಾವಧಿಯು ನವೆಂಬರ್ 15ಕ್ಕೆ ಅಂತ್ಯಗೊಳ್ಳಲಿದ್ದು, ಅಷ್ಟರಲ್ಲಿ ನೂತನ ಖಾಯಂ ಕುಲಪತಿ ನೇಮಕ ಮಾಡದಿದ್ದಲ್ಲಿ ಹಿರಿಯ ಪ್ರಾಧ್ಯಾಪಕರಾದ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಫ್ಯಾಕಲ್ಟಿ ಡೀನ್ ಪ್ರೊ.ಹೆಚ್.ರಾಜಶೇಖರ ಅವರಿಗೇ ಜೇಷ್ಠತೆ ಆಧಾರದ ಮೇಲೆ ಪ್ರಭಾರ ಅಧಿಕಾರ ವಹಿಸಿಕೊಡಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಮೂಲಗಳು ತಿಳಿಸಿವೆ.

ಪ್ರಭಾರ ಕುಲಪತಿ ನೇಮಕ ಸಂಬಂಧ ಸರ್ಕಾರಕ್ಕೆ ನೀಡಿರುವ ಹಿರಿಯ ಪ್ರಾಧ್ಯಾಪಕರ ಪಟ್ಟಿಯಲ್ಲೂ ಪ್ರೊ. ರಾಜಶೇಖರ ಅವರ ಹೆಸರು ಮೊದಲನೆಯದಾಗಿದೆ. ಅವರೊಂದಿಗೆ ಕಲಾ ನಿಕಾಯದ ಡೀನ್ ಡಾ.ಮುಜಾಫರ್ ಹುಸೇನ್ ಅಸಾದಿ, ವಿಜ್ಞಾನ ನಿಕಾಯದ ಡೀನ್ ಡಾ.ಹೆಚ್.ಟಿ.ಬಸವರಾಜಪ್ಪ, ಶಿಕ್ಷಣ ನಿಕಾಯದ ಡೀನ್ ಡಾ.ಮದಿ ಅಲಗನ್, ಕಾನೂನು ನಿಕಾಯದ ಡೀನ್ ಡಾ.ಟಿ.ಮಾರುತಿ ಹಾಗೂ ಇಂಜಿನಿಯರಿಂಗ್ ನಿಕಾಯದ ಡೀನ್ ಪ್ರೊ.ಬಿ.ಶಂಕರ ಅವರ ಹೆಸರುಗಳೂ ಪಟ್ಟಿಯಲ್ಲಿವೆಯಾದರೂ, ಸೇವಾ ಹಿರಿತನದ ಆಧಾರದಲ್ಲಿ ರಾಜ್ಯಪಾಲರು ಪ್ರೊ.ರಾಜಶೇಖರ ಅವರನ್ನು ಪ್ರಭಾರ ಕುಲಪತಿಯಾಗಿ ನಿಯೋಜಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಕೆಆರ್‌ಎಸ್‌ನಲ್ಲಿ ಮತ್ತೆ ಚಿರತೆ ಪ್ರತ್ಯಕ್ಷ

■ ತಿಂಗಳಲ್ಲಿ ನಾಲ್ಕನೇ ಬಾರಿಗೆ ಚಿರತೆ ದರ್ಶನ ■ ಪ್ರವಾಸಿಗರಿಗೆ ಕೆಆರ್‌ಎಸ್ ಬಂದ್

ಶ್ರೀರಂಗಪಟ್ಟಣ,ನ.6– ವಿಶ್ವವಿಖ್ಯಾತ ಪ್ರವಾಸಿ ತಾಣ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಚಿರತೆ ಮತ್ತೆ ಪ್ರತ್ಯಕ್ಷಗೊಂಡು ಸಿಬ್ಬಂದಿ ಹಾಗೂ ಪ್ರವಾಸಿಗರಲ್ಲಿ ಆತಂಕ ಮೂಡಿಸಿದೆ. ಅಲ್ಲದೆ ಬೃಂದಾವನ ಪ್ರವೇಶಕ್ಕೆ ನಿರ್ಬಂಧಿಸಲಾಗಿದೆ.

ಕಳೆದ 20 ದಿನಗಳ ಅಂತರದಲ್ಲಿ ನಾಲ್ಕೈದು ಬಾರಿ ಕಾಣಿಸಿಕೊಂಡಿರುವ ಚಿರತೆ ಇಡೀ ಬೃಂದಾವನ ಹಾಗೂ ಅಣೆಕಟ್ಟೆಯಲ್ಲೆಲ್ಲಾ ತಿರುಗಾಡಿ ಭಯದ ವಾತಾವರಣ ನಿರ್ಮಾಣವಾಗಿದೆ.

ನ.4ರಂದು ಕೆ.ಆರ್. ನಗರದಲ್ಲಿ ಚಿರತೆ ಕಾಣಿಸಿಕೊಂಡು ಹಲವರ ಮೇಲೆ ದಾಳಿ ಮಾಡಿದ ಪ್ರಕರಣ ಮಾಸುವ ಮುನ್ನವೇ



ಫೈಲ್ ಚಿತ್ರ

ಶನಿವಾರ ರಾತ್ರಿ 9 ಗಂಟೆ ಸುಮಾರಿಗೆ ಹಾಗೂ ಇಂದು ಮಧ್ಯಾಹ್ನ 1.50ರಲ್ಲಿ ಅಣೆಕಟ್ಟೆಯ ಮೀನುಗಾರಿಕೆ ಇಲಾಖೆ ಬಳಿ ಚಿರತೆ ಕಾಣಿಸಿಕೊಂಡಿದೆ. ಅ.21ರಂದು ಹಾಡಹಗಲೇ ಸಿಬ್ಬಂದಿಗೆ ಮೊದಲ ಬಾರಿಗೆ ಕಾಣಿಸಿಕೊಂಡ ಚಿರತೆ, ನಂತರ ಶ್ರೀರಂಗಪಟ್ಟಣದ ಅರಣ್ಯ ಇಲಾಖೆ ▶ 8ನೇ ಪುಟಕ್ಕೆ

“ಇಂದು ಚಿರತೆ ಕಾಣಿಸಿಕೊಂಡು ಆತಂಕಕ್ಕೆ ಕಾರಣವಾಗಿದೆ. ನಾನು ಕೂಡ ಕೆಆರ್‌ಎಸ್ ಅಣೆಕಟ್ಟೆಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದೇನೆ, ಇಂದು ಮೂರನೇ ಬೋನ್ ಇರಿಸಲಾಗಿದೆ. ಪ್ರವಾಸಿಗರ ಹಿತದೃಷ್ಟಿಯಿಂದ 4 ದಿನಗಳ ಕಾಲ ಸಂಪೂರ್ಣ ಬಂದ್ ಮಾಡಲಾಗಿದ್ದು, ನಾಳೆಯಿಂದ ಜೆಸಿಬಿಗಳನ್ನು ಬಳಸಿಕೊಂಡು ಗಿಡಗಳನ್ನು ತೆರವುಗೊಳಿಸುವ ಕೆಲಸ ಪ್ರಾರಂಭ ಮಾಡಲಾಗುತ್ತಿದೆ. ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಎಷ್ಟು ಸಿಸಿ ಕ್ಯಾಮರಾ ಕೆಲಸ ಮಾಡುತ್ತಿವೆ ಎಂಬುದರ ಮಾಹಿತಿಯನ್ನು ಅಧಿಕಾರಿಗಳ ಬಳಿ ಕೇಳಿದ್ದೇನೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲಾಗುವುದು.
–ಶಂಕರೇಗೌಡ, ಎಂಡಿ, ಕಾವೇರಿ ನೀರಾವರಿ ನಿಗಮ

ವಿದ್ಯುತ್ ಸ್ಪರ್ಶ: ಮೂವರು ರೈತರ ಸಾವು

● ತಿ.ನರಸೀಪುರ ಬಳಿ ದುರಂತ ● ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ● ಭತ್ತದ ಫಸಲಿಗೆ ಔಷಧಿ ಸಿಂಪಡಿಸಲು ಹೋದಾಗ ಘಟನೆ

ತಿ.ನರಸೀಪುರ, ನ.6– ವಿದ್ಯುತ್ ಸ್ಪರ್ಶದಿಂದ ಮೂವರು ರೈತರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ನೀಲಸೋಗೆ ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದೆ.

ಗ್ರಾಮದ ನಿವಾಸಿಗಳಾದ ರಾಚೇಗೌಡ(62), ಅವರ ಪುತ್ರ ಹರೀಶ್(30) ಹಾಗೂ ಮಹದೇವಸ್ವಾಮಿ (40) ಸಾವನ್ನಪ್ಪಿದವರು.

ವಿವರ: ಇಂದು ಬೆಳಗ್ಗೆ ತಮ್ಮ ಜಮೀನಿನಲ್ಲಿ ನಾಟಿ ಮಾಡಿದ್ದ ಭತ್ತದ ಫಸಲಿಗೆ ಔಷಧಿ ಸಿಂಪಡಣೆ ಮಾಡಲು ರಾಚೇಗೌಡ ಮತ್ತು ಪುತ್ರ ಹರೀಶ್ ಅವರು ಅದೇ ಗ್ರಾಮದ ಮಹದೇವಸ್ವಾಮಿ ಎಂಬುವರನ್ನು ಕರೆದೊಯ್ದಿದ್ದರು. ಈ ವೇಳೆ ಜಮೀನಿನ ಮೇಲೆ ಹಾದು ಹೋಗಿದ್ದ ವಿದ್ಯುತ್ ತಂತಿ ತುಂಡಾಗಿ ಬಿದ್ದಿದ್ದನ್ನು ಗಮನಿಸಿದ ರಾಚೇಗೌಡ ಅದನ್ನು ಎತ್ತಲು ಮುಂದಾದಾಗ ವಿದ್ಯುತ್ ಸ್ಪರ್ಶಗೊಂಡು ಕೆಳಗೆ ಬಿದ್ದು ಒದ್ದಾಡುತ್ತಿದ್ದರು. ಇದನ್ನು ಗಮನಿಸಿದ ಮಗ ಹರೀಶ್ ತಂದೆಗೆ ಮೂರ್ಛೆ ಬಂದಿರಬಹುದು ಎಂದು ತಿಳಿದು ರಾಚೇಗೌಡರನ್ನು ಮುಟ್ಟಿದ್ದಾರೆ. ಈ ವೇಳೆ ಆತನೂ ವಿದ್ಯುತ್ ಸ್ಪರ್ಶದಿಂದ ಕೆಳಗೆ ಬಿದ್ದಿದ್ದು, ಈ ವೇಳೆ ಇವರಿಬ್ಬರನ್ನು ಗಮನಿಸಿದ ಮಹದೇವಸ್ವಾಮಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಸರಿಪಡಿಸಲು ಹೋದಾಗ ಆತನೂ ಸ್ಪರ್ಶಕ್ಕೆ ಒಳಗಾಗಿ,








ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೃತ ಹರೀಶ್ ಮೈಸೂರು ಯೋಜನಾ ಸಮನ್ವಯಾಧಿಕಾರಿ ಕಚೇರಿ ಹೊರಗುತ್ತಿಗೆ ನೌಕರ ಎನ್ನಲಾಗಿದೆ. ವಿಷಯ ತಿಳಿದು ಘಟನಾ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಎಂ.ಅಶ್ವಿನ್ ಕುಮಾರ್, ನಡೆದ ದುರ್ಘಟನೆಗೆ ವಿಷಾದ ವ್ಯಕ್ತಪಡಿಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಅಲ್ಲದೇ ಇಂಧನ ಸಚಿವ ಸುನೀಲ್‌ಕುಮಾರ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡುವಂತೆ ಒತ್ತಾಯಿಸಿದರು. ಅಲ್ಲದೇ ಜಿಲ್ಲಾ ಉಸ್ತುವಾರಿ ಸಚಿವರಿಗೆ ಹೆಚ್ಚಿನ ಪರಿಹಾರ ನೀಡುವ ಸಲುವಾಗಿ ಮನವಿ ಮಾಡಲಾಗುವುದು ಎಂದರು. ▶ 8ನೇ ಪುಟಕ್ಕೆ

ಸೆಸ್ಕ್‌ನವರ ನಿರ್ಲಕ್ಷ್ಯವಿದ್ದರೆ ಕ್ರಮ

“ವಿದ್ಯುತ್ ಸ್ಪರ್ಶದಿಂದ ಮೂವರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಹಾರ ನೀಡಲು ಸೂಚಿಸಿದ್ದು, ವಿದ್ಯುತ್ ಮಾರ್ಗ ನಿರ್ವಹಣೆ ಮಾಡದೇ ನಿರ್ಲಕ್ಷ್ಯ ವಹಿಸಿದಲ್ಲಿ ಅಂತಹ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಮುಂಜಾನೆ 4ರಿಂದ ಬೆಳಗ್ಗೆ 11ರವರೆಗೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಈ ವೇಳೆ ರೈತರು ಸಹಜವಾಗಿ ಜಮೀನು ಕಡೆ ಬರುತ್ತಾರೆ. ಈ ರೀತಿ ಬಂದಾಗಲೇ ತಿ.ನರಸೀಪುರ ತಾಲೂಕಿನ ನೀಲಸೋಗೆಯಲ್ಲಿ ದುರಂತ ನಡೆದಿದೆ. ಇದು ಎಲ್‌ಟಿ ಮಾರ್ಗವಾಗಿರುವುದರಿಂದ ಅಷ್ಟಾಗಿ ವಿದ್ಯುತ್ ಪ್ರವಾಹ ಇರುವುದಿಲ್ಲ. ಆದರೂ ದುರಂತ ಸಂಭವಿಸಿರುವುದು ವಿಷಾದನೀಯ. ಎಲೆಕ್ಟ್ರಿಕಲ್ ವಿಭಾಗದವರು ತನಿಖೆ ನಡೆಸಿ ನೀಡುವ ವರದಿ ಆಧರಿಸಿ ನಮ್ಮವರ ತಪ್ಪಿದ್ದರೆ ಕ್ರಮ ಕೈಗೊಳ್ಳಲಾಗುವುದು. **–ಜಯವಿಭವಸ್ವಾಮಿ, ಎಂ.ಡಿ., ಸೆಸ್ಕ್**

ಶ್ರದ್ಧಾಂಜಲಿ



ಶ್ರೀ. ನಂಜುಂಡೇ ಗೌಡರು
12.08.1937 - 28.10.2022

ನಿವೃತ್ತ ಡಿವೈ.ಎಸ್‌ಪಿ ಹಾಗೂ ಮಾಜಿ ಅಧ್ಯಕ್ಷರು,
ಪೊಲೀಸ್ ಹೌಸಿಂಗ್ ಕೊ–ಆಪರೇಟಿವ್ ಸೊಸೈಟಿ

ನಮ್ಮ ಪ್ರೀತಿಯ ಕುಟುಂಬಸ್ಥರಾದ ಶ್ರೀ. ನಂಜುಂಡೇ ಗೌಡರು ದಿ: 28–10–2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ತತ್ಸಂಬಂಧವಾಗಿ ಸಂತಾಪ ಮತ್ತು ಪ್ರಾರ್ಥನಾ ಸಭೆಯನ್ನು (ಮಂಗಳವಾರ) ದಿ: 8–11–2022 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು, ಕೊಪ್ಪ ಹೋಬಳಿ, ತರಿಕೆರೆ ಗ್ರಾಮದಲ್ಲಿ ಏರ್ಪಡಿಸಲಾಗಿದೆ

ಇದನ್ನೇ ವೈಯಕ್ತಿಕ ಆಹ್ವಾನವೆಂದು ಪರಿಗಣಿಸಿ, ಪ್ರಾರ್ಥನಾ ಸಭೆಗೆ ಆಗಮಿಸಿ ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರಲು ವಿನಂತಿ.

ದುಃಖತಪ್ತರು:
ಟಿ.ಎನ್. ನಾಗೇಶ್, ಟಿ.ಎನ್. ಶಿವಶಂಕರ, ಟಿ.ಎನ್. ಸವಿತ, ಟಿ.ಎನ್. ಶಶಿಕುಮಾರ್, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು, ತರಿಕೆರೆ ಮಾಳಿಗೆ ಗೌಡ ಕುಟುಂಬಸ್ಥರು ಹಾಗೂ ಬಂಧುಮಿತ್ರರು

Cell: 98866 47772 / 9448132101

ಆಧ್ಯಾತ್ಮಕ್ಕೆ ಗಡಿ, ಗೆರೆಗಳಿಲ್ಲ

ಪ್ರೊ. ಮೊರಬದ ಮಲ್ಲಿಕಾರ್ಜುನ ಅಭಿಮತ



ಮೈಸೂರು, ನ.6(ಆರ್‌ಕೆಬಿ)– ಆಧ್ಯಾತ್ಮಕ್ಕೆ ಗಡಿ, ಗೆರೆಗಳು ಇರುವುದಿಲ್ಲ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಹೇಳಿದರು. ಮೈಸೂರಿನ ರಂಗಾಯಣ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ರಂಗಾಯಣ, ಸಂವಹನ ಪ್ರಕಾಶನ, ಕನ್ನಡ ಸಾಹಿತ್ಯ ಕಲಾಕೂಟ ಜಂಟಿಯಾಗಿ ಆಯೋಜಿಸಿದ್ದ ಕವಿ ಸಿ.ಚಾಮಶೆಟ್ಟಿ ಅವರ 'ಹನುಮನ ಸೀತಾನ್ವೇಷಣೆ ಮತ್ತು ಸಂತ ರವಿದಾಸರು', 'ನಾಟಕ ಚಕ್ರ', 'ತ್ರಿವರ್ಣ ಕಾವ್ಯ ಸಂಕಲನ' ಮತ್ತು 'ಸಮನ್ವಿತ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಆಧ್ಯಾತ್ಮಿಕ ಲೋಕವು ಒಂದುಗೂಡಿಸುವ ಲೋಕವೇ ಹೊರತು, ದೂರೀಕರಿಸುವ ಲೋಕವಲ್ಲ. ಆಧ್ಯಾತ್ಮಿಕ ಲೋಕಕ್ಕೆ ಗಡಿ, ಗೆರೆಗಳೆಂಬುದಿಲ್ಲ. ಏಕೆಂದರೆ ಕಾಶಿಯ ಸಂತ ರವಿದಾಸರು ದೇವರನ್ನು ನೆನಪು ಮಾಡಿಕೊಳ್ಳುವಾಗ ಬಸವನ ನೆನಪು ಮಾಡಿಕೊಳ್ಳುತ್ತಾರೆ ಎಂದರು.

ಹನುಮನ ಸೀತಾನ್ವೇಷಣೆ ಕೃತಿ ಕುರಿತು ಪ್ರಸ್ತಾಪಿಸಿದ ಅವರು, ಈ ಕೃತಿ ಮಾನವೀಯ ಅಂತಃಕರಣದ ಕಾರಣಕ್ಕಾಗಿ ಮಹತ್ವದ ಕೃತಿ ಎನಿಸುತ್ತದೆ ಎಂದು ಹೇಳಿದರು.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ರಂಗಕರ್ಮಿ ಎಚ್.ಎ.ಪಾರ್ಶ್ವನಾಥ್, ಕೃತಿ ಕುರಿತು ಶಿಕ್ಷಕಿ ಎನ್.ಕೆರೋಡಿ ಲೋಲಾಕ್ಷಿ ಮಾತನಾಡಿದರು. ನಿವೃತ್ತ ಅರಣ್ಯ ಅಧಿಕಾರಿ ಎಲ್.ಮಲ್ಲಶೆಟ್ಟಿ, ಕನ್ನಡ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಲೇಖಕ ಚಾಮಶೆಟ್ಟಿ, ಪ್ರಕಾಶಕ ಡಿ.ಎನ್.ಲೋಕಪ್ಪ, ಕಸಾಪ ಮಾಜಿ ಅಧ್ಯಕ್ಷ ಪ್ರೊ.ನೀ.ಗಿರಿಗೌಡ ಇನ್ನಿತರರು ಉಪಸ್ಥಿತರಿದ್ದರು.

60 ದಿನಗಳನ್ನು ಪೂರೈಸಿದ ಭಾರತ್ ಜೋಡೋ ಯಾತ್ರೆ

ಹೈದರಾಬಾದ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ಭಾನುವಾರ ತೆಲಂಗಾಣದಲ್ಲಿ ಮುಂದುವರೆದಿದೆ. ತಮ್ಮ ಪಾದಯಾತ್ರೆಯ



60ನೇ ದಿನವಾದ ಭಾನುವಾರ ಬೆಳಗ್ಗೆ ಮೇದಕ್ ಜಿಲ್ಲೆಯ ಅಲ್ಲಾದುರ್ಗದಲ್ಲಿ ಅವರು ಪಾದಯಾತ್ರೆ ಆರಂಭಿಸಿದರು. ಅವರು ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ರೇವಂತ್ ರೆಡ್ಡಿ ಮತ್ತು ಇತರ ರಾಜ್ಯ ನಾಯಕರೊಂದಿಗೆ ಚಿಂತಲ್ ಲಕ್ಷ್ಮಾಪುರದಲ್ಲಿ ಮಧ್ಯಾಹ್ನದ ನಿಲುಗಡೆಗೆ ಮೊದಲು ಅಲ್ಲದುರ್ಗದ ಪ್ರಧಾನ ಕಚೇರಿಯ ವಿವಿಧ ಭಾಗಗಳಲ್ಲಿ ಸಂಚರಿಸಿದರು. ಪಾದಯಾತ್ರೆಯ ವೇಳೆ ವಿವಿಧ ಕ್ಷೇತ್ರಗಳ ಜನರೊಂದಿಗೆ ಮತ್ತು ವಿವಿಧ ಗುಂಪುಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ರಾಹುಲ್, ಅವರ ಸಮಸ್ಯೆಗಳನ್ನು ಕೇಳಿದರು. ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಜನರತ್ತ ಕೈಬೀಸಿದರು ಮತ್ತು ಕೆಲ ಯುವಕರು ತಮ್ಮೊಂದಿಗೆ ಸೆಲ್ಫಿ ತೆಗೆಸಿಕೊಳ್ಳುವ ಮನವಿಯನ್ನು ಪುರಸ್ಕರಿಸಿದರು.

ಕಬ್ಬಿನ ಬೆಲೆ ನಿಗದಿಗಾಗಿ ರೈತರ ಅಹೋರಾತ್ರಿ ಪ್ರತಿಭಟನೆ 7ನೇ ದಿನಕ್ಕೆ



ಮೈಸೂರು,ನ.6(ಎಂಟಿವೈ)– ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಗಾಗಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನೆ 7ನೇ ದಿನಕ್ಕೆ ಮುಂದುವರಿದಿದ್ದು, ಭಾನುವಾರ ಸರ್ಕಾರ ಹಾಗೂ ಸಚಿವರನ್ನು ಅಣಕಿಸುವಂತೆ ಭಜನೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ಮುಂದುವರೆಸಿ ರೈತರು, ಸತತ 7 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರು ಆಗಮಿಸಲಿಲ್ಲ. ರೈತರ ಸಮಸ್ಯೆಯನ್ನು ಆಲಿಸಲಿಲ್ಲ. ರೈತರ ಕುಂದು ಕೊರತೆ ಸಭೆ ಕರೆದಿಲ್ಲ ಎಂದು ಆರೋಪಿಸಿ, ಜಿಲ್ಲೆಯಿಂದ ದೂರವಾದ ಮಂತ್ರಿ ಏತಕೇ, ರೈತರನ್ನು ಮರೆತೆ ಏತಕೇ, ಜನರಿಗೆ ಏನು ಮಾಡಿದೆ, ಇದು ನ್ಯಾಯವೇ ಎಂದು ಹಾಡುತ್ತಾ ಅಣಕಿಸಿ, ಸಚಿವರ ವಿರುದ್ಧ ಲೇವಡಿ ಮಾಡಿದರು.

ಈ ವೇಳೆ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ ಮಾತನಾಡಿ, ಶಾಸಕರ ಹಾಗೂ ಸಂಸದರ ವೇತನವನ್ನು ಯಾವುದೇ ಚರ್ಚೆ ಮಾಡದೇ ಹೆಚ್ಚಿಸಿಕೊಳ್ಳುತ್ತಾರೆ. ರೈತರಿಗೆ ಕಬ್ಬಿನ ಬೆಲೆ ಏರಿಕೆ ಮಾಡುವಂತೆ 4 ತಿಂಗಳು ಹೋರಾಟ ನಡೆಸಿದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಜನಪ್ರತಿನಿಧಿಗಳು ರೈತ ದ್ರೋಹಿಗಳಾಗುತ್ತಿದ್ದಾರೆ. ಸಕ್ಕರೆ ಕಾರ್ಖಾನೆಗಳ ಮಾಲೀಕರ ಅಡಿಯಾಳಾಗುತ್ತಿದ್ದಾರೆ. ಶುಗರ್ ಮಾಫಿಯಾ ದೇಶದಲ್ಲಿ ಬಹುದೊಡ್ಡ ಮಾಫಿಯಾ ಆಗಿದ್ದು, ಕಬ್ಬು ಬೆಳೆಗಾರರನ್ನು ನಾಶ ಮಾಡುತ್ತಿದೆ. ಜನಪ್ರತಿನಿಧಿಗಳು ಮಾಫಿಯಾದೊಂದಿಗೆ ಕೈಜೋಡಿಸಿದಂತೆ ಕಾಣುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಚುಂಚರಾಯನಹುಂಡಿ ಮಂಜು, ಸಿದ್ದರಾಮು, ನಂಜುಂಡಸ್ವಾಮಿ, ಮಲ್ಲಪ್ಪ, ಮಹದೇವಸ್ವಾಮಿ, ಮಹದೇವಪ್ಪ, ಶಿವಮೂರ್ತಿಕಾಳಸ್ವಾಮಿ, ಮಾರ್ಬಳ್ಳಿ ನೀಲಕಂಠಪ್ಪ, ಕೆಆರ್‌ಎಸ್ ರಾಮೇಗೌಡ, ಅಂಬಳೆ ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಲಕ್ಷ್ಮಿಪುರಂ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಅಣಕು ಯುವ ಸಂಸತ್ತು ಸ್ಪರ್ಧೆಯನ್ನು ಪ್ರಾಚಾರ್ಯರಾದ ಸುರೇಶ್ ಉದ್ಘಾಟಿಸಿದರು. ಚಿತ್ರದಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಪಶುಪತಿ, ಡಾ.ಲೋಕೇಶ್, ಜಗದೀಶ್ ಇನ್ನಿತರರನ್ನು ಕಾಣಬಹುದು.

ಮೈಸೂರು ಜಿಲ್ಲಾ ಕಾಂಗ್ರೆಸ್ ಎಸ್‌ಸಿ ಘಟಕ ಪುನರ್‌ರಚನೆಗೆ ನಿರ್ಧಾರ

ಮೈಸೂರು, ನ.6–ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನ ಅವರ ಸೂಚನೆ ಮೇರೆಗೆ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ (ಪರಿಶಿಷ್ಟ ಜಾತಿ ವಿಭಾಗ)ಯ ಹಿಂದಿನ ಸಮಿತಿಯನ್ನು ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ವಿಸರ್ಜಿಸಲಾಗಿದೆ. ಪಕ್ಷ ಸಂಘಟನೆಯ ಹಿತದೃಷ್ಟಿಯಿಂದ ನೂತನ ಸಮಿತಿಯನ್ನು ಪುನರ್‌ರಚಿಸಿ, ಪಕ್ಷ ಸಂಘಟನೆಗೆ ಒತ್ತು ನೀಡಲು ತೀರ್ಮಾನಿಸಿದ್ದು, ಕಾರ್ಯಕರ್ತರು ಹಾಗೂ ಈ ಹಿಂದೆ ಜಿಲ್ಲೆ ಮತ್ತು ಬ್ಲಾಕ್ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ ಪದಾಧಿಕಾರಿಗಳು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ (ಪರಿಶಿಷ್ಟ ಜಾತಿ ವಿಭಾಗ) ಅಧ್ಯಕ್ಷ ಕೆ.ಎಸ್.ಸಿದ್ದರಾಜು ಅವರನ್ನು ಮೊ ಸಂಖ್ಯೆ: 9448766745 ಮೂಲಕ ಸಂಪರ್ಕಿಸಬಹುದು.

ಮರಕ್ಕೆ ಬೈಕ್ ಡಿಕ್ಕಿ: ಯುವಕ ಸಾವು

ಬೆಟ್ಟದಪುರ, ನ.6– ಮರಕ್ಕೆ ಬೈಕ್ ಡಿಕ್ಕಿ ಹೊಡೆದು ಯುವಕ ಸಾವನ್ನಪ್ಪಿದ ಘಟನೆ ಪಿರಿಯಾಪಟ್ಟಣ ತಾಲೂಕು ಗೊರಹಳ್ಳಿ– ಚಪ್ಪರದಹಳ್ಳಿ ಮುಖ್ಯರಸ್ತೆಯ ಕಾಡು ಬಸವೇಶ್ವರ ದೇವಸ್ಥಾನದ ಬಳಿ ಸಂಭವಿಸಿದೆ.

ಚಪ್ಪರದಹಳ್ಳಿ ಗ್ರಾಮದ ಸಿ.ವಿ.ಮನುಕುಮಾರ್ (24) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಈತ ಬೆಟ್ಟದಪುರದಿಂದ ಚಪ್ಪರದಹಳ್ಳಿಗೆ ತಮ್ಮ ಸಂಬಂಧಿಕ ಕೆ.ಸಿ. ತಾರೇಶ್ ಎಂಬಾತನೊಂದಿಗೆ ಪ್ಲಾಟೀನ ಬೈಕ್(ಕೆಎ–09, ಕ್ಯೂ.5872) ನಲ್ಲಿ ನ.2ರಂದು ರಾತ್ರಿ ಬರುತ್ತಿದ್ದಾಗ ಕಾಡು ಬಸವೇಶ್ವರ ದೇವಸ್ಥಾನದ ಬಳಿ ಬೈಕ್ ಚಾಲನೆ ಮಾಡುತ್ತಿದ್ದ ತಾರೇಶ್‌ನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ ಹಿಂಬದಿ ಸವಾರ ಮನುಕುಮಾರ್ ಸಾವನ್ನಪ್ಪಿದ್ದು, ತಾರೇಶ್ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಸಂಬಂಧ ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ ಅಂಚೆ ನೌಕರರ ರಾಷ್ಟ್ರೀಯ ಸಮಾವೇಶ

ಲಾಭದಾಯಕ ಸಂಸ್ಥೆಗಳನ್ನು ಖಾಸಗೀಕರಣ ಮಾಡದಂತೆ ರಕ್ಷಿಸಬೇಕು

ಸಿಐಟಿಯು ರಾಷ್ಟ್ರೀಯ ಕಾ. ಕೆ.ಎನ್.ಉಮೇಶ್ ಸಲಹೆ



ಮೈಸೂರಿನ ಗೋವಿಂದರಾವ್ ಮೆಮೋರಿಯಲ್ ಸಭಾಂಗಣದಲ್ಲಿ ಭಾನುವಾರ ರಾಷ್ಟ್ರೀಯ ಅಂಚೆ ನೌಕರರ ಒಕ್ಕೂಟ ಆಯೋಜಿಸಿದ್ದ ಅಂಚೆ ನೌಕರರ 12ನೇ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ, ಕಾ.ಕೆ.ಎನ್.ಉಮೇಶ್ ಮಾತನಾಡಿದರು.

ಮೈಸೂರು,ನ.6(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ದೇಶದ ಸಂಪತ್ತು ಕೆಲವೇ ಕೆಲವರ ಕೈವಶವಾಗುತ್ತಿದ್ದು, ಲಾಭದಾಯಕ ಸಂಸ್ಥೆಗಳನ್ನು ಖಾಸಗೀಕರಣ ಮಾಡದಂತೆ ರಕ್ಷಿಸಿಕೊಳ್ಳಬೇಕು ಎಂದು ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಕಾ. ಕೆ.ಎನ್.ಉಮೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಗೋವಿಂದರಾವ್ ಮೆಮೋರಿಯಲ್ ಸಭಾಂಗಣದಲ್ಲಿ ರಾಷ್ಟ್ರೀಯ ಅಂಚೆ ನೌಕರರ ಒಕ್ಕೂಟ ಆಯೋಜಿಸಿದ್ದ ಅಂಚೆ ನೌಕರರ 12ನೇ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ದೇಶದಲ್ಲಿ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರದ ಅಧೀನದಲ್ಲಿದ್ದ ಲಾಭದಾಯಕ ಸಂಸ್ಥೆಗಳನ್ನು ಖಾಸಗೀಕರಣ ಮಾಡುವಂತಹ ಸಂಚು ನಡೆಯುತ್ತಿದೆ. ಅದರ ಫಲವಾಗಿ ಕೆಲವು ಸಂಸ್ಥೆಗಳು ಈಗಾಗಲೇ ಮುಚ್ಚಲ್ಪಟ್ಟಿವೆ. ಹೆಚ್‌ಎಂಟಿ ಹಾಗೂ ಎಸ್‌ಬಿಎಂ ಕೇಂದ್ರ ಸರ್ಕಾರ ದುರಾಡಳಿತ ಹಾಗೂ ಖಾಸಗಿಕರಣದ ನೀತಿಯಿಂದಾಗಿ ಮುಚ್ಚಲ್ಪಟ್ಟಿವೆ. ಇದೀಗ ಅಂಚೆ ಇಲಾಖೆ ಸೇರಿದಂತೆ ಇನ್ನಿತರ ಸಂಸ್ಥೆಗಳ ಮೇಲೆ ಕೇಂದ್ರ ಸರ್ಕಾರದ ಕೆಂಗಣ್ಣು ಬೀರಿದೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ಬಡ ಜನರು ಹಾಗೂ ಕಾರ್ಮಿಕ ವರ್ಗದ ಹಿತ ಕಾಯಲು ಮುಂದಾಗದೇ ಬಂಡವಾಳಶಾಹಿಗಳು ಹಾಗೂ ಮಲ್ಟಿ ನ್ಯಾಷನಲ್ ಕಂಪನಿಗಳ ದಾಸರಂತೆ ವರ್ತಿಸುತ್ತಿದೆ. ಇದರಿಂದಾಗಿ ದೇಶದ ಸಂಪತ್ತು ಕೆಲವೇ ಕೆಲವರ ಕೈ ಸೇರುತ್ತಿದೆ. ಈ ಕಾರಣದಿಂದ ದೇಶದ ಜನರ ಸ್ಥಿತಿ ಇನ್ನೂ ಶೋಚನೀಯ ಸ್ಥಿತಿಯಲ್ಲಿಯೇ ಇದೆ. ಬಡವರು, ರೈತರು, ಕಾರ್ಮಿಕ ವರ್ಗ, ಕೂಲಿಕಾರ್ಮಿಕರು, ಶೋಷಿತ ಸಮುದಾಯಗಳು ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗದೆ ಪರಿತಪಿಸುವಂತಾಗಿದೆ. ಖಾಸಗೀಕರಣಕ್ಕೆ ನೀಡುತ್ತಿರುವ ಆಸಕ್ತಿ ಕೇಂದ್ರ ಸರ್ಕಾರದ ಒಡೆತನದ ಸಂಸ್ಥೆಗಳ ಸುಧಾರಣೆಗೆ ನೀಡುತ್ತಿಲ್ಲ. ಖಾಸಗೀಕರಣ ಹುನ್ನಾರಕ್ಕೆ ಬ್ರೇಕ್ ಬೀಳದೇ ಇದ್ದರೆ ಮೀಸಲಾತಿ ಸೌಲಭ್ಯವೂ ಮರೀಚಿಕೆಯಾಗಲಿದೆ ಎಂದು ವಿಷಾದಿಸಿದರು.

ಖಾಸಗೀಕರಣದೊಂದಿಗೆ ಕೋಮುವಾದವನ್ನೂ ಬಿಂಬಿಸಲಾಗುತ್ತಿದೆ. ಇದರಿಂದ ಒಂದು ವರ್ಗ ಖಾಸಗೀಕರಣವನ್ನು ವಿರೋಧಿಸಲು ಹಿಂದೇಟು ಹಾಕುತ್ತಿದೆ. ಕೇಂದ್ರ ಸರ್ಕಾರ ಮಾಡಿದ್ದೇ ಸರಿ ಎಂದು ಪ್ರತಿಪಾದಿಸಲು ತಂಡವೊಂದು ಕಾರ್ಯನಿರತವಾಗಿದೆ. ಇದನ್ನು ಕಾರ್ಮಿಕ ವರ್ಗ ಸೂಕ್ಷ್ಮವಾಗಿ ಗಮನಿಸಬೇಕು. ಖಾಸಗೀಕರಣವನ್ನು ಪ್ರಬಲವಾಗಿ ವಿರೋಧಿಸಬೇಕು. ಅಂಚೆ ಇಲಾಖೆ ದೇಶದ ಆಸ್ತಿ. ಅದನ್ನು ಉಳಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಇದೆ. ಅಂಚೆ ಇಲಾಖೆ ನೌಕರರು ಕೇಂದ್ರ ಸರ್ಕಾರದ ಅವೈಜ್ಞಾನಿಕ ಕ್ರಮ, ಖಾಸಗೀಕರಣದ ಹುನ್ನಾರವನ್ನು ಖಂಡಿಸಬೇಕು. ದೇಶದ ಜನರೂ ಕೂಡ ಅಂಚೆ ಇಲಾಖೆ ಉಳಿಸಿಕೊಳ್ಳುವುದಾಗಿ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೃಷಿ ಚಟುವಟಿಕೆಯನ್ನು ಹತ್ತಿಕ್ಕಲು ಮೂರು ಕಾಯ್ದೆಗಳಿಗೆ ತಿದ್ದುಪಡಿ ತಂದು, ರೈತರನ್ನು ಶೋಷಣೆ ಮಾಡಲು ಮುಂದಾಗಿತ್ತು. ರೈತರಿಗೆ ಮರಣ ಶಾಸನವಾಗಿ ಮಾರ್ಪಟ್ಟಿದ್ದ ತಿದ್ದುಪಡಿ ಕಾಯ್ದೆ ಅನುಷ್ಠಾನಗೊಳಿಸದಂತೆ ದೇಶದಾದ್ಯಂತ ವ್ಯಾಪಕ ಹೋರಾಟ ನಡೆದವು. ದೆಹಲಿ ಗಡಿ ಭಾಗದಲ್ಲಿ ಒಂದು ವರ್ಷ ನಿರಂತರವಾಗಿ ರೈತ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಅಹೋರಾತ್ರಿ ನಡೆದ ಪ್ರತಿಭಟನೆ ವೇಳೆ ಚಳಿ, ಗಾಳಿ, ಮಳೆಯಿಂದಾಗಿ 800ಕ್ಕೂ ಹೆಚ್ಚು ರೈತರು ಪ್ರತಿಭಟನಾ ಸ್ಥಳದಲ್ಲೇ ಜೀವ ತೆತ್ತಿದ್ದಾರೆ. ಈ ರೈತರ ತ್ಯಾಗಬಲಿದಾನದಿಂದ ಕೇಂದ್ರ ಸರ್ಕಾರ ಒಂದು ವರ್ಷದ ನಂತರ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯಿತು. ಹೋರಾಟಗಳು ಗಟ್ಟಿಗೊಂಡರೆ ಯಶಸ್ಸು ಸಾಧಿಸಬಹುದೆಂದು ರೈತರು ನಡೆಸಿದ ಹೋರಾಟವೇ ಸಾಕ್ಷಿ ಎಂದರು.

ದೇಶದಲ್ಲಿ ಜನ ಸರ್ಕಾರದ ದುರಾಡಳಿತ, ಬೆಲೆ ಏರಿಕೆ ಸೇರಿದಂತೆ ಇನ್ನಿತರ ಸಮಸ್ಯೆಗಳಿಂದ ತತ್ತರಿಸುತ್ತಿದ್ದ ಸಂದರ್ಭದಲ್ಲಿ ಜನರ ಮನಸ್ಸನ್ನು ಬೇರೆಡೆ ಸೆಳೆಯುವ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಹಿಜಾಬ್ ವಿವಾದ ಸೃಷ್ಟಿಸಲಾಯಿತು. ಈ ವಿವಾದ ಬೇಕಂತಲೇ ಸೃಷ್ಟಿಸಲಾಯಿತು. ಇದರಿಂದ ಸಮಾಜಕ್ಕೆ, ಜನರಿಗೆ ಯಾವುದೇ ಪ್ರಯೋಜನವಿರಲ್ಲಿಲ್ಲ. ಯಾರ್ಯಾರಿಗೆ ಯಾವ ಉಡುಪು ಧರಿಸಲು ಇಷ್ಟವಿದಂತೆ ಬಿಡಬೇಕು. ಹಿಜಾಬ್ ಧರಿಸಬಾರದು ಎಂದು ಬಲವಂತವಾಗಿ ಹೇಳುವುದು ಸರಿಯಲ್ಲ. ಹಿಜಾಬ್ ವಿವಾದ ಕೊನೆಗೊಂಡ ಬಳಿಕ ಹಲಾಲ್ ಕಟ್ ವಿವಾದ ಮುನ್ನೆಲೆಗೆ ಬಂದಿತು. ಹಲಾಲ್ ಕಟ್, ಜಟ್ಕಾ ಕಟ್ ವಿವಾದದಿಂದ ಸಮಾಜಕ್ಕೆ ಏನೂ ಉಪಯೋಗವಾಗಲಿಲ್ಲ. ಜನರು ಅವರ ಹಣದಿಂದ ಯಾವುದನ್ನು ಖರೀದಿಸಬೇಕು ಎಂದು ನಿರ್ಧರಿಸುತ್ತಾರೆ. ಅದನ್ನು ಬಿಟ್ಟು ಎಲ್ಲದರಲ್ಲೂ ನಿಯಮ ಹೇರುವುದು ಎಷ್ಟು ಸರಿ ಎಂದು ಕಿಡಿಕಾರಿದರು. ಸಮಾವೇಶದಲ್ಲಿ ನ್ಯಾಷನಲ್ ಫೆಡರೇಷನ್ ಆಫ್ ಪೋಸ್ಟಲ್ ಎಂಪ್ಲಾಯೀಸ್ ಕಾರ್ಯಾಧ್ಯಕ್ಷ ಕಾ.ಯು.ಕೆ. ತಿವಾರಿ, ಅಂಚೆ ಇಲಾಖೆಯ ಕರ್ನಾಟಕ ವಲಯ ಸಿಪಿಎಂಜಿ ಎಸ್.ರಾಜೇಂದ್ರ ಕುಮಾರ್, ಸಿಓಸಿ ಸೆಕ್ರೆಟರಿ ಜನರಲ್ ಕಾಂ. ಆರ್.ಎನ್.ಪರಶರ್, ಮುಖಂಡರಾದ ಕಾ.ಸಿ.ಸಿ.ಪಿಳ್ಳೈ, ಕಾಂ.ಕೆ.ರಾಘವೇಂದ್ರನ್, ಕಾ.ತಪನ್ ಬೌಮಿಕ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

> **ಸಂಸತ್‌ಗೆ ಮುತ್ತಿಗೆ**
> ದೇಶದ ಬಡ ಜನರು, ರೈತರು, ಕಾರ್ಮಿಕರು, ಕೃಷಿ ಕಾರ್ಮಿಕರ ಹಿತ ಕಾಯಲು ಹಾಗೂ ಖಾಸಗೀಕರಣ ವಿರೋಧಿಸಿ ಸಿಐಟಿಯು ವತಿಯಿಂದ ಜ.30ರಂದು ಸಂಸತ್‌ಗೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ. ಈ ಹೋರಾಟದಲ್ಲಿ ಮಜ್ದೂರ್ ಸಂಘಟನೆಗಳು ಪಾಲ್ಗೊಳ್ಳುತ್ತಿವೆ. ಅಂಚೆ ನೌಕರರ ಸಂಘವೂ ಬೆಂಬಲ ನೀಡಬೇಕು. ಈ ಬಾರಿ ಮಜ್ದೂರ್ ಯೂನಿಯನ್‌ಗಳ ಶಕ್ತಿ ಏನು ಎಂದು ತೋರಿಸಲು ಸಿದ್ಧವಿದ್ದೇವೆ. **–ಕಾ.ಕೆ.ಎನ್.ಉಮೇಶ್**



ಬಿಜೆಪಿ ರಾಜ್ಯ ಉಪಾಧ್ಯಕ್ಷರೂ ಆದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಯಡಿಯೂರಪ್ಪ ಅವರನ್ನು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿಯಾಗಿ ಹುಟ್ಟುಹಬ್ಬದ ಶುಭ ಕೋರಲಾಯಿತು. ಚಿತ್ರದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೈಮುಲ್ ನಿರ್ದೇಶಕ ಎಸ್.ಸಿ.ಅಶೋಕ್, ಕವಿಕ ನಿಗಮದ ನಿಕಟಪೂರ್ವ ಅಧ್ಯಕ್ಷ ತಮ್ಮೇಶ್‌ಗೌಡ, ಬಿಜೆಪಿ ಮುಖಂಡರಾದ ರೆಡ್ಡಿ, ಡಾ.ಬಾಬು ಇನ್ನಿತರರಿದ್ದಾರೆ.

ನಾಳೆ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಹೋರಾಡಿದ ಸ್ವಾಮೀಜಿಗಳಿಗೆ ಅಭಿನಂದನೆ

ಮೈಸೂರು,ನ.6(ಎಂಟಿವೈ)– ಎಸ್‌ಸಿ, ಎಸ್‌ಟಿ ಸಮುದಾಯಗಳ ಮೀಸಲಾತಿ ಹೆಚ್ಚಳಕ್ಕೆ ಹೋರಾಟ ನಡೆಸಿದ ಸ್ವಾಮೀಜಿಗಳಿಗೆ ನ.8ರಂದು ಬೆಳಗ್ಗೆ 10.30ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಅಭಿನಂದನಾ ಸಮಾರಂಭ ಹಾಗೂ ಚಿಂತನ–ಮಂಥನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಸ್ವಾಭಿಮಾನಿ ಎಸ್‌ಸಿ, ಎಸ್‌ಟಿ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಮಿತಿ ವತಿಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಎಸ್‌ಸಿ, ಎಸ್‌ಟಿ ಸಮುದಾಯದ ಸಂವಿಧಾನಬದ್ಧ ಮೀಸಲಾತಿ ಹೆಚ್ಚಳಕ್ಕಾಗಿ 365 ಕಿಮೀ ಪಾದಯಾತ್ರೆ ಮಾಡಿದ ಬಳಿಕ ಸರ್ಕಾರ ಜಗ್ಗದ ಕಾರಣ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 257 ದಿನಗಳ ಧರಣಿ ನಡೆಸಿದ ಪ್ರಸನ್ನಾನಂದಪುರಿ ಸ್ವಾಮೀಜಿ ಹಾಗೂ ಜ್ಞಾನಪ್ರಕಾಶ ಸ್ವಾಮೀಜಿ ಅವರನ್ನು ಅಭಿನಂದಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸಮುದಾಯದ ಇತರೆ ಸ್ವಾಮೀಜಿಗಳನ್ನು ಸಹಾ ಸನ್ಮಾನಿಸಲಾಗುವುದು. ಅಲ್ಲದೆ, ಚಿಂತನ–ಮಂಥನ ವಿಚಾರ ಸಂಕಿರಣ ನಡೆಯಲಿದೆ. ಸಮುದಾಯದ ಚಿಂತಕರು, ಸಾಹಿತಿಗಳು, ಹೋರಾಟಗಾರರು ಪಾಲ್ಗೊಳ್ಳಲಿದ್ದಾರೆ. ಆದ್ದರಿಂದ ಜಿಲ್ಲೆಯ ಎಸ್‌ಸಿ, ಎಸ್‌ಟಿ ಸಮುದಾಯದ ಎಲ್ಲ ಜನಪ್ರತಿನಿಧಿಗಳು, ಸಂಘ ಸಂಸ್ಥೆ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಸ್ವಾಭಿಮಾನಿ ಎಸ್‌ಸಿ, ಎಸ್‌ಟಿ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಮಿತಿ ಅಧ್ಯಕ್ಷ ದ್ಯಾವಪ್ಪನಾಯಕ, ಪದಾಧಿಕಾರಿಗಳಾದ ಪ್ರಭಾಕರ್ ಹುಣಸೂರು, ಕೆಂಪನಾಯಕ, ತುಂಬಲ ರಾಮಣ್ಣ, ಶಿವಕುಮಾರ್ ಉಪಸ್ಥಿತರಿದ್ದರು.


ನಾಳೆ ಗ್ರಹಣ: ಚಾಮುಂಡಿಬೆಟ್ಟದಲ್ಲಿ ದರ್ಶನ ವ್ಯವಸ್ಥೆ ಇಲ್ಲ

ಮೈಸೂರು, ನ.6– ರಾಹುಗ್ರಸ್ತ ಗ್ರಸ್ತೋದಯ ಚಂದ್ರಗ್ರಹಣದ ಕಾರಣ ನವೆಂಬರ್ 8ರಂದು ಮಧ್ಯಾಹ್ನ 1ರಿಂದ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದರ್ಶನಕ್ಕೆ ಅವಕಾಶವಿರುವುದಿಲ್ಲ. ಬೆಳಗ್ಗೆಯಿಂದ ಮಧ್ಯಾಹ್ನ 1ರವರೆಗೂ ದೇವಸ್ಥಾನ ತೆರೆದಿರುತ್ತದೆ. ಅಲ್ಲಿಯವರೆಗೂ ಭಕ್ತಾದಿಗಳು ದೇವಿ ದರ್ಶನ ಪಡೆಯಬಹುದು. ಗ್ರಹಣ ಕಾಲ ಅಂದರೆ ಮಧ್ಯಾಹ್ನ 1ರಿಂದ ಯಾವುದೇ ಪೂಜೆ ಮತ್ತು ದರ್ಶನ ಇರುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯೋಗ ತರಗತಿ

ಮೈಸೂರು, ನ.6–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಪ್ರತಿದಿನ 7ರಿಂದ 8 ರವರೆಗೆ ಯೋಗ ತರಬೇತಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448253424, 9916483919 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.11.2022 ಸೋಮವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ : ರೇವತಿ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ, ಗಿರಿಜಾ ಕಲ್ಯಾಣ, ಏಕದಶಾವಾರ ರುದ್ರಾಭಿಷೇಕ, ಶ್ರೀ ವೀರಭದ್ರೇಶ್ವರಸ್ವಾಮಿ, ಶ್ರೀ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ, ಬೆಳಗ್ಗೆ 7 ಗಂಟೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಪೀಡಿತರಿಗೆ ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಲಲಿತ ಮಹಲ್ ಹೆಲಿಪ್ಯಾಡ್ ಬಳಿ, ಆಲನಹಳ್ಳಿ, ಬೆಳಗ್ಗೆಯಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಮಲಬಾರ್ ಚಾರಿಟೇಬಲ್ ಟ್ರಸ್ಟ್ :** ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ರಾಜವಂಶಸ್ಥ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಫಿಲ್ಸರ್ ಬಾಬು, ಡಿ.ಆರ್. ಗಿರಿಧರ್ ರಾವ್, ಶರಮದ್ದೀನ್, ಸ್ಥಳ: ಕಲಾಮಂದಿರ, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ (ಮೈಸೂರು), ಶ್ರೀ ಜಯತೀರ್ಥ ಪಬ್ಲಿಕೇಷನ್ಸ್ (ಬೆಂಗಳೂರು):** ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಬರೆದಿರುವ ಐದು ದಶಕ ಕಂಡ ಜಗತ್ತಿನ ಏಕೈಕ ಸಂಸ್ಕೃತ ದಿನಪತ್ರಿಕೆ 'ಸುಧರ್ಮಾ' ಕೃತಿ ಬಿಡುಗಡೆ, ಕೃತಿ ಬಿಡುಗಡೆ: ಹಿರಿಯ ಪತ್ರಕರ್ತ ಶ್ರೀಶ, ಕೃತಿ ಕುರಿತು: ಹಿರಿಯ ಪತ್ರಕರ್ತ ಕಂ.ಕ.ಮೂರ್ತಿ ಅಧ್ಯಕ್ಷತೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ರವಿಕುಮಾರ್, ಉಪಸ್ಥಿತರು: 'ಸುಧರ್ಮಾ' ದಿನಪತ್ರಿಕೆ ಸಂಪಾದಕಿ ಶ್ರೀಮತಿ ಜಯಲಕ್ಷ್ಮೀ, ಹಿರಿಯ ಪತ್ರಕರ್ತ ಡಾ. ಕೂಡ್ಲಿ ಗುರುರಾಜ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ಅಥರ್ವ ಮಲ್ಟಿಸ್ಪೆಷಾಲಿಟಿ ಆಯುರ್ವೇದಿಕ್ ಮತ್ತು ಹೀಲಿಂಗ್ ಸೆಂಟರ್ :** ಕ್ಯಾನ್ಸರ್ ತಡೆಗೆ ಕೆಲವು ಮುನ್ನೆಚ್ಚರಿಕೆಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಆಯುಷ್ ಇಲಾಖೆಯ ಡಿಎಓ ಡಾ. ಪುಷ್ಪಾ, ಮುಖ್ಯ ಅತಿಥಿ: ಡಾ. ದಯಾನಂದ, ಸ್ಥಳ: ನಂ. 112, 8ನೇ ಮೇನ್, ಬಿ.ಎಂ. ಆಸ್ಪತ್ರೆ ಬಳಿ, ಜಯಲಕ್ಷ್ಮೀಪುರಂ, ಬೆಳಗ್ಗೆ 11 ಗಂಟೆಗೆ.

■ **ಓಟಿಕೇರ್ (ಸ್ಪೀಚ್–ಲಾಂಗ್ವೇಜ್ ಅಂಡ್ ಹಿಯರಿಂಗ್ ಕ್ಲಿನಿಕ್) :** ಉಚಿತ ಶ್ರವಣ ದೋಷ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಾನುಜ ರಸ್ತೆ, ಬೆಳಗ್ಗೆ 11 ಗಂಟೆಯಿಂದ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, ಶ್ರೀ ಗಣಪತಿ ರಥ, ಶ್ರೀ ಪಾರ್ವತಿ ಪರಮೇಶ್ವರ ರಥ, ವೀರಾಂಜನೇಯ ರಥ, ಶ್ರೀ ಶನೇಶ್ವರಸ್ವಾಮಿ ರಥ, ಶ್ರೀ ಮಲೆ ಮಹದೇಶ್ವರಸ್ವಾಮಿ ಸುವರ್ಣ ಕೊಳಗ ಮಹಾರಥಗಳ ಪಂಚ ಮಹಾರಥ ಉತ್ಸವ, ಸ್ಥಳ: ದೇವಸ್ಥಾನ, ಗರಡಿಕೇರಿ, ಲಷ್ಕರ್ ಮೊಹಲ್ಲಾ, ಬೆಳಗ್ಗೆಯಿಂದ.

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

■ **ಶ್ರೀ ಕೃಷ್ಣ ಗಾನಸಭಾ :** ಕೊಳಲು ಮಾಂತ್ರಿಕ ಟಿ.ಆರ್. ಮಹಾಲಿಂಗಂರವರ 97ನೇ ಜನ್ಮ ದಿನೋತ್ಸವದ ಅಂಗವಾಗಿ ಕೊಳಲು ವಾದನ, ದ್ವಂದ್ವ ಕೊಳಲು: ವಿದ್ವಾನ್ ಡಾ. ಸಿ.ಎ. ಶ್ರೀಧರ, ವಿದ್ವಾನ್ ಸಿ.ಎಸ್. ಕೇಶವಚಂದ್ರ, ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ–ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಭವನ, ಸಂಜೆ 6 ಗಂಟೆಗೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಡಾ. ಪ್ರಭಾಕರ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ: ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ–ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಅಮೃತಾ ನಿತಿನ್ ಶಾಸ್ತ್ರಿ, ಎಂ. ರಾಘವೇಂದ್ರ, ವ್ಯಾಖ್ಯಾನ– ಕೆ.ಎಲ್.ಪದ್ಮಿನಿ ಹೆಗಡೆ, 9.00 ಕನ್ನಡ ಕಜ್ಜಾಯ, 10.00 ಲಯ ಸಂಭ್ರಮ, ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ 'ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಶಿವ ಶರಣರ ಕೊಡುಗೆ' ರಚನೆ ಹಾಗೂ ನಿರೂಪಣೆ–ಡಾ.ಜ್ಯೋತಿ ಶಂಕರ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ, 10.30 ನಮ್ಮ ಆರೋಗ್ಯ: ಕಾರ್ನಿಯಲ್ ಟ್ರಾನ್ಸ್ ಪ್ಲಾಂಟೇಶನ್– ಡಾ. ಪಿ. ಚಂದ್ರಕಲಾ ಅವರೊಂದಿಗೆ ಮಾತುಕತೆ. **ಮಧ್ಯಾಹ್ನ:** 12.30 ದೇವರನಾಮ– ಶಂಕರ್ ಶ್ಯಾನುಭಾಗ್, ಬಾಂಬೆ ಸಹೋದರಿಯರು, 12.45 ನಮ್ಮ ಆರೋಗ್ಯ ಕಾರ್ಯಕ್ರಮ ಕಾರ್ನಿಯಲ್ ಟ್ರಾನ್ಸ್ ಪ್ಲಾಂಟೇಶನ್– ಡಾ. ಪಿ. ಚಂದ್ರಕಲಾ ಅವರೊಂದಿಗೆ ಮಾತುಕತೆ, 1.20 ಭಾವಗೀತೆ–ವೃಂದಗಾನ. 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್.

ಸಂಜೆ: 4.00 ಮಹಿಳಾರಂಗ: ಡಾಕ್ಟರ್ ಸಮಯ: ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ– ತೂಕ ಇಳಿಸಲು ಸುಲಭ ಉಪಾಯಗಳು, ಭಾಗವಹಿಸುವವರು: ಡಾ. ಅಮೂಲ್ಯ ಟಿ.ಎಂ., ಪ್ರಸ್ತುತಿ– ಕೆ.ಬಿ. ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ– ಮಿಶ್ರ ಕೃಷಿಯಲ್ಲಿ ಆರ್ಥಿಕ ಅಭಿವೃದ್ಧಿ ಕುರಿತು ಮಂಜೇಗೌಡ ಅವರೊಡನೆ ಸಂದರ್ಶನ.

ರಾತ್ರಿ: 9.30 'ನೆಲ ಮೂಲ': ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಕಾರ್ಯಕ್ರಮ. ರಚನೆ– ಡಾ. ಪಿ.ಕೆ. ರಾಜಶೇಖರ್, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು.

ಸಾಂಸ್ಕೃತಿಕ ಉತ್ಸವ ಭಾರತೀಯ ಹಬ್ಬಗಳು ಕಾರ್ಯಕ್ರಮ

ನವೆಂಬರ್ 7



■ **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು:** 'ಲಯ ಮಿಲನ್' ಶೀರ್ಷಿಕೆಯಡಿ ವಿದ್ವಾನ್ ಬಿ.ಸಿ. ಮಂಜುನಾಥ್ ನಿರ್ದೇಶನದಲ್ಲಿ ವಾದ್ಯ ಸಂಗೀತ ಕಾರ್ಯಕ್ರಮ. ಕೊಳಲು: ಎಲ್.ವಿ.ಮುಕುಂದ್, ಪಿಟೀಲು: ಜೆ.ಕೆ.ಶ್ರೀಧರ್, ಮೃದಂಗ: ಬಿ.ಸಿ.ಮಂಜುನಾಥ್, ಖಂಜಿರ: ಎ.ಎಸ್.ಎನ್.ಸ್ವಾಮಿ, ಘಟಂ: ಎಸ್.ಎನ್.ನಾರಾಯಣಮೂರ್ತಿ, ಮೋರ್ಚಿಂಗ್: ಭಾಗ್ಯಲಕ್ಷ್ಮಿ ಎಂ.ಕೃಷ್ಣ, ಧೋಲಕ್: ವಿ.ಶ್ರೀಧರ, ತಬಲಾ: ಉದಯರಾಜ್ ಕರ್ಪೂರ್, ಚಂಡೆ: ಹರ್ಷ ಸಾಮಗ, ಡ್ರಮ್ಸ್: ಕಾರ್ತಿಕ್ ಮಣಿ, ಕೊನ್ನಕೋಲ್: ಸೋಮಶೇಖರ್ ಜೋಯಿಸ್. ಸಂಜೆ 6ಕ್ಕೆ

ನಾಳೆ ಸಾಮಾಜಿಕ ಸೇವೆಗಳೊಂದಿಗೆ ಜಿ.ಮಂಜುಗೌಡ ಹುಟ್ಟುಹಬ್ಬ ಆಚರಣೆ

ಮೈಸೂರು, ನ.6– ಮೈಸೂರು ನಗರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಹಾಗೂ ಉದ್ಯಮಿ ಜಿ. ಮಂಜುಗೌಡ ಅವರ 50ನೇ ಹುಟ್ಟುಹಬ್ಬದ ಅಂಗವಾಗಿ ನಗರದ ವಿವಿಧೆಡೆ ನ.8ರಂದು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ



ಬೆಳಿಗ್ಗೆ 8.30ಕೆ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ, ಬೆಳಿಗ್ಗೆ 10ಕ್ಕೆ ಆದಿಚುಂಚನಗಿರಿ ಮೈಸೂರು ಶಾಖಾ ಮಠಕ್ಕೆ ಭೇಟಿ ನೀಡಿ ಸ್ವಾಮೀಜಿಗಳಿಂದ ಆಶೀರ್ವಾದ ಪಡೆಯಲಿದ್ದಾರೆ, ಬೆಳಿಗ್ಗೆ 11 ಗಂಟೆಗೆ ಅಶ್ವಿನಿಗೋಲ್ಡ್ ಕಂಪನಿ ಕಚೇರಿ ಮುಂಭಾಗ ಪೌರಕಾರ್ಮಿಕರಿಗೆ ಮತ್ತು ಬಡ ಜನರಿಗೆ ಬಟ್ಟೆ ಮತ್ತು ಮತ್ತು ಸೀರೆ ಹಾಗೂ ಸಿಹಿ ವಿತರಣೆ, ಮಧ್ಯಾಹ್ನ 12 ಗಂಟೆಗೆ ಟಿ.ಕೆ.ಲೇಔಟ್‌ನಲ್ಲಿರುವ ಪುಟ್ಟೀರಮ್ಮ ವಿಶೇಷ ಮಕ್ಕಳ ಶಾಲೆಯಲ್ಲಿ ನಮವಸ್ತ್ರ ಮತ್ತು ಹಣ್ಣು ಹಾಗೂ ಸಿಹಿ ವಿತರಣೆ, ಭಾಗ್ಯಸಾಗರ ಎಜುಕೇಶನಲ್ ಟ್ರಸ್ಟ್ ವತಿಯಿಂದ ಮಧ್ಯಾಹ್ನ 1ಕ್ಕೆ ಬನ್ನಿ ಮಂಟಪದಲ್ಲಿರುವ ಸಾಯಿರಂಗ ವಿಶೇಷ ಮಕ್ಕಳ ಶಾಲೆಯಲ್ಲಿ ಮಧ್ಯಾಹ್ನದ ಊಟ ಹಾಗೂ ಸಿಹಿ ಮತ್ತು ಹಣ್ಣುಗಳ ವಿತರಣೆ, ಮಧ್ಯಾಹ್ನ 3ಕ್ಕೆ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಕರ್ತವ್ಯ ನಿರ್ವಹಿಸುವ ಪೌರಕಾರ್ಮಿಕರಿಗೆ, ತೋಟಗಾರಿಕೆ ಕಾರ್ಮಿಕರಿಗೆ, ಹಾಗೂ ಭದ್ರತಾ ಸಿಬ್ಬಂದಿಗಳಿಗೆ ಮಳಿಗೆದಾರರ ವತಿಯಿಂದ ಸೀರೆ ಮತ್ತು ಬಟ್ಟೆ ಹಾಗೂ ಸಿಹಿ ವಿತರಣೆ, ಸಂಜೆ 5ಕ್ಕೆ ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಸೀರೆ ಹಾಗೂ ಸಿಹಿ ವಿತರಣೆ, ಮಳಿಗೆದಾರರು ಹಾಗೂ ಜಿ ಮಂಜುಗೌಡ ಸ್ನೇಹಿತರ ವತಿಯಿಂದ ರಾತ್ರಿ 9ಕ್ಕೆ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಮಂಜು ಗೌಡರವರಿಗೆ ಸನ್ಮಾನಿಸಿ ಬೃಹತ್ ಗಾತ್ರದ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಣೆ ಹಾಗೂ ಭೋಜನ ವ್ಯವಸ್ಥೆ ಮಾಡಲಾಗಿದೆ ಎಂದು ಕಾರ್ಯಕ್ರಮಗಳ ವಿವರವನ್ನು ಭಾಗ್ಯಸಾಗರ ಎಜುಕೇಶನಲ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಸಾಗರ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಚಲನಚಿತ್ರ ನಿರ್ಮಾಪಕರು ಹಾಗೂ ಉದ್ಯಮಿಗಳೂ ಆದ ಸಂದೇಶ್ ಅವರನ್ನು ಫರ್ವೀಜ್, ಬಸವರಾಜು, ರವಿಕುಮಾರ್, ವಿಶ್ವಾಸ್, ದರ್ಶನ್ ಹಾಗೂ ಶಿವಪ್ರಕಾಶ್ ಅಭಿನಂದಿಸಿದರು.



ನಾಡಪ್ರಭು ಕೆಂಪೇಗೌಡರ 108ಅಡಿ ಕಂಚಿನ ಪ್ರಗತಿಯ ಪ್ರತಿಮೆ ಅನಾವರಣದ ಪ್ರಯುಕ್ತ ನಾಡಿನಾದ್ಯಂತ ಪವಿತ್ರ ಮೃತ್ತಿಕೆ (ಮಣ್ಣು) ಸಂಗ್ರಹದ ಅಭಿಯಾನದ "ಕೆಂಪೇಗೌಡರ ರಾಜರಥ" ಭಾನುವಾರ ಮೈಸೂರಿನ 52 ನೇ ವಾರ್ಡಿನ ಇಟ್ಟಿಗೆಗೂಡಿಗೆ ಆಗಮಿಸಿದಾಗ ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಮಂಜು ಗೌಡರವರ ನೇತೃತ್ವದಲ್ಲಿ ಎಲ್ಲಾ ಸಮುದಾಯದ ಮುಖಂಡರಾದ ಮಹೇಶ್, ಚಂದ್ರಶೇಖರ್, ಮಾದೇವ್, ಪ್ರವೀಣ್ ಹಾಗೂ ಮೊಹಲ್ಲಾ ನಿವಾಸಿಗಳು ಅದ್ದೂರಿಯಾಗಿ ಸ್ವಾಗತಿಸಿದರು.

ಜೂಜು ಅಡ್ಡೆ ಮೇಲೆ ದಾಳಿ: ಐವರು ವಶಕ್ಕೆ

ಮೈಸೂರು, ನ.6–ಮೈಸೂರಿನ ವಿಜಯನಗರ ಪೊಲೀಸರು ಜೂಜು ಅಡ್ಡೆ ಮೇಲೆ ದಾಳಿ ನಡೆಸಿ 5 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ವಿಜಯನಗರದ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವಿಶಂಕರ್ ಅವರ ನೇತೃತ್ವದಲ್ಲಿ ಭಾನುವಾರ ಸಂಜೆ 5 ಗಂಟೆಗೆ ವಿಜಯನಗರ ನಾಲ್ಕನೇ ಹಂತದ ಎನ್‌ಪಿಎಸ್ ಶಾಲೆಯ ಹಿಂಭಾಗ ಜೂಜಾಟದಲ್ಲಿ ತೊಡಗಿದ್ದ ಐವರನ್ನು ಬಂಧಿಸಿ ಅವರಿಂದ 19 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ. ಈ ಕಾರ್ಯಚರಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ನಾರಾಯಣ್, ಸಿಬ್ಬಂದಿಗಳಾದ ಸಂಜಯ್, ಮುರಳಿಧರ್ ಮತ್ತು ಪ್ರಭಾಕರ್ ಇದ್ದರು.

ಸಚಿವ ಮಾಧುಸ್ವಾಮಿ, ಯದುವೀರ್ ಭೇಟಿ


ಮಗಳ ಮದುವೆಗೆ ಆಹ್ವಾನಿಸಿದ ಸಚಿವ

ಮೈಸೂರು, ನ.6– ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭಾನುವಾರ ಮೈಸೂರು ಅರಮನೆಯಲ್ಲಿ ಭೇಟಿ ಮಾಡಿ ತಮ್ಮ ಮಗಳ ಮದುವೆಯ ಲಗ್ನ ಪತ್ರಿಕೆ ನೀಡಿ ಆಹ್ವಾನಿಸಿದರು.



ಈ ವೇಳೆ ಉಭಯ ಕುಶಲೋಪರಿ ಮಾತುಕತೆ ನಡೆಸಿದರು. ನಂತರ ಚಿಕ್ಕನಾಯಕನಹಳ್ಳಿಯ ಬೊರನ ಕಣಿವೆ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸುವಂತೆ ಯದುವೀರ್ ಅವರನ್ನು ಆಹ್ವಾನಿಸಿದರು. ಈ ವೇಳೆ ಕಿರುತೆರೆ ಕಲಾವಿದ ದಯಾನಂದ ಸಾಗರ್ ಇತರರಿದ್ದರು.

ಅಭಿಮಾನಿಗಳನ್ನು ಗೌರವಿಸಿದರೆ ಪ್ರಶಸ್ತಿಗಳು, ಸನ್ಮಾನಗಳು ಹರಸಿ ಬರುತ್ತವೆ: ಪ್ರೊ.ಕೃಷ್ಣೇಗೌಡ




ಮೈಸೂರು, ನ.6– ಅಭಿಮಾನಿಗಳನ್ನು ಗೌರವಿಸಿದರೆ ಪ್ರಶಸ್ತಿಗಳು ಮತ್ತು ಸನ್ಮಾನಗಳು ಹರಸಿ ಬರುತ್ತವೆ ಎಂದು ಹೆಸರಾಂತ ಸಾಹಿತಿ ಪ್ರೊ. ಕೃಷ್ಣೇಗೌಡ ಹೇಳಿದರು.

ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಪುರಸ್ಕೃತರಾದ ಪ್ರಯುಕ್ತ ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಮೈಸೂರಿನ ತಮ್ಮ ಗೃಹದಲ್ಲಿ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದರು.

ಈ ನಾಡು ಕಂಡ ಹೆಸರಾಂತ ಗಾಯಕ ಸಿ. ಅಶ್ವತ್ಥ್ ಅವರು ದೊಡ್ಡ ಗಾಯಕರಾಗಿದ್ದರೂ ಬಡತನದ ಕಾರಣದಿಂದ ಯಾವುದೇ ಕಾರ್ಯಕ್ರಮಗಳಿಗೆ ಹೋಗಬೇಕಾಗಿದ್ದರೂ ಆಟೋದಲ್ಲಿ ಹೋಗುತ್ತಿದ್ದರು. ಒಂದು ಸಲ ಆಟೋದಲ್ಲಿ ಪಯಣ ಬೆಳೆಸುವಾಗ ಆಟೋ ಚಾಲಕ ಅಶ್ವತ್ಥ್ ಹಾಡಿರುವ ಶಿಶುನಾಳ ಷರೀಫರ ತರವಲ್ಲ ತಗಿ ನಿನ್ನ ತಂಬೂರಿ ಎಂಬ ಕ್ಯಾಸೆಟ್ ಹಾಕಿ ಕೇಳುತ್ತಿದ್ದರು. ಆಗ ಅವರು ಚಾಲಕನಿಗೆ ಏ(ಅಶ್ವತ್ಥ್) ಸಾಕಪ್ಪ ಆ ಹಾಡು ನಿಲ್ಲಿಸು ಕೇಳಿ ಸಾಕಾಗಿದೆ ಎನ್ನುತ್ತಾರೆ. ಇವ(ಅಶ್ವತ್ಥ್)ರು ಯಾರೆಂದು ತಿಳಿಯದ ಚಾಲಕ ಸ್ವಾಮಿ, ನಾನು ಅವ(ಅಶ್ವತ್ಥ್)ರ ಅಭಿಮಾನಿ. ಹಾಗಾಗಿ ದಿನನಿತ್ಯ ಈ ಹಾಡು ಹಾಕಿ, ಕೇಳಿದ ನಂತರ ನಾನು ಆಟೋ ಓಡಿಸುವುದು ಎಂದರಂತೆ.

ಬೇಕಾದರೆ ಆಟೋ ನಿಲ್ಲಿಸುತ್ತೇನೆ ತಾವು ಇಲ್ಲೇ ಇಳಿದುಕೊಳ್ಳಿ ಎಂದನಂತೆ. ಹೀಗೆ ಅಶ್ವತ್ಥ್ ಅವರಿಂದ ಆಟೋ ಅಶ್ವತ್ಥ್‌ರವರ ಮನೆ ತಲುಪಿದಾಗ ನಿಮ್ಮಂತಹ ಅಭಿಮಾನಿಗಳಿದ್ದರೆ ನಾವು. ಕಾರ್ಯಕ್ರಮದಲ್ಲಿ ಅಶ್ವತ್ಥ್ ಅವರಿಗೆ ಸನ್ಮಾನ ಮಾಡಿದ್ದ ಹಾರವನ್ನೇ ಹಾಕಿ ಶಾಲು ಹೊದಿಸಿ ಚಾಲಕನಿಗೆ ಗೌರವ ಸೂಚಿಸಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಈ ಸಂದರ್ಭದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ಸೇವಾದಳ ರಾಜ್ಯ ಸಂಪನ್ಮೂಲ ವ್ಯಕ್ತಿ ಕಾಶೀನಾಥ್ ಬಿ ಹಂದ್ರಾಳ, ಹಿರಿಯ ವಕೀಲ ರವಿಕುಮಾರ್, ಅಭಿಯಂತರ ಸಂತೋಷ್ ಉಪಸ್ಥಿತರಿದ್ದರು.




ಸನಾತನ ಧರ್ಮದ ಸ್ವಾರಸ್ಯ ತಿಳಿಯದೆ ಆಕ್ಷೇಪ ವ್ಯಕ್ತಪಡಿಸುವವರ ಬಗ್ಗೆ ತಿರಸ್ಕಾರ, ಸಂಕಟ

ಸಾಂಸ್ಕೃತಿಕ ಉತ್ಸವದಲ್ಲಿ ವಿದ್ವಾನ್ ಶತಾವಧಾನಿ ಡಾ.ಆರ್.ಗಣೇಶ್‌ರಿಂದ ವಿದ್ವತ್ ಪ್ರದರ್ಶನ

ಅದ್ಭುತ ಕಾರ್ಯಕ್ರಮ: ಎಸ್.ಎಲ್.ಭೈರಪ್ಪ

'ಅಷ್ಟಾವಧಾನ' ಕಾರ್ಯಕ್ರಮ ಅತ್ಯಂತ ಅದ್ಭುತವಾಗಿದ್ದು, ನಮ್ಮ ಕಲೆ–ಸಾಹಿತ್ಯ, ಸಂಸ್ಕೃತಿಗೆ ಸಂಬಂಧಪಟ್ಟಿದೆ ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ನಾಡಿನ ಪ್ರಸಿದ್ಧ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಶ್ಲಾಘಿಸಿದರು.



ಕಲಾಮಂದಿರದಲ್ಲಿ ನಡೆಯುತ್ತಿರುವ 'ಸಾಂಸ್ಕೃತಿಕ ಉತ್ಸವ'ದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸರ್ಕಾರ ಕಲಾಮಂದಿರದಂತಹ ಕಟ್ಟಡಗಳನ್ನು ಕಟ್ಟಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿಯೇ ಮೀಸಲಿಡಬೇಕು. ಆದರೆ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯನ್ನು ಸರ್ಕಾರದ ಬದಲಿಗೆ ಆಸಕ್ತಿಯುಳ್ಳ ಸಂಘ–ಸಂಸ್ಥೆಗಳು ಆಯೋಜಿಸಿ ಕಲೆ–ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ–ಬೆಳೆಸಬೇಕು.

ಶತಾವಧಾನಿ ಡಾ.ಆರ್.ಗಣೇಶ್ ಅವರಿಗೆ ಗೊತ್ತಿಲ್ಲದ ವಿಷಯವೇ ಇಲ್ಲ. ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಎಂ.ಟೆಕ್ ಮಾಡಿರುವ ಅವರು ಸಂಸ್ಕೃತ ಬಲ್ಲವರಾಗಿದ್ದಾರೆ. ಗಣೇಶ್ ಅವರು ಅವರಂತೆಯೇ ಕೆಲವು ತರುಣರನ್ನು ತಯಾರು ಮಾಡುವ ಮೂಲಕ ಮುಂದಿನ ಪೀಳಿಗೆಗೆ ಈ ಕಲೆಯನ್ನು ನೀಡುವ ಪ್ರಯತ್ನ ಮಾಡುತ್ತಿದ್ದಾರೆ. ಪ್ಯೂರ್ ಸೈನ್ಸ್ ಓದಿದವರಿಗೆ ತತ್ವಶಾಸ್ತ್ರ ಚೆನ್ನಾಗಿ ಅರ್ಥವಾಗುತ್ತದೆ. ಆ ಕಾರಣದಿಂದಲೇ ವಿಜ್ಞಾನ ವಿದ್ಯಾರ್ಥಿಗಳನ್ನೇ ಹೆಚ್ಚಿನ ಸಂಖ್ಯೆಯಲ್ಲಿ ತಯಾರು ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.



ಮೈಸೂರು, ನ.6(ಎಂಕೆ)– ಬಗೆ ಬಗೆಯ ಪ್ರಶ್ನೆಗಳಿಗೆ ವಿವರಣೆ ಸಹಿತ ಉತ್ತರ ಕೊಟ್ಟು 'ಭಾರತೀಯ ಹಬ್ಬಗಳ' ಮಹತ್ವ ತಿಳಿಸಿಕೊಟ್ಟ ವಿದ್ವಾನ್ ಶತಾವಧಾನಿ ಡಾ.ಆರ್.ಗಣೇಶ್ ಅವರ 'ಅಷ್ಟಾವಧಾನ' ಸಾಹಿತ್ಯ ಪ್ರಿಯರ ಮನಗೆದ್ದಿತು...

ಮೈಸೂರಿನ ಕಲಾಮಂದಿರಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು –ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ ಆಯೋಜಿಸಿರುವ 'ಏಳು ದಿನಗಳ ಸಾಂಸ್ಕೃತಿಕ ಉತ್ಸವ'ದಲ್ಲಿ ವಿದ್ವತ್ತಿನ ಪ್ರದರ್ಶನವಾಯಿತು.

ಕಲಿಯುವಿಕೆಗಾಗಿ ಮಾಡುವ ವೇಸ್ಟ್ ಬಂಡವಾಳದಂತೆ. ಎಂದಿಗೂ ವೇಸ್ಟ್ ಆಗುವುದಲ್ಲ ಎಂದು ಉದಾಹರಣೆ ಸಹಿತ ತಿಳಿಸಿಕೊಟ್ಟ ವಿದ್ವಾನ್ ಶತಾವಧಾನಿ ಡಾ.ಆರ್.ಗಣೇಶ್ ಅವರು, ನಮ್ಮ ದೇಶಕ್ಕೆ ದೊಡ್ಡ ಶತ್ರುಗಳೆಂದರೆ ಈ ನೆಲದಲ್ಲೇ ಹುಟ್ಟಿ, ಎಲ್ಲಾ ಸೌಕರ್ಯಗಳನ್ನು ಪಡೆದು ನಮ್ಮ ಪರಂಪರೆಯನ್ನು ಅರ್ಥಮಾಡಿಕೊಳ್ಳದವರಾಗಿದ್ದಾರೆ. ಅವರೇ ದೇಶ ದ್ರೋಹಿಗಳು ಎಂಬುದನ್ನು ತುಂಬಾ ನೋವಿನಿಂದ ಹೇಳುತಿದ್ದೇನೆ. ಸನಾತನ ಧರ್ಮದ ಸ್ವಾರಸ್ಯಗಳನ್ನು ತಿಳಿಯದೆ ಅಕ್ಷೇಪ ಮಾಡುವವರ ಬಗ್ಗೆ ತಿರಸ್ಕಾರ ಮತ್ತು ಸಂಕಟವಾಗುತ್ತದೆ ಎಂದರು.

ಬೇರೆ ದೇಶಗಳಿಗೆ ನಮ್ಮ ಸಂಸ್ಕೃತಿಯ ಸೂಕ್ಷ್ಮ ಗೊತ್ತಾಗಿದ್ದಿದ್ದರೆ ಅವರು ವಿಶ್ವವಿದ್ಯಾನಿಲಯಗಳಲ್ಲಿ ಪಾಠ ಮಾಡುತ್ತಿದ್ದರು. ಆದರೆ ನಮ್ಮಲ್ಲಿ ಪುಸ್ತಕ ಹರಿದಾಕಿ, ಮಾತನಾಡುವವರಿಗೆ ನಾಲಿಗೆ ಸೀಳಿ ಎನ್ನುವ ದುಸ್ಥಿತಿಗೆ ನಮ್ಮ ಪರಂಪರೆ ಬಂದಿದೆ. ಇವತ್ತು ನಮ್ಮ ದೇಶದಲ್ಲಿ ಗೋವುಗಳಿಗೆ ಬಂದಿರುವ ದುಸ್ಥಿತಿಯನ್ನು ಕಂಡರೆ, ಅವುಗಳು ಅಗ್ನಿದಿವ್ಯ(ಅಗ್ನಿ ಪ್ರವೇಶ) ಮಾಡಬೇಕಾಗಿದೆ. ಸರ್ಕಾರವಾಗಲೀ, ರಾಜಕೀಯ ಪಕ್ಷಗಳಾಗಲೀ ಗೋವುಗಳ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡದಿರುವುದು ಬೇಸರದ ಸಂಗತಿಯಾಗಿದೆ ಎಂದು ವಿಷಾದಿಸಿದರು.

ಭಾರತೀಯ ಹಬ್ಬಗಳಲ್ಲಿ ಒಂದೊಂದು ಹಬ್ಬವನ್ನು ಒಂದೊಂದು ವರ್ಣಗಳ ಮುಂದಾಳತ್ವದಲ್ಲಿ ಆಚರಿಸಲಾಗುತ್ತಿತ್ತು. ಸಂಕ್ರಾಂತಿ ಹಬ್ಬವನ್ನು ಶೂದ್ರ ವರ್ಣ ಮುಂದೆ ನಿಂತು ನಡೆಸುತ್ತಿತ್ತು. ಉಪಾಕರ್ಮದಲ್ಲಿ ಬ್ರಾಹ್ಮಣರು, ನವರಾತ್ರಿಯಲ್ಲಿ ಕ್ಷತ್ರಿಯರು, ದೀಪಾವಳಿಯಲ್ಲಿ ವೈಶ್ಯರು ಮುಂದಾಳತ್ವ ವಹಿಸುತ್ತಿದ್ದರು. ತುಳಸಿ ಮದುವೆ ಅಥವಾ ತುಳಸಿ ಹಬ್ಬದ ಮೂಲಕ ಒಂದು ಗಿಡಕ್ಕೆ ಪೂಜೆ ಮಾಡಿ ಕೊಂಡಾಡುವ ನಮ್ಮ ಪರಂಪರೆಯಲ್ಲಿ ಗರಿಕೆಗೂ ಗೌರವ ಕೊಡುತ್ತೇವೆ. ಹಾಗೆಯೇ ನಮ್ಮ ವಿದ್ಯೆ ಹೆಮ್ಮರವಾಗದಿದ್ದರೂ ಗರಿಕೆಯಂತೆ ಹರಡಿಕೊಳ್ಳಬೇಕು ಎಂದು ತಿಳಿಸಿಕೊಟ್ಟರು.

ಉಪವಾಸ ವ್ರತದಲ್ಲಿ ಸುಖವೂ ಇಲ್ಲ, ಸೌಲಭ್ಯವೂ ಇಲ್ಲ. ಎಲ್ಲವೂ ಸೀಮಿತವಾಗಿರಬೇಕು. ಕಠೋರ ವ್ರತಗಳನ್ನು ಮಾಡಿದರೆ ಏನೂ ಪ್ರಯೋಜನವಿಲ್ಲ. 'ಪುಸ್ತಕ ಬಡಿದೊಡೆ ಹಾವು ಸಾಯಬಲ್ಲುದೆ' ಎಂಬ ವಚನದಂತೆ ದೇಹವನ್ನು ದಂಡಿಸಿದರೆ ಆತ್ಮಕ್ಕೇನೂ ಉದ್ಧಾರ ಆಗುವುದಿಲ್ಲ ಎನ್ನುತ್ತಲೇ ಗಣಪತಿ ತತ್ವವನ್ನು ಭೂಮಿಗೆ ಹೋಲಿಕೆ ಮಾಡಿ ಅರ್ಥ ಮಾಡಿಸಿದರು.

ದೇಶದ ವಿವಿಧ ರಾಜ್ಯಗಳಲ್ಲಿ ಯುಗಾದಿ ಆಚರಣೆ, ನಾಗರ ಪಂಚಮಿ, ದೀಪಾವಳಿ ಸೇರಿದಂತೆ 'ಭಾರತೀಯ ಹಬ್ಬಗಳ' ವೈಭವ ತಿಳಿಸಿದರಲ್ಲದೆ ಕವಿತೆಗಳನ್ನು ವಾಚಿಸಿದರು. ಅಷ್ಟಾವಧಾನದಲ್ಲಿ ಕೆ.ಬಿ.ಎಸ್.ರಾಮಚಂದ್ರ, ಹೆಚ್.ಎ.ವಾಸುಕಿ, ಗಣೇಶ್ ಭಟ್ಟ ಕೊಪ್ಪಲತೋಟ, ಡಾ.ರಂಜನಿ ವಾಸುಕಿ, ಅರ್ಜುನ್ ಭಾರದ್ವಾಜ್, ಶ್ರೀಶ ಕಾರಂತ, ಕಶ್ಯಪ್ ನಾಯಕ್ ಹಾಗೂ ಸೋಮಶೇಖರ ಶರ್ಮ ಭಾಗವಹಿಸಿದ್ದರು.

ತುಂಬಿದ ಸಭಾಂಗಣ: ಸಾಂಸ್ಕೃತಿಕ ಉತ್ಸವ'ದ 'ಅಷ್ಟಾವಧಾನ' ಕಾರ್ಯಕ್ರಮದಲ್ಲಿ ಕಲಾಮಂದಿರ ವೇದಿಕೆ ತುಂಬಿ ತುಳುಕುತ್ತಿತ್ತು. ಭಾರತೀಯ ವಿದ್ಯಾಭವನದ ವಿದ್ಯಾರ್ಥಿಗಳು ಸೇರಿದಂತೆ ಇಡೀ ಸಭಾಂಗಣವೇ ಭರ್ತಿಯಾಗಿತ್ತು. ಕಾವ್ಯ, ಕಲೆ, ಕವಿತೆ ಹಾಗೂ ವಿದ್ವತ್ತಿನ ಅನಾವರಣವಾದಂತೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಸಾಹಿತಿ ಪ್ರೊ.ಸಿ.ನಾಗಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮರೆಯಲಾಗದ ಮಹಾಪುರುಷ ಪುನೀತ್: ಎಂಎಲ್‌ಸಿ ಸಿ.ಎನ್. ಮಂಜೇಗೌಡ



ಮೈಸೂರು, ನ.6– ಮಹಾನಾಯಕರು, ಮಹಾಪುರುಷರು ಹಾಗೂ ಕಲಾವಿದರಿಗೆ ಸಾವಿಲ್ಲ. ಅವರು ನಮ್ಮೊಂದಿಗೆ ಸದಾಕಾಲ ಜೀವಂತವಾಗಿ ಇರುತ್ತಾರೆ. ಅದೇರೀತಿ ಪುನೀತ್ ರಾಜ್‌ಕುಮಾರ್‌ರವರು ಸಹ ಮರೆಯಲಾಗದ ಮಹಾಪುರುಷರಾಗಿ ಜನಮಾನಸದಲ್ಲಿ ಅಜರಾಮರರಾಗಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.


ಚಾಮುಂಡೇಶ್ವರಿ ಕ್ಷೇತ್ರದ ಜಯಪುರದಲ್ಲಿ ವಿನಾಯಕ ಗೆಳೆಯರ ಬಳಗ ಹಾಗೂ ಸಿದ್ದೇಗೌಡರ ಅಭಿಮಾನಿ ಬಳಗದ ವತಿಯಿಂದ ನಡೆದ ಪುನೀತ ಪರ್ವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಡಾ. ರಾಜ್‌ಕುಮಾರ್ ಹಾಗೂ ಪುನೀತ್‌ರಾಜ್ ಕುಮಾರ್ ಅವರ ಅಪ್ಪಟ ಅಭಿಮಾನಿ, ಡಾ. ರಾಜ್‌ಕುಮಾರ್‌ರವರ ಬಂಗಾರದ ಮನುಷ್ಯ ಸಿನಿಮಾ ಜನರ ಜೀವನದ ದಿಕ್ಕನ್ನೇ ಬದಲಾಯಿಸಿದೆ. ಪುನೀತ್‌ರಾಜ್‌ಕುಮಾರ್‌ರವರು ಸಹ ತಂದೆಯಂತೆ ಉತ್ತಮ ಕಲಾವಿದರಾಗಿ ಈ ನಾಡಿಗೆ ಸಂದೇಶ ಕೊಡುವಂತಹ ಸಿನಿಮಾಗಳಲ್ಲಿ ಅಭಿನಯಿಸಿ ರಾಜ್ಯ, ರಾಷ್ಟ್ರ ಪ್ರಶಸ್ತಿ ಗಳಿಸಿ ಎಲೆಮರೆಯ ಕಾಯಿಯಂತೆ ಸಾಮಾಜಿಕ ಸೇವೆ ಮಾಡುತ್ತ ಕಿರಿಯ ವಯಸ್ಸಿನಲ್ಲಿಯೇ ಅಗಲಿರುವುದು ನಮ್ಮನ್ನು ಕಾಡುತ್ತಿದೆ ಪುನೀತ್‌ರಾಜ್‌ಕುಮಾರ್ ಮತ್ತೊಮ್ಮೆ ಈ ಭೂಮಿ ಮೇಲೆ ಹುಟ್ಟಿಬರಲಿ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಎಸ್. ಸಿದ್ದೇಗೌಡರು ಮಾತನಾಡಿ, ಪುನೀತ್ ರಾಜ್‌ಕುಮಾರ್‌ರವರ ಪುಣ್ಯಸ್ಮರಣೆಯನ್ನು ದೇಶ ವಿದೇಶಗಳಲ್ಲಿ ಮಾಡುತ್ತಿರುವುದನ್ನು ನೋಡಿದರೆ ಪುನೀತ್ ತಂದೆಯನ್ನು ಮೀರಿಸಿದ ಮಗ. 47 ವರ್ಷದಲ್ಲಿ ಪುನೀತ್ ಮಾಡಿರುವ ಸಾಧನೆಯನ್ನು ಯಾವ ಮುಖ್ಯಮಂತ್ರಿಯೂ ಮಾಡಿಲ್ಲ. ಪುನೀತ್‌ರಾಜ್‌ಕುಮಾರ್ ಜನರ ಮನಸ್ಸಿನಲ್ಲಿ ನಡೆದಾಡುವ ದೇವರಾಗಿದ್ದಾರೆ. ಕುಟುಂಬದವರಿಗೆ ಹೆಂಡತಿಗೂ ಗೊತ್ತಿಲ್ಲದಂತೆ ಮಾಡಿದ ಅವರ ನಿಸ್ವಾರ್ಥ ಸಾಧನೆ, ಸಮಾಜಸೇವೆಯನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದ ಅವರು, ಮುಂದಿನ ದಿನಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ದುಷ್ಟ ಶಕ್ತಿಯನ್ನು ಕಿತ್ತೊಗೆಯಲು ನಿಮ್ಮೆಲ್ಲರ ಸಹಕಾರ ಬೇಕಾಗಿದೆ ಎಂದರು.

'ಗಂಧದ ಗುಡಿ' ಪ್ರವೇಶ ದರ ಇಳಿಕೆ

ರಾಜ್ಯಾದ್ಯಂತ ಮೂರು ದಿನ ಈ ರಿಯಾಯಿತಿ: ಅಶ್ವಿನಿ ಪುನೀತ್ ರಾಜ್‌ಕುಮಾರ್ ಘೋಷಣೆ

ಮೈಸೂರು, ನ.6(ಜಿಎ)– ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಅಭಿನಯದ ಕೊನೆಯ ಚಿತ್ರ 'ಗಂಧದಗುಡಿ'ಯನ್ನು ನಾಳೆಯಿಂದ ಮೂರು ದಿನಗಳ ಕಾಲ ಸಿಂಗಲ್ ಸ್ಕ್ರೀನ್ ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಭಾರೀ ರಿಯಾಯಿತಿಯಲ್ಲಿ ಅಭಿಮಾನಿಗಳು ವೀಕ್ಷಿಸಬಹುದಾಗಿದೆ.



ಇಡೀ ಕರ್ನಾಟಕ ಗಂಧದಗುಡಿ ಚಿತ್ರವನ್ನು ಕಣ್ತುಂಬಿಕೊಳ್ಳಬೇಕೆಂಬ ಉದ್ದೇಶದಿಂದ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಟಿಕೆಟ್ ದರವನ್ನು ಇಳಿಕೆ ಮಾಡಿರುವ ವಿಷಯವನ್ನು ತಮ್ಮ ಟ್ವಿಟರ್ ಖಾತೆ ಮೂಲಕ ಹಂಚಿಕೊಂಡಿದ್ದಾರೆ.

ಟ್ವೀಟ್: ಗಂಧದಗುಡಿ ಅಪ್ಪು ಅವರ ಒಂದು ಕನಸು. ಕರ್ನಾಟಕದ ವನ್ಯ ಸಂಪತ್ತು ಹಾಗೂ ಪ್ರಕೃತಿ ಸೌಂದರ್ಯವನ್ನು ಕನ್ನಡಿಗರಿಗೆ ಪರಿಚಯಿಸುವ ಅವರ ಹಂಬಲ ಈ ಸಿನಿಮಾ ರೂಪಗೊಳ್ಳಲು ಕಾರಣವಾಗಿದ್ದು, ಅಪ್ಪು ಅವರ ಉದ್ದೇಶ ಈ ಸಿನಿಮಾ ಎಲ್ಲ ಕನ್ನಡಿಗರು ನೋಡಬೇಕೆಂಬುದು, ಅದರಲ್ಲೂ ಮಕ್ಕಳು ನೋಡಬೇಕೆಂಬುದು, ಈ ಸಲುವಾಗಿ ನಾನು ಹಾಗೂ ಚಿತ್ರ ತಂಡದ ಎಲ್ಲರೊಡನೆ ಚರ್ಚಿಸಿ ವಿತರಕರ ಹಾಗೂ ಪ್ರದರ್ಶಕರ ಸಹಕಾರದೊಂದಿಗೆ ನಮ್ಮ ಚಿತ್ರ ಗಂಧದಗುಡಿಯನ್ನು ನ.7ರಿಂದ ನ.10ವರೆಗೂ ಸಿಂಗಲ್ ಸ್ಕ್ರೀನ್ ಥೀಯೇಟರ್‌ಗಳಲ್ಲಿ ಟಿಕೆಟ್ ದರ 56 ರೂ. ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ 112 ರೂ. ಗಳಿಗೆ ಕರ್ನಾಟಕ ರಾಜ್ಯಾದ್ಯಂತ ದಿನದ ಎಲ್ಲಾ ಆಟಗಳು ಪ್ರದರ್ಶನ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ನಮ್ಮ ಮಕ್ಕಳ ನಾಳೆಗಳಿಗಾಗಿ ಕಾಡನ್ನು ಸಂರಕ್ಷಿಸೋಣ, ಗಂಧದ ಗುಡಿಯನ್ನು ತೋರಿಸೋಣ. ಜೈ ಹಿಂದ್. ಜೈ ಕರ್ನಾಟಕ ಮಾತೆ ಎಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ತಮ್ಮ ಟ್ವೀಟರ್ ಖಾತೆ ಮೂಲಕ ಅಭಿಮಾನಿಗಳಿಗೆ ತಿಳಿಸಿದ್ದಾರೆ.

ಮೈಸೂರಿನ ಎಲ್ಲಾ ಸಿಂಗಲ್ ಸ್ಕ್ರೀನ್ ಥೀಯೇಟರ್‌ಗಳಲ್ಲಿ ನಾಳೆಯಿಂದ ಮೂರು ದಿನಗಳ ಕಾಲ ಚಿತ್ರ ತಂಡ, ವಿತರಕರ ಹಾಗೂ ಪ್ರದರ್ಶಕರ ನಿರ್ಧಾರದಂತೆ ಗಂಧದ ಗುಡಿ ಚಿತ್ರದ ಟಿಕೆಟ್ ದರ ತೆರಿಗೆ ಎಲ್ಲ ಸೇರಿದಂತೆ 60ರೂ. ಇರಲಿದೆ ಎಂದು ಗಾಯತ್ರಿ ಚಿತ್ರಮಂದಿರದ ಮಾಲೀಕರು ಹಾಗೂ ಕರ್ನಾಟಕ ಚಲನಚಿತ್ರ ಪ್ರದರ್ಶಕರ ಒಕ್ಕೂಟದ ಉಪಾಧ್ಯಕ್ಷ ಆದ ರಾಜಾರಾಮ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಡಿಆರ್‌ಸಿ ಸಿನಿಮಾಸ್ ಮಾಲೀಕರಾದ ವೈಶಾಲಿ ಮಾತನಾಡಿ, ನಮ್ಮ ಡಿಆರ್‌ಸಿ ಸಿನಿಮಾಸ್‌ನಲ್ಲಿಯೂ ಈ ದರ ಅನ್ವಯಿಸಲಿದೆ. ಆದರೆ, ನಾಳಿನ ಶೋಗೆ ಈಗಾಗಲೇ 160ಕ್ಕೂ ಹೆಚ್ಚು ಟಿಕೆಟ್‌ಗಳು ಸೋಲ್ಡ್ ಆಗಿದೆ. ಈ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗಿನ ಶೋನಿಂದಲೇ ಅದನ್ನು ಅಳವಡಿಸಿಕೊಳ್ಳಲಾಗುತ್ತದೆ. ನಾಳೆ ಅವಕಾಶ ವಿದ್ದರೆ, ನಾಳೆಯೇ ರಿಯಾಯಿತಿ ನೀಡುತ್ತೇವೆ ಎಂದರು.



ಮೈಸೂರಿನ ಭೂಮಿಗಿರಿ ಪ್ರಕಾಶನ ಸಂಸ್ಥೆ ವತಿಯಿಂದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ವಿಕ್ರಮ್ ಅಯ್ಯಂಗಾರ್ ಅವರನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸನ್ಮಾನಿಸಿದರು. ಈ ವೇಳೆ ಎನ್.ಬೆಟ್ಟೇಗೌಡ, ಮಡ್ಡಿಕೆರೆ ಗೋಪಾಲ್, ವೈ.ಡಿ.ರಾಜಣ್ಣ, ಮುಡಾ ಸದಸ್ಯೆ ಲಕ್ಷ್ಮೀದೇವಿ ಇತರರಿದ್ದಾರೆ.

ತಾಯಿಗೆ ನೀಡುವಷ್ಟು ಗೌರವವನ್ನು ಭಾಷೆಗೂ ನೀಡಬೇಕು

'ಎಂದೆಂದಿಗೂ ನೀ ಕನ್ನಡವಾಗಿರು' ಕಾರ್ಯಕ್ರಮದಲ್ಲಿ ಮಿರ್ಲೆ ಶ್ರೀನಿವಾಸಗೌಡ ಕರೆ

ಮೈಸೂರು, ನ.6(ಜಿಎ)– ತಾಯಿಗೆ ಎಷ್ಟು ಗೌರವ ನೀಡುತ್ತೇವೋ ಅಷ್ಟೇ ಗೌರವವನ್ನು ನಮ್ಮ ಮಾತೃಭಾಷೆ ಕನ್ನಡಕ್ಕೆ ನೀಡಬೇಕು ಎಂದು ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ತಿಳಿಸಿದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರಾಧಿಕಾರ ಆವರಣದಲ್ಲಿ ಆಯೋಜಿಸಿದ್ದ 'ಎಂದೆಂದಿಗೂ ನೀ ಕನ್ನಡವಾಗಿರು' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕುವೆಂಪು ಅವರಿಂದ ಡಾ.ರಾಜ್‌ಕುಮಾರ್ ಅವರವರೆಗೂ ಕನ್ನಡಕ್ಕಾಗಿ ಅನೇಕ ಮಹನೀಯರು ಶ್ರಮಿಸಿದ್ದಾರೆ. ಕನ್ನಡಿಗನ ಪ್ರತಿ ರಕ್ತ ಕಣದಲ್ಲಿಯೂ ಕನ್ನಡದ ಪ್ರೀತಿ, ಸ್ವಾಭಿಮಾನ ತುಂಬಿದ್ದು, ಕನ್ನಡ ನಮ್ಮ ತಾಯಿ ಇದ್ದಂತೆ. ಪ್ರತಿಯೊಬ್ಬರು ತಾಯಿಗೆ ಎಷ್ಟು ಗೌರವ ನೀಡುತ್ತೀರೋ ಅಷ್ಟೇ ಗೌರವವನ್ನು ಕನ್ನಡ ಭಾಷೆಗೂ ನೀಡಿ ಎಂದರು.

ನಂತರ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿದರು.


'ಎಂದೆಂದಿಗೂ ನೀ ಕನ್ನಡವಾಗಿರು' ಕಾರ್ಯಕ್ರಮದಲ್ಲಿ ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್‌ನಾಗ್, ಪುನೀತ್ ರಾಜ್‌ಕುಮಾರ್ ಸೇರಿದಂತೆ 80ರ ದಶಕದ ಕನ್ನಡ ಚಿತ್ರ ಗೀತೆಗಳನ್ನು ಗಾಯಕರಾದ ಆರ್.ಲಕ್ಷ್ಮಣ್, ಡಾ.ವೈ.ಡಿ.ರಾಜಣ್ಣ, ಎಂ.ಪುಟ್ಟಸ್ವಾಮಿ, ಎನ್.ಲೋಕೇಶ್, ಉಮೇಶ್, ಸತ್ಯವತಿ, ಡಾ.ಪೂರ್ಣಿಮಾ, ಲತಾ ಮೋಹನ್, ಎನ್.ಬಸವರಾಜ್, ಎನ್.ಶ್ರೀನಿವಾಸಲು, ಆರ್.ದಾಸು ಹಾಗೂ ಪ್ರಮಥ ಮಂಜುನಾಥ್ ಹಾಡಿ ನೆರೆದಿದ್ದವರನ್ನು ರಂಜಿಸಿದರೆ, ಮೈಸೂರು ಆನಂದ್ ಅವರು ತಮ್ಮ ಹಾಸ್ಯ ರಸಾಯನದ ಮೂಲಕ ನಗೆಗಡಲಿನಲ್ಲಿ ತೇಲಿಸಿದರು.

ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕೆ.ರುದ್ರೇಶ್, ಪಾಲಿಕೆ ಸದಸ್ಯೆ ಛಾಯಾದೇವಿ, ಕಸಾಪ ಗೌರವ ಕಾರ್ಯದರ್ಶಿ ಲತಾ ಮೋಹನ್, ಅಜಯ್ ಶಾಸ್ತ್ರೀ, ಪಲ್ಲವಿ, ಟಿ.ಎನ್. ರಾಜೇಶ್ವರಿ ಉಪಸ್ಥಿತರಿದ್ದರು.

ನರಸಿಂಹರಾಜ ಕ್ಷೇತ್ರದ ಕಾಂಗ್ರೆಸ್, ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆ

ನರಸಿಂಹರಾಜ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ: ಸಂದೇಶ್‌ಸ್ವಾಮಿ

ಮೈಸೂರು, ನ.6(ಜಿಎ)– ಮೈಸೂರಿನ ಕೃಷ್ಣರಾಜ, ಚಾಮರಾಜ ಕ್ಷೇತ್ರಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಆದರೆ, ನರಸಿಂಹರಾಜ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಬೇಸರ ವ್ಯಕ್ತಪಡಿಸಿದರು.



ನಗರದ ಕಲ್ಯಾಣಗಿರಿಯಲ್ಲಿರುವ ಶ್ರೀಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದ ಆವರಣದಲ್ಲಿ ನರಸಿಂಹರಾಜ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ವತಿಯಿಂದ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರನ್ನು ಬಿಜೆಪಿ ಪಕ್ಷಕ್ಕೆ ಸ್ವಾಗತಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ನರಸಿಂಹರಾಜ ಕ್ಷೇತ್ರದಲ್ಲಿ ಕಳೆದ 28 ವರ್ಷಗಳಿಂದ ಯಾವುದೇ ಅಭಿವೃದ್ಧಿ ಯೋಜನೆಗಳು ನಡೆದಿಲ್ಲ. ಕ್ಷೇತ್ರದಲ್ಲಿ ಯಾವುದೇ ಸುಸಜ್ಜಿತವಾದ ಆಸ್ಪತ್ರೆಗಳು, ಕಾಲೇಜುಗಳು ಇಲ್ಲ. 5 ಕಿಮೀನ ಅಂತರದಲ್ಲಿರುವ ಸಿಟಿ ಭಾಗಕ್ಕೆ ತೆರಳಬೇಕಾಗಿದೆ ಈ ಕ್ಷೇತ್ರ ಹೊರತುಪಡಿಸಿ ಮೈಸೂರಿನ ಬೇರೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳು ಆಗುತ್ತಿವೆ ಎಂದರು.

ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರಿಗೂ ಸಹ ಯಾವುದೇ ಕೆಲಸ ಕಾರ್ಯಗಳು ಆಗದ ಹಿನ್ನೆಲೆಯಲ್ಲಿ ಪಕ್ಷವನ್ನು ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಮುಂದಿನ ಚುನಾವಣೆಯಲ್ಲಿ ನರಸಿಂಹರಾಜ ಕ್ಷೇತ್ರದಲ್ಲಿ ಅದ್ದೂರಿಯಾಗಿ ಬಿಜೆಪಿ ಜಯ ಭೇರಿ ಬಾರಿಸುವಂತೆ ಕೆಲಸ ಮಾಡೋಣ, ನಿಮ್ಮಂತಹ ಯುವ ಪಡೆ ಪ್ರತಿ ಬೂತ್‌ನಿಂದ ಪಕ್ಷಕ್ಕೆ ದುಡಿಯುವಂತಾಗಲಿ. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಇರುವುದರಿಂದ ನರಸಿಂಹರಾಜ ಕ್ಷೇತ್ರದಲ್ಲಿ ಬಿಜೆಪಿ ಗೆದ್ದರೆ ಮಾತ್ರ ಅಭಿವೃದ್ಧಿ ಆಗುತ್ತದೆ, ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ, ಬೃಹತ್ ಆಟದ ಕ್ರೀಡಾಂಗಣ, ಇನ್ನಿತರ ಮೈಸೂರಿಗೆ ಹಲವಾರು ಯೋಜನೆಗಳು ಮೈಸೂರಿಗೆ ಬರುತ್ತಿದೆ ಎಂದು ತಿಳಿಸಿದರು.

ನಂತರ ಮೈಸೂರು ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ ಮಾತನಾಡಿ, ನರಸಿಂಹರಾಜ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಅತ್ಯಂತ ಕ್ರಿಯಾಶೀಲವಾಗಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ವಾರ್ಡ್ ಮಟ್ಟದಲ್ಲಿ ಹಾಗೂ ಬೂತ್ ಮಟ್ಟದಲ್ಲಿ ಕೆಲಸ ಮಾಡಲು ಸಜ್ಜಾಗುತ್ತಿದ್ದು, ಇದು ಅತ್ಯಂತ ಶ್ಲಾಘನೀಯವಾಗಿದೆ ಎಂದರು.

ಕೊರೊನಾ ಸಂದರ್ಭದಲ್ಲಿ ಮನೆ ಮನೆ ಬಾಗಿಲಿಗೆ ಆಹಾರ ಕಿಟ್ ನೀಡುವ ಮೂಲಕ ಶ್ರಮದಾನ ಮಾಡಲಾಯಿತು. ಇನ್ನೂ ಅನೇಕ ಯೋಜನೆಗಳನ್ನು ಬೂತ್ ಮಟ್ಟದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸವಲತ್ತುಗಳನ್ನು ಮನೆ ಮನೆಗೆ ತಲುಪಿಸುವ ನಿಟ್ಟಿನಲ್ಲಿ ಬೂತ್ ಮಟ್ಟದ ಪ್ರತಿಯೊಬ್ಬ ಯುವಕರನ್ನು ಪಕ್ಷಕ್ಕೆ ಸೇರ್ಪಡೆಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್, ಜೆಡಿಎಸ್ ಪಕ್ಷವನ್ನು ತೊರೆದ ಸುಪ್ರೀತ್ ಶೆಟ್ಟಿ, ರವಿ, ಮಂಜುನಾಥ್, ಮಹೇಶ್, ಶೋಹೇಬ್, ಮತ್ತು ಬೆಂಬಲಿಗರು ಸೇರ್ಪಡೆಗೊಂಡರು.

ಕ್ಷೇತ್ರದ ಅಧ್ಯಕ್ಷ ಭಾನುಪ್ರಕಾಶ್, ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್, ನಗರ ಯುವ ಮೋರ್ಚಾ ಅಧ್ಯಕ್ಷ ಎಂ.ಜಿ.ಕಿರಣ್ ಗೌಡ, ನಗರ ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷರಾದ ಜಯಶಂಕರ್, ನಗರ ಉಪಾಧ್ಯಕ್ಷರಾದ ಟಿ.ರಮೇಶ್, ನಗರ ಪಾಲಿಕೆ ಸದಸ್ಯೆ ಆಶಾ ನಾಗಭೂಷಣ್, ನಗರ ಪ್ರಧಾನ ಕಾರ್ಯದರ್ಶಿ ಸಂತೋಷ್, ಉಪಾಧ್ಯಕ್ಷ ಕಾರ್ತಿಕ್, ಪುನೀತ್ ಮತ್ತು ಕ್ಷೇತ್ರದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಧನರಾಜ್, ನವೀನ್ ಶೆಟ್ಟಿ, ಎಸ್ ಸಿ ಮೋರ್ಚಾ ಅಧ್ಯಕ್ಷರಾದ ಸತೀಶ್, ಎಸ್.ಟಿ. ಮೋರ್ಚಾ ಅಧ್ಯಕ್ಷ ನಾರಾಯಣ ಲೋಲಪ್ಪ, ರೈತ ಮೋರ್ಚಾ ಅಧ್ಯಕ್ಷ ಶಶಿ, ವಿನೋದ್, ಬಸವರಾಜಪ್ಪ, ಶ್ರೀಕಂಠಮೂರ್ತಿ, ಸ್ವಾಮಿ, ರಜನಿಕಾಂತ್, ನಾಗರಾಜು, ಪುನೀತ್, ಆನಂದ್, ಜೀವನ್, ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ನಂಗೆ ಲಾಟರಿ ಹೊಡೆದ್ರೆ ಏನ್ ಮಾಡ್ತೀಯ?

ಹೆಂಡತಿ : ಲಾಟರಿ ದುಡ್ಡಲ್ಲಿ ನಂಗೆ ಅರ್ಧ ಕೊಟ್ ಬಿಡ್ರಿ. ನಾನು ಪರ್ಮನೆಂಟ್ ಆಗಿ ಅಮ್ಮನ ಮನೆಗೆ ಹೋಗಿ ಇದ್‌ಬಿಡ್ತೀನಿ.

ಗಂಡ : ನೂರು ರೂಪಾಯಿ ಲಾಟರಿ ಹೊಡೆದಿದೆ. 50 ರೂಪಾಯಿ ತಗೊಂಡು ನಿನ್ ಮನೆಗೆ ಹೋಗು!

ಮೈಸೂರು ಮಿತ್ರ

ಸೋಮವಾರ, 7 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಮ್ಮ ರಾಷ್ಟ್ರೀಯ ಆದರ್ಶಗಳು ತ್ಯಾಗ ಮತ್ತು ಸೇವೆ. ದೇಶವನ್ನು ಈ ಎರಡು ಆದರ್ಶಗಳಲ್ಲಿ ತೊಡಗಿದರೆ ಉಳಿದೆಲ್ಲವೂ ತಾನೇ ಸರಿಯಾಗುತ್ತದೆ.

– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುರಿ ಕಾಂಯೋದಕ್ಕೆ ತೋಳವನ್ನು ನೇಮಿಸಿದಂತೆ

ನಿಮ್ಮ ಪತ್ರಗಳು

ಚುನಾವಣೆ ಬಂತೆಂದರೆ ಮಾತ್ರ ಜನಸಾಮಾನ್ಯರ ನೆನಪು

ಮಾನ್ಯರೆ,

ಭಾರತ ದೇಶವೂ ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಇಲ್ಲಿ ಯಾರೂ ಬೇಕಾದರೂ ಚುನಾವಣೆಗೆ ಸ್ಪರ್ಧೆ ಮಾಡಬಹುದಾಗಿರುತ್ತದೆ. ಅದರೆ ಇಲ್ಲಿ ನಡೆಯುವುದೇ ಬೇರೇ. ಹಾ ಇಲ್ಲಿ ತುಂಬಾ ಕೆಲಸ ಮಾಡುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ.

ಚುನಾವಣೆ ಗೆದ್ದ ಮೇಲೆ ಜನಪ್ರತಿನಿಧಿಗಳು ತಮ್ಮ ಕ್ಷೇತ್ರಕ್ಕೆ ಹೋಗದೇ ಬೆಂಗಳೂರಿನಲ್ಲಿ ಇದ್ದು ಸರ್ಕಾರ ರಚನೆ ಕಾರ್ಯದಲ್ಲಿ ಮುಳುಗಿರುತ್ತಾರೆ. ಅದರೆ ಇವರ ಗೆಲುವಿಗೆ ಶ್ರಮಿಸಿದ ಜನರನ್ನು ಮರೆಯುತ್ತಾರೆ. ನಂತರ ಬಂದರೂ ಸಹ ಜನಸಾಮಾನ್ಯರ ಹತ್ತಿರ ಬರದೇ ವಿಧಾನಸಭಾ ಕ್ಷೇತ್ರದಲ್ಲಿ ಕಚೇರಿ ಮಾಡಿಕೊಂಡು ಅಲ್ಲೇ ತಮಗೆ ಬೇಕಾದ ಕೆಲಸಗಳನ್ನು ಮಾಡಿಕೊಂಡು ಅಲ್ಪ ಸ್ವಲ್ಪ ಕೆಲಸ ಮಾಡಿ ಸಭೆ ಸಮಾರಂಭಗಳನ್ನು ಮಾಡಿ ತುಂಬಾ ಕೆಲಸ ಮಾಡಿದ್ದೇನೆ ಎಂದು ಜೋರಾಗಿ ಹೇಳುತ್ತಾರೆ. ಹೇಳಿ–ಕೇಳುವುದರಲ್ಲಿ ಇವರ ಸಮಯ ಕಳೆದು ಹೋಗಿರುತ್ತದೆ.

ಚುನಾವಣೆ ಇನ್ನು ಆರು ತಿಂಗಳು ಇರುವಾಗ ಪುನಃ ಜನರು ನೆನಪಿಗೆ ಬರುತ್ತಾರೆ. ಅದರಲ್ಲೂ ಪಕ್ಷಾಂತರ ಬೇರೆ. ಅವರ ಅನುಕೂಲಕ್ಕೆ ತಕ್ಕಂತೆ ಪಕ್ಷ ಬದಲಾವಣೆ. ಆಗ ಗೊಂದಲಕ್ಕೆ ಒಳಗಾಗುವರು ಮಾತ್ರ ಜನಸಾಮಾನ್ಯರು. ಅದರಲ್ಲೂ ಪಕ್ಷಕ್ಕೆ ಒಂದು ಪ್ರಣಾಳಿಕೆ ಅದರಲ್ಲಿ ದೊಡ್ಡ ಪಟ್ಟಿ ಬೇರೆ. ಅದರೆ ಅದನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಳೆದ ಪ್ರಣಾಳಿಕೆ ಅಂಶಗಳು ಜಾಸ್ತಿ ಇರುತ್ತವೆ. ಅದನ್ನು ಪುನಃ ಹೇಳಿ ಜನರನ್ನು ನಂಬಿಸಿ ಮೋಸ ಮಾಡುತ್ತಾರೆ. ಪ್ರಣಾಳಿಕೆಯಲ್ಲಿ ಇಷ್ಟು ಸಾಧನೆ ಯಾಗಿದೆ ಎಂಬುದನ್ನು ಯಾರು ಕೂಡ ಹೇಳುವುದಿಲ್ಲ. ಅವರು ಹೇಳಿದ ಕೆಲಸಗಳನ್ನು ಮಾಡಿಲ್ಲ. ಅಂದರೆ ಅವರು ಹೇಗೆ ಜನಪ್ರತಿನಿಧಿಯಾಗಲು ಅರ್ಹರಾಗಿರುತ್ತಾರೆ ಎಂಬುದು ಜನಸಾಮಾನ್ಯರ ಪ್ರಶ್ನೆಯಾಗಿದೆ.

ಈ ಬಾರಿ ಅಂತೂ ಒಂದು ಪಕ್ಷ ಪಾದಯಾತ್ರೆ, ಇನ್ನೊಂದು ಪಕ್ಷ ಸಾಧನೆಗಳ ಸಮಾರಂಭಗಳನ್ನು ಅಯೋಜಿಸಿ ಭಾಷಣ ಮಾಡುತ್ತಾರೆ. ಮತ್ತೊಂದು ಪಕ್ಷ ಟೀಕೆಗಳನ್ನು ಮಾಡಿ ನಾನು ಉತ್ತಮ ಎಂದು ಎಂದು ತೋರಿಸಿಕೊಳ್ಳುವುದೇ ಆಗಿದೆ. ಅದರೇ ಯಾವ ಪಕ್ಷವೂ ಕೂಡ ಜನಸಾಮಾನ್ಯ ಸಮಸ್ಯೆಗೆ ಸ್ಪಂದಿಸದೇ ಆರೋಪ–ಪ್ರತ್ಯಾರೋಪಗಳಲ್ಲಿ ನಿರತವಾಗಿವೆ. ಚುನಾವಣೆಯಲ್ಲಿ ಎಲ್ಲಾ ಪಕ್ಷಗಳು ಜಾತಿ ಎಂಬ ವಿಷ ಬೀಜ ಬಿತ್ತಿ ಶಾಂತಿ ಹಾಳು ಮಾಡಿ ಅವರು ತಮಗೆ ಆಗಬೇಕಾಗಿರುವ ಕೆಲಸಗಳನ್ನು ಸಾಧಿಸಿಕೊಳ್ಳುತ್ತಾರೆ. ಇದನ್ನು ನಾವೆಲ್ಲರೂ ಅರಿತು ಪ್ರಜಾಪ್ರಭುತ್ವ ಎಂಬ ಪದಕ್ಕೆ ಜೀವ ತುಂಬೋಣ ಎಂಬುದು ನನ್ನ ಅಶಯ.

– ಬಸವರಾಜಪ್ಪ ಹೆಚ್ ಹಾಡ್ಯ, ಕೆ.ಆರ್. ನಗರ ತಾ.

ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಿ...

ಮಾನ್ಯರೆ,

ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ಕಾಮಾಂಧ ಶಿಕ್ಷಕನೋರ್ವ ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ಸರ್ಕಾರ ಮತ್ತು ಕೆಲವು ರಾಜಕಾರಣಿಗಳು ಸಂತ್ರಸ್ತರ ಕುಟುಂಬಕ್ಕೆ ಪರಿಹಾರ ನೀಡುತ್ತಿದ್ದಾರೆ.

ಒಂದು ದೃಷ್ಟಿಯಲ್ಲಿ ಇದು ಸರಿ ಅನಿಸಿದರೂ, ಮತ್ತೊಂದು ದೃಷ್ಟಿಯಲ್ಲಿ ಸರಿಯಲ್ಲ ಅನಿಸುತ್ತದೆ. ಯಾರೋ ಅತ್ಯಾಚಾರ ಮಾಡಿದರೆ, ಅತ್ಯಾಚಾರಕ್ಕೊಳಗಾದ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡುವುದು ಎಷ್ಟರ ಮಟ್ಟಿಗೆ ಸರಿ. ನೀವು ಅತ್ಯಾಚಾರ ಮಾಡಿ, ನಾವು ಪರಿಹಾರ ಕೊಡ್ತೀವಿ ಎಂದು ಪರೋಕ್ಷವಾಗಿ ಹೇಳಿದಂತಿದೆ.

ಸರ್ಕಾರ ಇಂತಹ ಹೇಯ ಕೃತ್ಯವೆಸಗುವವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು, ಆ ಆಸ್ತಿಯನ್ನು ಸಂತ್ರಸ್ತರ ಕುಟುಂಬಕ್ಕೆ ಪರಿಹಾರವಾಗಿ ನೀಡಿದರೆ, ಅತ್ಯಾಚಾರ ಎಸಗುವವರಿಗೆ ಎಚ್ಚರಿಕೆ ನೀಡಿದಂತಾಗುತ್ತದೆ. ಜೊತೆಗೆ ತನ್ನ ಕೆಟ್ಟ ಕೆಲಸದಿಂದ ನನ್ನ ಕುಟುಂಬ ಬೀದಿ ಪಾಲಾಗುತ್ತದೆ ಎಂಬ ಭಯವಿರುತ್ತದೆ.

ಇಂತಹ ಕಠಿಣ ನಿರ್ಧಾರಗಳನ್ನು ಸರ್ಕಾರ ತನಗಿರುವ ಅಧಿಕಾರವನ್ನು ಬಳಸಿಕೊಂಡು ತೆಗೆದುಕೊಂಡರೆ ಇಂತಹ ಹೇಯ ಕೃತ್ಯಗಳು ಸ್ವಲ್ಪ ಮಟ್ಟಿಗೆ ನಿಲ್ಲಿಸಬಹುದು. ಈ ಮೂಲಕವಾದರೂ ಸಂತ್ರಸ್ತರಿಗೆ ಸಮಾಧಾನವಾಗಬಹುದು ಅಲ್ಲವೇ?

– ಅನೂರಾಧ ಶ್ರೀನಿವಾಸ್, ಅಗ್ರಹಾರ, ಮೈಸೂರು.

ನೀರು ಬಿಡುವವರಿಗೆ 6 ತಿಂಗಳಿಂದ ಸಂಬಳ ನೀಡದ ಮುಡಾ

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ವ್ಯಾಪ್ತಿಗೆ ಒಳಪಡುವ ನೀರು ಬಿಡುವ ನೌಕರರಿಗೆ ಕಳೆದ 6 ತಿಂಗಳಿಂದ ಸಂಬಳ ನೀಡದ ಕಾರಣ ವಿಜಯನಗರ 4ನೇ ಹಂತದಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ತಿಂಗಳಿಗೊಮ್ಮೆ 200–300 ಸೈಟ್‌ಗಳನ್ನು ಹರಾಜು ಹಾಕುವುದರಿಂದಲೇ ಕೋಟ್ಯಾಂತರ ಹಣ ಬರುತ್ತದೆ. ನೀರು ಬಿಡುವ ಬಡಪಾಯಿ ನೌಕರರಿಗೆ ಕೇವಲ ಹತ್ತು ಸಾವಿರ ನೀಡಲು ಹಣವಿಲ್ಲವೇ. 6 ತಿಂಗಳಾದರೂ ಇವರಿಗೆ ಸಂಬಳ ಕೊಡದಿದ್ದರೆ ಅವರ ಕುಟುಂಬ ನಿರ್ವಹಣೆ ಹೇಗೆ. ಅದೇ ನಿಮ್ಮ ನೌಕರರಿಗೆ 1 ತಿಂಗಳು ಸಂಬಳ ನಿಲ್ಲಿಸಿ ನೋಡಿ ನಿಮ್ಮ ನೌಕರರಿಂದ ಎಂತಹ ಪ್ರತಿರೋಧ ಉಂಟಾಗುತ್ತದೆ. ಮುಡಾದಲ್ಲಿ ಹಣಕ್ಕಂತು ಕೊರತೆ ಇಲ್ಲ. ಆಡಳಿತ ವ್ಯವಸ್ಥೆ ವೈಫಲ್ಯದಿಂದಾಗಿ ಇಂತಹ ಪ್ರಮಾದಗಳು ಉಂಟಾಗುತ್ತವೆ. ಆಯುಕ್ತರು ತುರ್ತಾಗಿ ಬಡಾವಣೆಗೆ ಕಾಲ ಕಾಲಕ್ಕೆ ನೀರು ಬಿಡುವ ವ್ಯವಸ್ಥೆ ಮಾಡಬೇಕಾಗಿ ಬಡಾವಣೆ ನಿವಾಸಿಗಳ ಪರವಾಗಿ ಮನವಿ ಮಾಡುತ್ತೇನೆ. ಜನ ಬೀದಿಗಿಳಿಯುವ ಮುನ್ನ ನೀರು ಬಿಡುವ ವ್ಯವಸ್ಥೆ ಆಗಬೇಕು. ಕಾರಣ ನೀರು ಅತ್ಯವಶ್ಯಕ ಎಂಬುದನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

– ಬಿ.ಜಿ. ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

ರಿಂಗ್ ರೋಡ್‌ಗೂ ಸಾರಿಗೆ ಬಸ್‌ಗಳು ಸಂಚರಿಸಲಿ

ಮಾನ್ಯರೆ,

ಈ ಹಿಂದೆ ಮೈಸೂರು ನಗರ ಸಾರಿಗೆ ಸಂಸ್ಥೆಯ ಮಾರ್ಗ ಸಂಖ್ಯೆ 501 ಮತ್ತು 501ಎ ಬಸ್ಸುಗಳು ಮೈಸೂರು ನಗರ ಬಸ್ ನಿಲ್ದಾಣದಿಂದ ಫೈರ್ ಬ್ರಿಗೇಡ್, ಸರಸ್ವತಿ ಟಾಕೀಸ್, ನ್ಯೂ ಕಾಂತರಾಜ ಅರಸು ರಸ್ತೆ ಮಾರ್ಗವಾಗಿ ಶಾರದಾದೇವಿನಗರ, ಬೋಗಾದಿ ರಿಂಗ್ ರೋಡ್, ಮೇಟಗಳ್ಳಿ ರಿಂಗ್ ರೋಡ್, ಬೆಲವತ್ತ ಮಾರ್ಗವಾಗಿ ಮಣಿಪಾಲ್ ಆಸ್ಪತ್ರೆ ಸಿಗ್ನಲ್ ಮೂಲಕ ಓಡಾಡುತ್ತಿದ್ದವು.

ಅತ್ತ ಕಡೆಯಿಂದಲೂ ಇದೇ ಮಾರ್ಗವಾಗಿ ಬಸ್ಸುಗಳು ಸಂಚರಿಸುತ್ತಿತ್ತು ಇದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಗಾರ್ಮೆಂಟ್ಸ್ ಕಾರ್ಮಿಕರಿಗೆ, ಹಿರಿಯ ನಾಗರಿಕರಿಗೆ ಅನುಕೂಲವಾಗಿತ್ತು. ಈ ಬಸ್ಸುಗಳ ಸಂಚಾರ ಏಕಾಏಕಿ ನಿಲ್ಲಿಸಲಾಗಿದ್ದು, ಜನರಿಗೆ ಇನ್ನಿಲ್ಲದ ತೊಂದರೆ ಉಂಟಾಗಿದೆ. ಈ ಬಸ್‌ಗಳು ಮರು ಸಂಚರಿಸುವಂತೆ ಮಾಡಬೇಕೆಂದು ಮನವಿ.

– ನೊಂದ ಪ್ರಯಾಣಿಕರು, ಬನ್ನಿಮಂಟಪ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಸಂತ ಕವಿ ಶ್ರೇಷ್ಠ ದೇವಪುರುಷ ಕನಕದಾಸ

> “ಕನಕದಾಸರು ದಾಸ ಪಂಥದ ವಚನಕಾರರು ಮಾತ್ರವಲ್ಲ. ಎಲ್ಲ ಮತೀಯ ಬಂಧನಗಳಿಂದ ಪಾರಾಗಿ, ಸಾಮಾಜಿಕ ಕಟ್ಟು–ನಿಟ್ಟುಗಳಿಂದ ಮುಕ್ತರಾಗಿ, ಅಧ್ಯಾತ್ಮ ಸಿದ್ಧಿಯ ಶಿಖರವನ್ನೇರಿದ ವಿಶ್ವಬಂಧು". ಖಂಡಿತ ಇದರಲ್ಲೇನೂ ಉತ್ಪ್ರೇಕ್ಷೆಯಿಲ್ಲ. ಕನಕದಾಸ ಇಡೀ ವಿಶ್ವವನ್ನೇ ವ್ಯಾಪಿಸಿಕೊಂಡ ವಿಶ್ವಬಂಧು. ಅಷ್ಟೇ ಅಲ್ಲ, ವಿಶ್ವದ ಮಹಾಬೆಳಕೂ ಸಹ. ಹಿಂದುಳಿದ ಕುಲದಲಿ ಜನಿಸಿ ಸಮಾಜದ ನಿಕೃಷ್ಟಕ್ಕೊಳಗಾದರೂ "ಕುಲ ಕುಲವೆನ್ನುತಿಹರು ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ ... ಆತ್ಮ ಯಾವ ಕುಲ ಜೀವ ಯಾವ ಕುಲ ..." ಎನ್ನುತ್ತಲೇ ಇಡೀ ಜಗತ್ತಿಗೆ ಜಾಗೃತಿಯ ಜ್ಯೋತಿ ಬೆಳಗಿ ಉತ್ಕೃಷ್ಟತೆಯ ಉತ್ತುಂಗಕ್ಕೇರಿ ವಿಶ್ವಮಾನವರಾದವರು.


ಮಾನವತೆಯ ಮೇರು ಪರ್ವವಾಗಿ ಅವತರಿಸಿ ಮಾನವ ಕೋಟಿಯ ಉದ್ಧಾರಕ್ಕಾಗಿ ಜಗತ್ತಿಗೆ ಮನುಷ್ಯತ್ವದ ಮಹಾ ಬೆಳಕು ಚೆಲ್ಲಿರುವ ಸಂತ ಶ್ರೇಷ್ಠ, ದೇವ ಪುರುಷ ಕನಕದಾಸರಿಗೆ ಎಷ್ಟು ನಮಿಸಿದರೂ ಸಾಲದು. ಅಂಥ ಕೊಡುಗೆಯನ್ನು ಅವರು ಜಗತ್ತಿಗೆ ಕೊಟ್ಟಿದ್ದಾರೆ. ಜಗದುದ್ಧಾರಕ್ಕೆ ಕನಕತತ್ವವ ಅರಿತರೆ ಸಾಕು ವಿಶ್ವ ಬಂಧುತ್ವಕ್ಕೆ, ವಿಶ್ವಶಾಂತಿಗೆ ಸಮಾಜ ಸುಧಾರಣೆಗೆ.

“ಕನಕದಾಸರು ದಾಸ ಪಂಥದ ವಚನಕಾರರು ಮಾತ್ರವಲ್ಲ. ಎಲ್ಲ ಮತೀಯ ಬಂಧನಗಳಿಂದ ಪಾರಾಗಿ, ಸಾಮಾಜಿಕ ಕಟ್ಟು–ನಿಟ್ಟುಗಳಿಂದ ಮುಕ್ತರಾಗಿ, ಅಧ್ಯಾತ್ಮ ಸಿದ್ಧಿಯ ಶಿಖರವನ್ನೇರಿದ ವಿಶ್ವಬಂಧು". ಖಂಡಿತ ಇದರಲ್ಲೇನೂ ಉತ್ಪ್ರೇಕ್ಷೆಯಿಲ್ಲ. ಕನಕದಾಸ ಇಡೀ ವಿಶ್ವವನ್ನೇ ವ್ಯಾಪಿಸಿಕೊಂಡ ವಿಶ್ವಬಂಧು. ಅಷ್ಟೇ ಅಲ್ಲ, ವಿಶ್ವದ ಮಹಾಬೆಳಕೂ ಸಹ. ಹಿಂದುಳಿದ ಕುಲದಲಿ ಜನಿಸಿ ಸಮಾಜದ ನಿಕೃಷ್ಟಕ್ಕೊಳಗಾದರೂ “ಕುಲ ಕುಲವೆನ್ನುತಿಹರು ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ ... ಆತ್ಮ ಯಾವ ಕುಲ ಜೀವ ಯಾವ ಕುಲ ..." ಎನ್ನುತ್ತಲೇ ಇಡೀ ಜಗತ್ತಿಗೆ ಜಾಗೃತಿಯ ಜ್ಯೋತಿ ಬೆಳಗಿ ಉತ್ಕೃಷ್ಟತೆಯ ಉತ್ತುಂಗಕ್ಕೇರಿ ವಿಶ್ವಮಾನವರಾದವರು.

ಕನ್ನಡ ಸಾಹಿತ್ಯ ಪ್ರಪಂಚದ ಅತ್ಯಮೂಲ್ಯ ಫಸಲೆಂದೇ ಕರೆಯಲ್ಪಡುವ ಸಾಮಾಜಿಕ ತಲ್ಲಣ–ಸಮಸ್ಯೆಗಳಿಗೆ ಸ್ಪಂದಿಸಿದ ‘ದಾಸಸಾಹಿತ್ಯ’ದ ಜ್ಞಾನ ಚಿಂತಾಮಣಿ, ಮಾನವಕುಲ ಬೆಳಗಿದ ಮಹಾ ಸುಜ್ಞಾನಿ, ದಾರ್ಶನಿಕ ಕವಿಸೂರ್ಯ, ಸಂತಶ್ರೇಷ್ಠ ಸಾಹಿತ್ಯ ಚಂದಿರ, ಭಕ್ತ ಕನಕದಾಸರು ಭಕ್ತಿಪಂಥದ ಹರಿದಾಸರಲ್ಲಿ ಪ್ರಮುಖರು. ಪ್ರಸಿದ್ಧ ಕೀರ್ತನಕಾರರು. ಕರ್ನಾಟಕ ಸಂಗೀತಕ್ಕೆ ಮಹತ್ತರ ಕೊಡುಗೆ ಕೊಟ್ಟವರು.

ಅವಿಭಜಿತ ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಕನಕದಾಸರು ನೆಲೆಸಿದ್ದು ಅವರ ಆರಾಧ್ಯ ದೈವ ಆದಿಕೇಶವನ ಸನ್ನಿಧಿ ಕಾಗಿನೆಲೆಯಲ್ಲಿ. ಇವರ ಮೂಲ ಹೆಸರು ತಿಮ್ಮಪ್ಪ. ವಿಭೂತಿ ಧರಿಸಿ ಶೈವಧರ್ಮ ಅನುಸರಿಸಿದ್ದರೂ ಇವರಿಗೆ ತಿರುಪತಿ ತಿಮ್ಮಪ್ಪನಲ್ಲಿ ಅಪಾರ ಭಕ್ತಿ. ತಂದೆ ಬೀರಪ್ಪ ವಿಜಯನಗರ ಸಾಮ್ರಾಜ್ಯದಲ್ಲಿ ಬಾಡ ಹಾಗೂ ಬಂಕಾಪುರಗಳ ಸುತ್ತಮುತ್ತಲಿನ ಎಪ್ಪತ್ತೆಂಟು ಗ್ರಾಮಗಳ ಪ್ರದೇಶಕ್ಕೆ ಮಾಂಡಲೀಕರಾಗಿದ್ದರು. ತನ್ನ ರಾಜನಿಷ್ಠೆ, ಪರಾಕ್ರಮ, ಪ್ರಾಮಾಣಿಕತೆ, ದಕ್ಷತೆ ಹಾಗೂ ಕರ್ತವ್ಯಪಾಲನೆಯಿಂದ ವಿಜಯನಗರದ ಅರಸರ ವಿಶ್ವಾಸಗಳಿಸಿದ್ದ ಬೀರಪ್ಪ ಜನಮನ್ನಣೆ ಪಡೆದ ಜನನಾಯಕನಾಗಿದ್ದ. ಆದರೆ, ಬೀರಪ್ಪ–ಬಚ್ಚಮ್ಮ ದಂಪತಿಗೆ ಎಲ್ಲ ಭಾಗ್ಯಗಳಿದ್ದರೂ ಸಹ ಬಹಳ ವರ್ಷಗಳ ಕಾಲ ಮಕ್ಕಳ ಭಾಗ್ಯವಿರಲಿಲ್ಲ. ಈ ದಂಪತಿಗಳು ತಮ್ಮ ನೆಚ್ಚಿನ ದೈವ ತಿರುಪತಿಯ ತಿಮ್ಮಪ್ಪನ ಸನ್ನಿಧಿಗೆ ತೆರಳಿ ಭಕ್ತಿಯಿಂದ ಸೇವೆಗೈದು ಹರಕೆ ಹೊತ್ತ ಫಲವಾಗಿ ಅವರಿಗೆ ಒಂದು ಮುದ್ದಾದ ಗಂಡು ಮಗುವಿನ ಜನನವಾಯಿತು. ಹೀಗೆ ಹುಟ್ಟಿದ ಮಗನಿಗೆ ತಿಮ್ಮಪ್ಪ ಎಂದೇ ನಾಮಕರಣ ಮಾಡಿದರು. ಎಪ್ಪತ್ತೆಂಟು ಗ್ರಾಮಗಳ ನಾಡಗೌಡಿಕೆಯ ನಾಯಕರಾಗಿದ್ದ ತಂದೆ ಬೀರಪ್ಪ ತಮ್ಮ ವೀರವಂಶಕ್ಕೆ ತಕ್ಕಂತೆ ತಮ್ಮ ವಂಶೋದ್ಧಾರಕ ಪುತ್ರ ತಿಮ್ಮಪ್ಪನಿಗೆ ಕುದುರೆಸವಾರಿ, ಕುಸ್ತಿ, ಕತ್ತಿವರಸೆ, ಬೇಟೆ ಮುಂತಾದ ಯುದ್ಧಕಲೆಗಳು ಸೇರಿದಂತೆ ಓದು, ಬರಹ, ಸಾಹಿತ್ಯ, ಸಂಗೀತ, ಕಾವ್ಯ ಒಳಗೊಂಡಂತೆ ಸಕಲ ಕಲಾವಿದ್ಯೆ–ವಿದ್ವತ್ತನ್ನು ಕಲಿಸಿದ್ದರು. ತಿಮ್ಮಪ್ಪ ಯೌವನಾವಸ್ಥೆಗೆ ಬರುವ ವೇಳೆಗೆ ತಂದೆ ಬೀರಪ್ಪ ತೀರಿಕೊಂಡಿದ್ದರಿಂದ ತಂದೆಯ ಮಾಂಡಲೀಕ ಸ್ಥಾನವನ್ನು ಅಲಂಕರಿಸಿದ ತಿಮ್ಮಪ್ಪ ತಾಯಿಯ ನೆರಳಿನಲ್ಲಿ ತಂದೆಯ ವೃತ್ತಿಯನ್ನು ಮುಂದುವರಿಸಿದ. ಒಮ್ಮೆ ಒಂದೆಡೆ ಭೂಮಿ ಅಗೆಯುತ್ತಿದ್ದಾಗ ತಿಮ್ಮಪ್ಪನಿಗೆ ಏಳು ಕೊಪ್ಪರಿಗೆ ಧನ–ಕನಕಗಳು ದೊರೆತು ಅದನ್ನೆಲ್ಲಾ ಉದಾರವಾಗಿ ಅವನು ಗ್ರಾಮಗಳ ಉದಾತ್ತ ಕಾರ್ಯಗಳಿಗೆ ವಿನಿಯೋಗಿಸಿದ. ಭೂಮಿಯಲ್ಲಿ ಅವನಿಗೆ ಕನಕರಾಶಿ ದೊರೆತು ಅದನ್ನು ಸದ್ಬಳಕೆ ಮಾಡಿದ್ದರಿಂದ ಅಲ್ಲಿಂದ ಮುಂದೆ ತಿಮ್ಮಪ್ಪ ಕನಕರಾಗಿ, ಕನಕಪ್ಪರಾಗಿ, ಕನಕನಾಯಕರಾಗಿ ಪ್ರಸಿದ್ಧಿ ಪಡೆದರು.

ಕನಕನಾಯಕರಿಗೆ ಅದಾಗಲೇ ವಿವಾಹವಾಗಿತ್ತು. ಒಂದು ಕಡೆ ವೈವಾಹಿಕ ಬದುಕು ಸಾಗುತ್ತಿರುವಂತೆಯೇ ಮತ್ತೊಂದು ಕಡೆ ಕುಟುಂಬದ ಆಧಾರ ಸ್ತಂಭವಾಗಿದ್ದ ತಾಯಿ ಬಚ್ಚಮ್ಮ ತೀರಿಕೊಂಡಳು. ದುರಂತವೆಂದರೆ ಕೆಲವೇ ಕಾಲದಲ್ಲಿ ಪ್ರೀತಿಯ ಸತಿಯೂ ಸಾವನ್ನಪ್ಪಿದಾಗ ಪ್ರಾಪಂಚಿಕ ಜೀವನ ಕನಕನಾಯಕರಿಗೆ ಮುಳ್ಳಿನ ಹಾಸಿಗೆಯಂತಾಯಿತು. ವಿರಕ್ತಭಾವ ಆವರಿಸಿತು. ಇಂತಹ ಮಾನಸಿಕ ತೊಳಲಾಟದ ಸಂದರ್ಭದಲ್ಲೇ ಒಂದು ಘೋರಯುದ್ಧ ಸಂಭವಿಸಿ ಅದರಲ್ಲಿ ಹೋರಾಡಿದ ಕನಕನಾಯಕರಿಗೆ ಮಾರಣಾಂತಿಕ ಪೆಟ್ಟುಬಿದ್ದು, ಯಾವುದೋ ಅವ್ಯಕ್ತ ದಿವ್ಯ ಚೇತನಶಕ್ತಿಯೊಂದು ಅವರನ್ನು ಆವರಿಸಿದಂತೆ ಭಾಸವಾಯಿತು. ಈ ಘಟನೆಯ ನಂತರ ಲೌಕಿಕ ಬದುಕಿನ ಬಗ್ಗೆ ಸಂಪೂರ್ಣ ಆಸಕ್ತಿ ಕಳೆದುಕೊಂಡು ಅಲೌಕಿಕ ಬದುಕಿನತ್ತ ಹೆಜ್ಜೆಯಿರಿಸಿದ ಕನಕ ‘ದಾಸ’ರಾಗಿ ಪರಿವರ್ತನೆಗೊಂಡದ್ದು ಇವರ ಬದುಕಿನಲ್ಲಿ ಜರುಗಿದ ಮಹತ್ತರವಾದ ಚಾರಿತ್ರಿಕ ಘಟನೆ. ಅಲ್ಲಿಂದ ಆರಂಭವಾಯಿತು ಹರಿನಾಮ ಸ್ಮರಣೆಯಲ್ಲಿ ದಾಸ ಸಾಹಿತ್ಯದ ಮೂಲಕ ವೈಚಾರಿಕ ಪ್ರಭೆ ಯೊಡನೆ ಜಗತ್ತಿನ ಕತ್ತಲೆ ಕಳೆಯುವ ಕನಕದಾಸರ ಬೆಳಕಿನ ಪಯಣ.



ದಾಸಾನುದಾಸರಾಗಿ ಯತಿವರ್ಯ ವ್ಯಾಸರಾಯರ ಪಟ್ಟ ಶಿಷ್ಯರಾಗಿ ಮಧ್ವತತ್ವ ಶಾಸ್ತ್ರವನ್ನು ಕರತಲಾ ಮಲಕ ಮಾಡಿಕೊಂಡಿದ್ದ ಕನಕದಾಸರಿಗೆ ಉಡುಪಿಯ ಶ್ರೀಕೃಷ್ಣನೆಂದರೆ ಪಂಚಪ್ರಾಣ ಹಾಗೂ ಅಪಾರ ಭಕ್ತಿ. ಜಾತಿ, ಮತ, ಧರ್ಮ, ಕುಲಗಳ ಭೇದ ಭಾವಗಳ ನಡುವೆ ಮೌಢ್ಯ, ಕಂದಾಚಾರದಂತಹ ಅನಿಷ್ಟ ಪದ್ಧತಿ ಗಳು ಸೇರಿದಂತೆ ಸಮಾಜದಲ್ಲಿರುವ ಎಲ್ಲಾ ತರಹದ ಕೆಡುಕುಗಳ ಅಂಧಾನುಕರಣೆಯ ಕಳೆಗಳನ್ನು ಕಿತ್ತೆಸೆದು ಸಮಾನ ಸಮಾಜದ ಬೆಳೆ ಬೆಳೆಯಲು ದಾಸ ಸಾಹಿತ್ಯವನ್ನು ಖಡ್ಗ ಮಾಡಿಕೊಂಡ ಕನಕದಾಸರು ‘ಮುಂಡಿಗೆಗಳು’ ಎಂಬ ಹೊಸ ಸಾಹಿತ್ಯ ಪ್ರಕಾರವನ್ನು ಸೃಷ್ಟಿಸಿದರು. ಇದು ಅವರ ಪ್ರಯೋಗಶೀಲತೆಗೆ ಸಾಕ್ಷಿ, ಮಾತ್ರವಲ್ಲ ಅವರ ಪ್ರತಿಭಾ ಸಂಪನ್ನತೆ ಹಾಗೂ ಪ್ರತಿಭಾ ಸಾಮರ್ಥ್ಯಕ್ಕೆ ಕಣ್ಣೆದುರಿನ ಕನ್ನಡಿಯಾಗಿದೆ.

ನವೆಂಬರ್ 11, ಕನಕದಾಸ ಜಯಂತಿ. ತನ್ನಿಮಿತ್ತ ಈ ಲೇಖನ.

ಬದುಕಿನ ಸತ್ವ–ಸತ್ಯ–ಸಾರ್ಥಕ್ಯ ಮತ್ತು ಸಾರವನ್ನು ಅಚ್ಚ ಸರಳಗನ್ನಡದಲ್ಲಿ ಬರೆದು, ತೆರೆದಿಟ್ಟು ಮನುಕುಲದ ಒಳಗಣ್ಣು ತೆರೆಸುತ್ತಾ ಎಲ್ಲರಿಗೂ ದಾಸಾಮೃತ ಉಣಬಡಿಸುತ್ತಾ ಕನಕದಾಸರು ಲೋಕಸಂಚಾರಗೈದ ಪುಣ್ಯಸ್ಥಳಗಳು ಅನೇಕ. ಬಾಡ, ಬಂಕಾಪುರ, ಕಮ್ಮಾರು, ಉಮ್ಮತ್ತೂರು, ಕಾಗಿನೆಲೆ, ಉಡುಪಿ, ಇಂಗಳಗೊಂದಿ, ಮದನಪಲ್ಲಿ, ಕುಂದನೂರು, ವ್ಯಾಸನ ಸಮುದ್ರ, ಕೋಣನತೂಬು, ತಿರುಮಕೂಡಲು ನರಸೀಪುರ, ಬನ್ನೂರು, ಸೋಸಲೆ, ರಂಗಸಮುದ್ರ, ತಲಕಾಡು, ಮೈಸೂರು, ಕದರಮಂಡಲಗಿ, ಶ್ರೀರಂಗಂ, ಮಹದೇವಪುರ, ಶ್ರೀರಂಗಪಟ್ಟಣ, ಕನಕಗಿರಿ, ಮೇಲುಕೋಟೆ, ತೊಂಡನೂರು, ಹಂಪೆ, ಮಳೂರು, ನಂಜನಗೂಡು, ಬೇಲೂರು, ವೇಲಾಪುರಿ, ತಿರುಪತಿ... ಹೀಗೆ ನಾಡಿನ ಉದ್ದಗಲಕ್ಕೂ, ನಾಡಿನಾಚೆಗೂ ಸಂಚರಿಸಿ ಆದಿಕೇಶವನ ಭಜಿಸುತ್ತಾ ತಮ್ಮ ಜೀವಿತದ ಪ್ರತಿಕ್ಷಣವೂ ಸಮಾಜದ ಅಂಕು–ಡೊಂಕುಗಳನ್ನು ತಿದ್ದುತ್ತಾ ಸಮಾಜ ಪರಿವರ್ತನಾ ಚಕ್ರವನ್ನು ತಿರುಗಿಸಿದ ಶ್ರೇಷ್ಠ ಸಮಾಜವಾದಿ ಕನಕದಾಸರು ಅಕ್ಷರಶಃ ಕನಕಸುಧೆಯನ್ನು ಹರಿಸಿದವರು.

ಹೆಗಲ ಮೇಲೊಂದು ಕುರಿಯ ತುಪ್ಪಟದಿಂದ ನೇಯ್ದ ಕಂಬಳಿ, ಹಸಿವಾದಾಗ ಉಣಲೊಂದು ಮರದ ತಣಿಗೆ, ಮಂಡಿ ಮಟ್ಟಕ್ಕೆ ಉಟ್ಟ ಪಂಚೆ, ವಿಶಾಲವಾದ ಹಣೆಯಲ್ಲಿ ತಿಲಕ, ತಲೆಯಿಂದ ಹಿಂಭಾಗಕ್ಕೆ ಇಳಿಬಿದ್ದಿರುವ ಗುಂಗುರುಗಟ್ಟಿದ ಕೂದಲು, ಸೊಂಪಾಗಿ ಮುಖದ ಮೇಲೆ ಬೆಳೆದು ನಿಂತ ಗಡ್ಡ–ಮೀಸೆ, ಕೊರಳಲ್ಲಿ ಮಣಿಮಾಲೆ, ಕೈಯಲ್ಲಿ ತಂಬೂರಿ–ತಾಳ. ಇದು ಎಂಥವರೂ ಎರಡೂ ಕೈಯೆತ್ತಿ ಮುಗಿಯುವಂತಹ ಮಹಾತೇಜಸ್ಸಿನ ಕನಕದಾಸರ ಬಾಹ್ಯರೂಪ. ಅಂತರಂಗವೋ ಅಣುಅಣುವಿನಲ್ಲೂ ಭಕ್ತಿ ತುಂಬಿದ ಕನಕದೀಪೋತ್ಸವದ ದೇವಸಾಗರ. ಆದಿಕೇಶವನೊಲಿದ ಆತ್ಮಜ್ಯೋತಿಯ ಮಹಾಬೆಳಕಿನ ಆಗರ.

ಕರ್ನಾಟಕದಲ್ಲಿ ಹರಿದಾಸ ಪರಂಪರೆಗೆ ಸುಮಾರು ಐದು ಶತಮಾನಗಳಿಗೂ ಹೆಚ್ಚಿನ ಬಹುದೊಡ್ಡ ಇತಿಹಾಸವಿದೆ. ಶಿವದಾಸರ ನಂತರದಲ್ಲಿ ಪ್ರಕಾಶಗೊಂಡು ಪ್ರಚಾರಕ್ಕೆ ಬಂದ ಈ ಪರಂಪರೆ ವೈಚಾರಿಕ ಪ್ರಜ್ಞೆಯ ಕನಕದಾಸರಂಥ ಮಹಾತ್ಮರಿಂದಾಗಿ ಸಮಾಜದಲ್ಲಿನ ಮೇಲು–ಕೀಳು, ಜಾತಿ–ಧರ್ಮ, ಮತ–ಪಂಥಗಳ ಕರ್ಮಠ ಸಿದ್ಧಾಂತಕ್ಕೆ ತಿಲಾಂ ಜಲಿ ಇಟ್ಟಿತು. ಭಕ್ತಿಯೇ ಮೈವೆತ್ತ ದೇವಸ್ತುತಿಯೇ ಪ್ರಧಾನ ವೆನಿಸಿದ್ದ ಭಕ್ತಿ ಪರಂಪರೆಯ ಕಾಲದಲ್ಲಿ ಬಂದ ಕನಕ ದಾಸರು, ತಮ್ಮ ವೈಚಾರಿಕ ನಿಲುವು ಮತ್ತು ಪ್ರತಿಭಟನಾ ಮನೋಭಾವದಿಂದ ದಾಸ ಸಾಹಿತ್ಯಕ್ಕೆ ವೈಚಾರಿಕ ಪ್ರಭಾವಳಿ ನೀಡಿದವರು.

ಕನ್ನಡ ಸಾಹಿತ್ಯದ ತವನಿಧಿ ಗಳಲ್ಲಿ ದಾಸ ಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವ ಪೂರ್ಣವಾಗಿ ಸಮೃದ್ಧಿಗೊಳಿಸಿದ ವರು ಹರಿದಾಸರು. ಜೀವನದಲ್ಲಿ ನ್ಯಾಯ, ನೀತಿ, ಸತ್ಯ, ನಿಷ್ಠೆ ಹಾಗೆಯೇ ಸಾಹಿತ್ಯದಲ್ಲಿ ಜೀವನ ಮೌಲ್ಯಗಳನ್ನು ತತ್ವಗಳಾಗಿ ಅಡಗಿಸಿ, ಜನಸಾಮಾನ್ಯರನ್ನು ಉತ್ತುಂಗ ಬದುಕಿನತ್ತ ಕರೆದೊಯ್ಯುವ ಮಹಾ ಕಾಯಕದಲ್ಲಿ ನಿರತರಾದವರು ಹರಿದಾಸರು. ಕನ್ನಡ ಸಾಹಿತ್ಯ ಲೋಕಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯದ ಮುಖೇನ ಸಮಾಜದ ಮೌಢ್ಯವನ್ನು ಬಯಲಿಗೆಳೆದು ಜಾತಿ, ಮತ, ಪಂಥ ಗಳನ್ನೆಲ್ಲಾ ಮೀರಿ ನಿಂತು ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಬಿತ್ತಿದವರಿವರು.

ಇಂಥ ಹರಿದಾಸರಲ್ಲಿ ಕನಕ ದಾಸರು ಬಹುಮುಖ್ಯರು. ಬದುಕಿಗೊಂದು ಮೌಲ್ಯವಿತ್ತು, ಭಾಷೆಗೊಂದು ಪಕ್ವತೆಯನ್ನು ತಂದು ಕೊಟ್ಟು ಕನ್ನಡ ಸಾಹಿತ್ಯಕ್ಕೆ, ಭಾರತೀಯ ಸಂಸ್ಕೃತಿಗೆ ಅತ್ಯಮೂಲ್ಯ ಕಾಣಿಕೆ ನೀಡಿರುವ ಸಂತ ಕವಿ, ದಾಸಶ್ರೇಷ್ಠ ಕನಕದಾಸರು ಮಹತ್ವದ ಸಾಧಕರಾಗಿ ದ್ದಾರೆ. ಇವರ ಸಾಹಿತ್ಯ ರಚನೆಯಲ್ಲಿ ವೈವಿಧ್ಯಮಯ ಬದುಕಿನ ಸಂಕೀರ್ಣ ಅನುಭವ ಹಾಸು ಹೊಕ್ಕಿದ್ದು, ಅಲಂಕಾರ, ಪ್ರತಿಮೆ, ರೂಪಕ, ಸಂಕೇತಗಳು ಕೀರ್ತನೆಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಸಹಜವಾಗಿ ಮೂಡಿ ಬಂದಿವೆ. ಭಕ್ತಿ, ಅಧ್ಯಾತ್ಮ, ಅನುಭವಗಳ ಜೊತೆಗೆ ಸಾಮಾಜಿಕ ಪ್ರಜ್ಞೆ, ವಿಡಂಬನೆ, ಜಾತ್ಯಾತೀತ ಪರಿಕಲ್ಪನೆಗಳಿಂದ ಕನಕದಾಸರ ಕೀರ್ತನೆಗಳು ಇವತ್ತಿಗೂ ಪ್ರಸ್ತುತವೆನಿಸುತ್ತವೆ. ಹಾಗೆಯೇ ಸದ್ದಿಲ್ಲದೆಯೇ ಸಮಾಜವನ್ನು ತಿದ್ದಿ ತೀಡುವ ಕೈಂಕರ್ಯ ಮಾಡುತ್ತಿವೆ. ಕನಕದಾಸರ ವೈಶಿಷ್ಟ್ಯವೆಂದರೆ ತಮ್ಮ ಸಮಕಾಲೀನ ಹರಿದಾಸರಂತೆ ನಡೆದ ದಾರಿಯಲ್ಲೇ ನಡೆಯದೆ ಏಕ ಮುಖಿಯಾಗಿ ಹರಿಯನ್ನು ಬರೀ ಹೊಗಳದೆ “ಆರು ಬದುಕಿದರಯ್ಯ ಹರಿ ನಿನ್ನ ನಂಬಿ" ಎಂದು ವೈಚಾರಿಕ ಪ್ರಜ್ಞೆಯಿಂದ ತನ್ನ ಆರಾಧ್ಯ ದೈವ ಹರಿ ಯನ್ನೂ ಬಿಡದೆ ಪ್ರಶ್ನಿಸಿದ್ದಾರೆ. ಹೀಗೆ ವಿಚಾರವಂತ ರಾಗಿ, ವಿವೇಕಶೀಲರಾಗಿ ವೈಚಾರಿಕ ನೆಲೆಯಲ್ಲಿ ನಡೆದ ಕಾರಣಕ್ಕಾಗಿ ಇವರು ಇತರೇ ದಾಸರಿಗಿಂತ ಭಿನ್ನವಾಗಿದ್ದು, ದಾಸ ಪರಂಪರೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಪ್ರವೇಶಗಳೆರಡೂ ಪ್ರಮುಖ ಘಟ್ಟಗಳು. ಕಬ್ಬಿಣದ ಕಡಲೆಯಂತಿದ್ದ ಕಾವ್ಯಗಳನ್ನೇ ಕಂಡಿದ್ದ ಜನಸಾಮಾನ್ಯರಿಗೆ ಸುಲಿದ ಬಾಳೆಹಣ್ಣಿನಂತಹ ಸಾಹಿತ್ಯ ಸುಳಿದುದೇ ಈ ಹೊಸ ಸಾಹಿತ್ಯ ಪ್ರಕಾರಗಳಿಂದ. ವಿಶೇಷವಾಗಿ ಇಲ್ಲಿ ಕನಕದಾಸರ ಕೀರ್ತನೆಗಳು ಜನಮಾನಸಕ್ಕೆ ಬಹು ಹತ್ತಿರವಾಗಿ ಅಷ್ಟೇ ಪ್ರಿಯವಾದದ್ದು ದಾಸ ಸಾಹಿತ್ಯದ ಹೆಗ್ಗಳಿಕೆಯೆಂದೇ ಹೇಳಬಹುದು. 12ನೇ ಶತಮಾನದಲ್ಲಿ ಶಿವಶರಣರು ವಚನ ಸಾಹಿತ್ಯ ಪ್ರಕಾರದ ಮೂಲಕ ಜನಮನಮುಟ್ಟಲು ವಚನ ಸಾಹಿತ್ಯ ಸೃಷ್ಟಿ ಮಾಡಿದರೆ, ಇದರ ನಂತರ 13ನೇ ಶತಮಾನದಲ್ಲಿ ನರಹರಿತೀರ್ಥದಾಸರಿಂದ ಆರಂಭಗೊಂಡ ದಾಸ ಸಾಹಿತ್ಯ ಮುಂದಿನ ನಾಲ್ಕೈದು ಶತಮಾನಗಳ ಕಾಲ ಜನ ಸಾಮಾನ್ಯರ ಮನೆ–ಮನಗಳಲ್ಲಿ ರಾರಾಜಿಸಿತು. ಇಲ್ಲಿ 16ನೇ ಶತಮಾನದಲ್ಲಿ ಬಾಳಿ ಬೆಳಗಿದ ದಾಸಶ್ರೇಷ್ಠದ್ವಯರಾದ ಕನಕ–ಪುರಂದರರ ಕಾಲವನ್ನು ದಾಸ ಸಾಹಿತ್ಯದ ಸುವರ್ಣ ಯುಗವೆಂದೇ ಕರೆಯಲಾಗುತ್ತದೆ. ಇವರಿಬ್ಬರನ್ನೂ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದೂ, ದಾಸ ಸಾಹಿತ್ಯಾಗಸದ ಎರಡು ನಕ್ಷತ್ರಗಳೆಂದು ಬಣ್ಣಿಸಲಾಗುತ್ತದೆ. ವಿಶೇಷವಾಗಿ ಕನಕದಾಸರನ್ನು ದಾಸ ಸಾಹಿತ್ಯದ ಧ್ರುವತಾರೆ ಎಂದೇ ಕರೆಯಲಾಗುತ್ತದೆ. ಅಂತೆಯೇ ದಾಸ ಸಾಹಿತ್ಯದ ಮೂಲಕ ಸಾಹಿತ್ಯವನ್ನು ಇನ್ನಷ್ಟು ಸರಳಗೊಳಿಸಿ ಕನ್ನಡ ಸಾಹಿತ್ಯಕ್ಕೆ ನಾವೀನ್ಯತೆ ತುಂಬಿದ ಕನಕ ದಾಸರನ್ನು ‘ಹೊಸಗನ್ನಡ ಸಾಹಿತ್ಯ ಕೋಗಿಲೆ’ ಎಂದೂ ‘ದಾಸ ಸಾಹಿತ್ಯ ಬನದ ಹಾಡು ಹಕ್ಕಿ’ ಎಂದೂ ಕರೆಯುವುದುಂಟು.

‘ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ’, ‘ಬದುಕಿದೆನು ಬದುಕಿದೆನು ಭವ ಎನಗೆ ಇಂಗಿತು, ಪದ್ಮನಾಭನ ಪಾದದೊಲುಮೆ ಎನಗಾಯಿತು’, ‘ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ’, ‘ಕಿಲುಬಿದಾ ಬಟ್ಟಲೊಳು ಹುಳಿಕಲಸಿ ಉಣಬಹುದೆ?’, ‘ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ’, ‘ಡೊಂಕು ಬಾಲದ ನಾಯಕರೇ ನೀವೇನೂಟವ ಮಾಡಿದಿರಿ’, ‘ನೀಮಾಯೆಯೊಳಗೊ ನಿನ್ನೊಳು ಮಾಯೆಯೊ?’, ‘ನಾವು ಕುರುಬರು ನಮ್ಮ ದೇವರು ಬೀರಯ್ಯ, ಕಾವ ನಮ್ಮಜ್ಜ, ನರಕುರಿಗಳ ಹಿಂಡುಗಳ’, ‘ಅಜ್ಞಾನಿಗಳ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು’, ‘ಸಂತವಂತರ ಸಂಘವಿರಲು ತೀರ್ಥವೇತಕೆ? ನಿತ್ಯ ಜ್ಞಾನಿಯಾದ ಮೇಲೆ ಚಿಂತೆಯಾತಕೆ?’, ‘ಯಾಕೆ ನೀನಿಲ್ಲಿ ಪವಡಿಸಿದೆ ಹರಿಯೇ, ಜಗದೇಕ ವಿಖ್ಯಾತ ಪಶ್ಚಿಮ ರಂಗನಾಥಾ’... ಹೀಗೆ ಕಾಗಿನೆಲೆ ಆದಿಕೇಶವರಾಯನ ಅಂಕಿತನಾಮದಲ್ಲಿ ನೂರಾರು ಕೀರ್ತನೆಗಳನ್ನು, ತತ್ವಪದ, ಮುಂಡಿಗೆ, ಸುಳಾದಿಗಳನ್ನು ರಚಿಸಿದ ಕನಕದಾಸರು ಬಹಳ ಚಿಕ್ಕ ವಯಸ್ಸಿನಲ್ಲೇ ಐದು ಮಹಾಕಾವ್ಯಗಳನ್ನು ರಚಿಸಿದರು. ಅವು ‘ಪಂಚ ಮಹಾಕಾವ್ಯಗಳು’ ಎಂದೇ ಕನ್ನಡ ಕಾವ್ಯಲೋಕದಲ್ಲಿ ಖ್ಯಾತಿಗೊಂಡಿವೆ. ಅವುಗಳೆಂದರೆ ಒಂದು ತಾರುಣ್ಯದ ದಾಂಪತ್ಯ ಪ್ರತೀಕವಾದ ‘ಮೋಹನತರಂಗಿಣಿ’, ಎರಡು ಜಾತಿ, ಮತ, ಮೇಲು, ಕೀಳೆಂಬ ಕುಲದ ನೆಲೆಗೆ ಉತ್ತರ ನೀಡುವ ‘ಶ್ರೀರಾಮ ಧಾನ್ಯ ಚರಿತೆ’, ಮೂರು ಸಾಮಾಜಿಕ ಚಿಂತನೆಯ ‘ನಳಚರಿತೆ’ ನಾಲ್ಕನೆಯದು ‘ಹರಿಭಕ್ತಸಾರ’ ಹಾಗೂ ಐದನೆಯದು ‘ನರಸಿಂಹಸ್ತವ’. ಇವೆಲ್ಲವೂ ಷಟ್ಪದಿ, ಸಾಂಗತ್ಯ ಮೊದಲಾದ ಛಂದೋಬಂಧಗಳಿಂದ ರಚಿಸಲ್ಪಟ್ಟಿರುವ ಉತ್ಕೃಷ್ಟ ಮಹಾಕಾವ್ಯಗಳಾಗಿವೆ.

ಇಂಥ ಶ್ರೇಷ್ಠಸಂತ, ಕೀರ್ತನಕಾರ, ಹರಿಭಕ್ತಚೇತನ, ಸಾಹಿತ್ಯದಿಗ್ಗಜ, ಸಮಾಜ ಸುಧಾರಕ, ದಾಸಸಾಹಿತ್ಯ ಸಾರ್ವಭೌಮ, ವಿಶ್ವಮಾನವ, ಮಹಾಮಾನವತಾವಾದಿ, ಮಹಾದಾರ್ಶನಿಕ ಭಕ್ತಕನಕದಾಸರು ಕ್ರಿ.ಶ. 1509 ರಿಂದ 1607ರ ಕಾಲ ಘಟ್ಟದಲ್ಲಿ ಈ ಭೂಮಿಯಲ್ಲಿ ಜೀವಿಸಿದ್ದರೆಂದು ಇತಿಹಾಸ ಹೇಳುತ್ತದೆ. ತಮ್ಮ ಜೀವನದ ಕಡೆಗಾಲದಲ್ಲಿ ತಮ್ಮ ಹುಟ್ಟೂರು ಬಾಡ, ಕಾಗಿನೆಲೆ ಸನಿಹದ ಕಮ್ಮಾರುಗಳಲ್ಲಿ ತನ್ನ ಆರಾಧ್ಯ ದೈವ ಕೇಶವನನ್ನು ಪ್ರತಿಷ್ಠಾಪಿಸಿ ಸಂತ ಜೀವನ ಸಾಗಿಸುತ್ತಾ, ‘ಬದುಕಿದೆನು ಬದುಕಿದೆನು ಭವ ಎನಗೆ ಇಂಗಿತು, ಪದುಮನಾಭನ ಪಾದದೊಲುಮೆ ಎನಗಾ ಯಿತು...’ ಎಂದು ಭಕ್ತಿಯಿಂದ ಹಾಡಿದ ಈ ಭಕ್ತೋತ್ತಮ ಭಕ್ತ ಕನಕದಾಸ ಕಾಗಿನೆಲೆಯ ಆದಿಕೇಶವನಲ್ಲಿಯೇ ಐಕ್ಯವಾದರು. ಸುಮಾರು ನೂರು ವರ್ಷಗಳ ಜೀವಿತಾವಧಿಯ ತಮ್ಮ ಸಾರ್ಥಕ ಬದುಕಿನಲ್ಲಿ ಲೋಕೋದ್ಧಾರಕ್ಕಾಗಿ ತಮ್ಮ ಜೀವನವನ್ನು ಜ್ಯೋತಿಯಾಗಿಸಿ ಮಾನವ ಕುಲವನ್ನು ಬೆಳಗಿದ ಕನಕ ಸೂರ್ಯರಿವರು, ಸೂರ್ಯ–ಚಂದ್ರರಿರುವ ತನಕವೂ ಇವರು ಮತ್ತು ಇವರ ಜೀವನ ಮೌಲ್ಯಗಳು, ಆದರ್ಶ ಗಳು ಶಾಶ್ವತವು. ಏಕೆಂದರೆ ಕನಕರ ತತ್ವಾದರ್ಶ ಚಿಂತನೆಗಳೆಲ್ಲವೂ ಸಾರ್ವಕಾಲಿಕ ಮೌಲ್ಯಗಳಾಗಿ ರುವುದು ಸೂರ್ಯ ಚಂದ್ರರ ಬೆಳಕಿನಷ್ಟೇ ಸತ್ಯ.

ಗೆರಸನಹಳ್ಳಿ ಪಿಎಸಿಎಸ್‌ಗೆ ನಾಗೇಶ್ ಅಧ್ಯಕ್ಷ, ವೆಂಕಟೇಶ್ ಉಪಾಧ್ಯಕ್ಷ



ಹುಣಸೂರು ತಾಲೂಕಿನ ಗೆರಸನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ನಾಗೇಶ್, ಉಪಾಧ್ಯಕ್ಷರಾಗಿ ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಸೈಯದ್ ಉಜ್ಮಾ ಕಾರ್ಯ ನಿರ್ವಹಿಸಿದರು. ಈ ವೇಳೆ ನಿರ್ದೇಶಕರಾದ ರೇವಣ್ಣ, ಎಸ್.ರಾಮಚಂದ್ರ, ಜವರಮ್ಮ, ಕುಳ್ಳೇಗೌಡ, ಪುಟ್ಟಸ್ವಾಮಿ, ರೇವಣ್ಣ, ಹೆಚ್.ಆರ್.ಕೃಷ್ಣಶೆಟ್ಟಿ, ಸಣ್ಣಯ್ಯ, ತಾಯಮ್ಮ, ಮಲ್ಲೇಶ್, ಮೇಲ್ವಿಚಾರಕರಾದ ಮಂಜೇಶ್‌ಗೌಡ, ಗ್ರಾಮದ ಮುಖಂಡರಾದ ವೆಂಕಟೇಶ್‌ಗೌಡ, ದೇವರಾಜು ಸೇರಿದಂತೆ ಇನ್ನಿತರರಿದ್ದರು.



ತಿ.ನರಸೀಪುರ ತಾಲೂಕಿನ ನೀಲಸೋಗೆ ಗ್ರಾಮದಲ್ಲಿ ವಿದ್ಯುತ್ ಅವಘಡದಿಂದ ಸಾವನ್ನಪ್ಪಿದ ಕುರುಬ ಸಮುದಾಯದ ರಾಜೇಗೌಡ, ಅವರ ಪುತ್ರ ಹರೀಶ್ ಹಾಗೂ ಮಹದೇವಸ್ವಾಮಿ ಅವರ ಕುಟುಂಬಗಳಿಗೆ ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ ಸಾಂತ್ವನ ಹೇಳಿದರು. ಈ ವೇಳೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಹಾಗೂ ನಿರ್ದೇಶಕರು, ಪುರಸಭಾ ಸದಸ್ಯ ಬಾದಾಮಿ ಮಂಜು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಸೋಮವಾರ 7, ನವೆಂಬರ್ 2022

2023ಕ್ಕೆ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರುವುದು ಶತಸಿದ್ಧ

ಕಪರೆಕೊಪ್ಪಲು ಗ್ರಾಮದಲ್ಲಿ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ



ಭಾರತೀನಗರ.ನ.6– ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಹೆಚ್.ಡಿ.ಕುಮಾರ ಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಸರ್ಕಾರ ರಚಿಸುವುದು ಶತಸಿದ್ಧ ಎಂದು ಯುವ ಜನತಾದಳದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಹೇಳಿದರು.

ಇಲ್ಲಿಗೆ ಸಮೀಪದ ಕಪರೆಕೊಪ್ಪಲು ಗ್ರಾಮದಲ್ಲಿ ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ ಮತ್ತು ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವದ ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಬಾರಿ ಸ್ವತಂತ್ರವಾದ ಜಾತ್ಯಾತೀತ ಜನತಾದಳ ಪಕ್ಷವನ್ನು ಅಧಿಕಾರಕ್ಕೆ ತರಲು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲಾಗಿದೆ. ರೈತರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಪಂಚರತ್ನ ಯೋಜನೆಯನ್ನು ಜಾರಿಗೆ ತರಲಾಗಿದೆ. ರಾಜ್ಯದ ಜನರು 5 ವರ್ಷ ಸರ್ಕಾರ ರಚನೆಗೆ ಆಶೀರ್ವಾದ ಮಾಡಿದರೆ ಈ ಯೋಜನೆಯಿಂದ ರೈತರಿಗೆ ಅನುಕೂಲವಾಗಲಿದೆ ಎಂದರು.

ಈ ಯೋಜನೆ ಬಗ್ಗೆ ತಿಳಿಸಲು ರಾಜ್ಯಾದ್ಯಂತ ಕುಮಾರಣ್ಣ ಪ್ರವಾಸ ಕೈಗೊಂಡಿದ್ದಾರೆ. ಎಲ್ಲರೂ ಒಗ್ಗೂಡಿ 2023ಕ್ಕೆ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸೋಣ ಎಂದು ಕೋರಿದರು. ಯುವಕರು ಕುಮಾರಣ್ಣ ಮತ್ತು ನಿಖಿಲ್ ಕುಮಾರಸ್ವಾಮಿ ಬಂದಾಗ ಜೈಕಾರ ಹಾಕಿ ಬೆಂಬಲಿಸಿದರೆ ಸಾಲದು, ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಬಹುಮತದಿಂದ ಗೆಲ್ಲಿಸಬೇಕು. ಯುವಕರು ಯಾವುದೇ ಹಣ ಆಮಿಷಗಳಿಗೆ ಬಲಿಯಾಗಬಾರದೆಂದು ಹೇಳಿದರು.

ದೂರದೃಷ್ಟಿಯುಳ್ಳ ಶಾಸಕ: ಡಿ.ಸಿ.ತಮ್ಮಣ್ಣ ಅವರಿಗೆ ದೊಡ್ಡ ದೂರದೃಷ್ಟಿ ಇದೆ. ಅವರನ್ನು ನೀವು ಬೆಂಬಲಿಸಿದರೆ ಕ್ಷೇತ್ರವನ್ನು ಸರ್ವೋ ತೋಮುಖ ಅಭಿವೃದ್ಧಿಯತ್ತ ಕೊಂಡ್ಯೊ ಯುವುದರಲ್ಲಿ ಯಾವುದೇ ಸಂಶಯವಿಲ್ಲ. ಕ್ಷೇತ್ರದಲ್ಲಿ ಇಂತಹ ಶಾಸಕರನ್ನು ಪಡೆದಿರು ವುದು ನಿಮ್ಮೆಲ್ಲರ ಪುಣ್ಯ. ಐಷಾರಾಮಿ ಜೀವನ ದಲ್ಲಿ ಬೆಂಗಳೂರಿನಲ್ಲಿ ಕಾಲ ಕಳೆಯಬಹು ದಿತ್ತು. ಆದರೆ ನಿಮ್ಮೆಲ್ಲರ ಸೇವೆಗಾಗಿ ಕಷ್ಟಸುಖ ಗಳಿಗೆ ಸ್ಪಂದಿಸುತ್ತಿದ್ದಾರೆ. ಇಂತಹವರನ್ನು ಆಯ್ಕೆಗೊಳಿಸಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡಿ ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತ ನಾಡಿದ ಶಾಸಕ ಡಿ.ಸಿ.ತಮ್ಮಣ್ಣ, ಶ್ರೀ ಕಾಲಭೈರ ವೇಶ್ವರ ಸರ್ವರಿಗೂ ಒಳ್ಳೆದನ್ನುಂಟು ಮಾಡಲಿ. ಮುಂದಿನ ದಿನಗಳಲ್ಲಿ ರೈತರು ಉಳಿಯಬೇಕಾದರೆ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಕುಮಾರಸ್ವಾಮಿ ಸರ್ಕಾರದಲ್ಲಿ ರೈತರಿಗೆ 45 ಸಾವಿರ ಕೋಟಿ ಸಾಲಮನ್ನಾ ಮಾಡಿದ್ದಾರೆ. ಇದನ್ನು ರೈತರು ಎಂದಿಗೂ ಮರೆಯುವಂತಿಲ್ಲ ಎಂದರು.

ಮುಗಿಬಿದ್ದ ಜನತೆ: ನಿಖಿಲ್‌ಕುಮಾರ ಸ್ವಾಮಿ ಅವರು ಕಪರೆಕೊಪ್ಪಲು ಆಗಮಿಸು ತ್ತಿದ್ದಂತೆ ಮಹಿಳೆಯರು ಬೆಲ್ಲದಾರತಿ ನೀಡಿ ಗ್ರಾಮಕ್ಕೆ ಬರಮಾಡಿಕೊಂಡರು. ರಸ್ತೆಯುದ್ದಕ್ಕೂ ತಮಟೆ–ನಗಾರಿಗಳ ಜೊತೆ ಮೆರವಣಿಗೆ ನಡೆಸಿ ಸ್ವಾಗತಿಸಿದರು.

ರಸ್ತೆಯುದ್ದಕ್ಕೂ ನಿಖಿಲ್‌ಕುಮಾರಸ್ವಾಮಿ ಜೊತೆ ಫೋಟೋ ತೆಗೆಸಿಕೊಳ್ಳಲು ಮತ್ತು ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಯುವಕರು ಮುಗಿಬಿದ್ದರು. ವೇದಿಕೆಯಲ್ಲಿ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು, ಗಂಗಾಮತಸ್ಥರ ಜಿಲ್ಲಾಧ್ಯಕ್ಷ ಎಸ್.ರಮೇಶ್, ಮೈಸೂರು ಮಹಾ ಮಂಡಳಿ ಅಧ್ಯಕ್ಷ ಎಂ.ಎಸ್. ಸಿದ್ದಲಿಂಗರಾಜು, ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಗುರುದೇವರಹಳ್ಳಿ ಅರವಿಂದ್, ದಯಾನಂದ್, ಗ್ರಾ.ಪಂ ಮಾಜಿ ಅಧ್ಯಕ್ಷ ಕೆ.ಎಂ.ಪುಟ್ಟಸ್ವಾಮಿ, ಉಪಾಧ್ಯಕ್ಷ ಜಯಲಕ್ಷ್ಮಿ, ಸದಸ್ಯರಾದ ವೀರಭದ್ರ, ನಿರೂಪಕಿ ಮಂಡ್ಯ ಅನುಪಮ ಸೇರಿದಂತೆ ಹಲವರಿದ್ದರು.

ನರೇಂದ್ರಸ್ವಾಮಿಗೆ ಟಿಕೆಟ್ ತಪ್ಪಿಸಲು ಮಳವಳ್ಳಿ ಕೈ ಮುಖಂಡರ ರಹಸ್ಯ ಸಭೆ

ಮಂಡ್ಯ, ನ.6– 2023ರ ರಾಜ್ಯ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆಯೇ ಮಳವಳ್ಳಿಯಲ್ಲಿ ಕಾಂಗ್ರೆಸ್ ಮುಖಂಡರ ರಾಜಕಾರಣ ಗರಿಗೆದರಿದೆ. ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ವಿರುದ್ಧ ಅತೃಪ್ತ ಕೈ ಮುಖಂಡರು ರಹಸ್ಯ ಸಭೆ ನಡೆಸಿದ್ದು, ನರೇಂದ್ರಸ್ವಾಮಿಗೆ ಈ ಬಾರಿ ಟಿಕೆಟ್ ಕೊಡದಂತೆ ರಾಜ್ಯ ನಾಯಕರ ಮೇಲೆ ಒತ್ತಡ ಹೇರಲು ತೀರ್ಮಾನಿಸಿದ್ದಾರೆ.

ಮಳವಳ್ಳಿ ತಾಲೂಕಿನ ಹಲಗೂರು ಬಳಿಯ ಮುತ್ತತ್ತಿ ಕಾಡಿನಲ್ಲಿ ಸಭೆ ಸೇರಿದ್ದ ಕ್ಷೇತ್ರದ ಅಸಮಾಧಾನಿತ ಕಾಂಗ್ರೆಸ್ ಮುಖಂಡರು ನರೇಂದ್ರಸ್ವಾಮಿ ಅವರಿಗೆ ಈ ಬಾರಿ ಟಿಕೆಟ್ ಕೊಡದಂತೆ ವರಿಷ್ಠರಿಗೆ ಒತ್ತಡ ಹೇರಬೇಕೆಂಬ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಅದರಲ್ಲೂ ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಆಯ್ಕೆಯಾಗಿರುವ ಹಿನ್ನೆಲೆ ಯಲ್ಲಿ ಕಳೆದ ಹಲವು ವರ್ಷಗಳ ಹಿಂದೆ ಖರ್ಗೆ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿದ್ದ ನರೇಂದ್ರಸ್ವಾಮಿ ಬದಲು ಡಾ.ಮೂರ್ತಿಗೆ ಟಿಕೆಟ್ ಕೊಡುವಂತೆ ಅತೃಪ್ತ ಕಾಂಗ್ರೆಸ್ಸಿಗರು ಒತ್ತಾಯಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಹೇಳಲಾಗಿದೆ.

ಕಳೆದ ಎರಡು ದಶಕಗಳಲ್ಲಿ ಕಾಂಗ್ರೆಸ್‌ನಲ್ಲಿದ್ದು, ನಂತರ ಪಕ್ಷದಿಂದ ಹೊರಗೆ ಹೋಗಿ ಮತ್ತೆ ಪಕ್ಷಕ್ಕೆ ವಾಪಸ್ಸಾಗಿದ್ದ ನರೇಂದ್ರಸ್ವಾಮಿ ಅವರಿಗೆ ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ 2008ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಟಿಕೆಟ್ ಕೊಡಿಸದೇ ಯಮದೂರು ಸಿದ್ದರಾಜುಗೆ ಟಿಕೆಟ್ ಕೊಡಿಸಿದ್ದರು. ಪಕ್ಷೇತರರಾಗಿ ಸ್ಪರ್ಧೆ ಮಾಡಿದ ನರೇಂದ್ರಸ್ವಾಮಿ ಗೆಲುವು ಸಾಧಿಸಿದ್ದರು. ಆದರೆ ಆ ಸಂದರ್ಭದಲ್ಲಿ ನರೇಂದ್ರಸ್ವಾಮಿ ಹಾಗೂ ಬೆಂಬಲಿಗರು ಖರ್ಗೆ ವಿರುದ್ಧ ಬಹಿರಂಗ ಅಸಮಾಧಾನ ಹೊರ ಹಾಕಿದ್ದರು. ಇದನ್ನೇ ಬಂಡವಾಳ ಮಾಡಿಕೊಂಡಿರುವ ನರೇಂದ್ರಸ್ವಾಮಿ ವಿರೋಧಿ ಪಡೆ ಮಾಜಿ ಶಾಸಕರಿಗೆ ಟಿಕೆಟ್ ತಪ್ಪಿಸುವ ಸಲುವಾಗಿ ತಂತ್ರಗಾರಿಕೆ ರೂಪಿಸುತ್ತಿದ್ದಾರೆ ಎನ್ನಲಾಗಿದೆ.

ಈ ನಿಟ್ಟಿನಲ್ಲಿ ಖರ್ಗೆ ಆಪ್ತರಾದ ಮಳವಳ್ಳಿಯ ಡಾ.ಮೂರ್ತಿಗೆ ಟಿಕೆಟ್ ಕೊಡಬೇಕೆಂದು ಆಗ್ರಹಿಸಿದ್ದು, ಈ ಬಗ್ಗೆ ಖರ್ಗೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಜೊತೆಗೂ ನಿಯೋಗ ತೆರಳಿ ಮಾತನಾಡಲು ಸಭೆಯಲ್ಲಿ ತೀರ್ಮಾನಿಸಿದ್ದಾರೆ ಎಂದು ತಿಳಿದು ಬಂದಿದೆ.

ಸಭೆಯಲ್ಲಿ ಅತೃಪ್ತ ಮುಖಂಡರಾದ ಚಂದ್ರಶೇಖರ್, ಸಿದ್ದೇಗೌಡ, ದಿಲೀಪ್, ಬಸವರಾಜ್, ರಾಜೇಗೌಡ ಇತರರಿದ್ದರು.

ಚಿನಕುರಳಿಯಲ್ಲಿ ಪ್ರತಿಭಾ ಪುರಸ್ಕಾರ



ಚಿನಕುರಳಿ, ನ6– ಇಲ್ಲಿನ ಪ್ರತಿಷ್ಠಿತ ಎಸ್‌ಟಿಜಿ ಪಬ್ಲಿಕ್ ಶಾಲೆಯಲ್ಲಿ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹಾಗೂ ಶಾಸಕ ಸಿ.ಎಸ್.ಪುಟ್ಟರಾಜು ತಲಾ ಹತ್ತು ಗ್ರಾಪಂ ಚಿನ್ನ ನೀಡಿ ಅಭಿನಂದಿಸಿದರು.

ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ಪಿಯುಸಿ ವಿಭಾಗದಲ್ಲಿ ಯು.ಪುನೀತ್ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಅಸ್ರಾ ಮಾಹೀನ್ ಎಂಬ ವಿದ್ಯಾರ್ಥಿಗಳನ್ನು ಗೌರವಿಸಿದರು. ಜತೆಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆಗೊಂಡ 118 ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ನೂರಕ್ಕೆ ನೂರು ಅಂಕಗಳಿಸಿದ ಗಣಿತ–62, ಕನ್ನಡ–4, ಭೌತಶಾಸ್ತ್ರ–2, ಜೀವಶಾಸ್ತ್ರ–7, ರಸಾಯನಶಾಸ್ತ್ರ–14 ವಿದ್ಯಾರ್ಥಿಗಳನ್ನು ಸಹ ಇದೇ ವೇಳೆ ಅಭಿನಂಧಿಸಲಾಯಿತು.

ಈ ವೇಳೆ ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿ ಗಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕು ಎಂಬ ಉದ್ದೇಶದಿಂದ ಚಿನಕುರಳಿಯಲ್ಲಿ ಎಸ್‌ಟಿಜಿ ಸಂಸ್ಥೆ ಆರಂಭಿಸಲಾಗಿದೆ ವಿದ್ಯಾರ್ಥಿ ಗಳು ಶಾಲೆಯಲ್ಲಿ ಸಿಗುವಂತಹ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಬೇಕು ಎಂದು ತಿಳಿಸಿದರು.

ಸಿಇಓ ಸಿ.ಪಿ.ಶಿವರಾಜು ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಜೀವನದಲ್ಲಿ ಶಿಸ್ತು ಬಹಳ ಮುಖ್ಯವಾದದ್ದು, ಯಾವ ವಿದ್ಯಾರ್ಥಿ ಶಿಸ್ತು ಅಳವಡಿಸಿಕೊಂಡು ಓದು ತ್ತಾರೋ ಅವರು ಶೈಕ್ಷಣಿಕವಾಗಿ ಮುನ್ನಡೆ ಯಲು ಸಹಕಾರಿಯಾಗಲಿದೆ ಎಂದರು.

ಮೈಸೂರು ವಿಭಾಗೀಯ ಅಡಿಷನಲ್ ರೀಜನಲ್ ಕಮಿಷನರ್ ಪಿ.ಶಿವರಾಜು, ಪ್ರಾಂಶುಪಾಲರಾದ ಮಾರುತಿ, ಮಾಚಮ್ಮ, ಆಡಳಿತಾಧಿಕಾರಿ ನವೇದಿತಾನಾಗೇಶ್, ಡಾ.ವಿ.ಟಿ.ರಘುಸ್ವಾಮಿ, ಡಾ.ನಿಶಾಂತ್ ನಾಯ್ಡು, ಪಿಆರ್‌ಓ ಗೋಪಾಲ್ ಸೇರಿದಂತೆ ಹಲವರು ಹಾಜರಿದ್ದರು.

ಯಶಸ್ವಿನಿ ಯೋಜನೆ ನೋಂದಣಿಗೆ ಮನವಿ

ಮಂಡ್ಯನ6– ಸಹಕಾರ ಸಂಘಗಳ ಸದಸ್ಯರು ಆರೋಗ್ಯ ರಕ್ಷಾ ಯೋಜನೆಗೆ ನೋಂದಾ ಯಿಸಿಕೊಳ್ಳುವಂತೆ ಮನ್‌ಮುಲ್ ಉಪಾಧ್ಯಕ್ಷ ರಘುನಂದನ್ ಮನವಿ ಮಾಡಿದರು.

ಸಹಕಾರ ಸಂಸ್ಥೆಗಳ ಷೇರುದಾರರು ಈ ಯೋಜನೆಗೆ ಒಳಪಡಲಿದ್ದು, 5 ಲಕ್ಷದವರೆಗೆ ವೈದ್ಯಕೀಯ ವೆಚ್ಚ ಲಭಿಸಲಿದೆ. ಜಿಲ್ಲೆಯ ಎಲ್ಲ ಹಾಲು ಉತ್ಪಾದಕರ ಸಂಘಗಳ ಸದಸ್ಯರು, ಸಹಕಾರ ಸಂಘಗಳ ಸದಸ್ಯರು ಹಾಗೂ ಗ್ರಾಮೀಣ ಭಾಗದ ಮಹಿಳಾ ಸಂಘದ ಸದಸ್ಯರು ನೋಂದಾಯಿಸಿಕೊಂಡು ಇದರ ಸದುಪಯೋ ಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಗ್ರಾಮೀಣ ಭಾಗದ ನಾಲ್ವರು ಸದಸ್ಯರಿರುವ ಪ್ರತಿ ಕುಟುಂಬ ವರ್ಷಕ್ಕೆ 500 ರೂ. ಪಾವತಿಸ ಬೇಕು. ನಾಲ್ಕಕ್ಕಿಂತ ಹೆಚ್ಚು ಮಂದಿ ಇದ್ದರೆ ಹೆಚ್ಚುವರಿಯಾಗಿ 100 ರೂ. ಪಾವತಿಸಬೇಕು. ಅಂತೆಯೇ ನಗರ ಪ್ರದೇಶದ ನಾಲ್ಕು ಮಂದಿ ಇರುವ ಕುಟುಂಬ 1000 ರೂ. ಪಾವತಿಸ ಬೇಕಿದ್ದು, ಹೆಚ್ಚುವರಿ ಸದಸ್ಯರಿದ್ದರೆ 200 ರೂ. ಹೆಚ್ಚುವರಿಯಾಗಿ ಪಾವತಿಸಬೇಕಿದೆ ಎಂದರು. ಪ್ರತಿಯೊಬ್ಬ ಸಂಘದ ಸದಸ್ಯರು ನೋಂದಾಯಿಸಿಕೊಂಡು ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ಮನವಿ ಮಾಡಿದ್ದಾರೆ.

ಜೆಡಿಎಸ್ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಗಿಲ್ಲ



ಕೆ.ಆರ್.ಪೇಟೆ, ನ.6– ಆಪರೇಷನ್ ಕಮಲದ ಮೂಲಕ ಅಧಿಕಾರ ಹಿಡಿದಿರುವ ಬಿಜೆಪಿಗರಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಹಾಗೂ ಜೆಡಿಎಸ್ ಬಗ್ಗೆ ಲಘುವಾಗಿ ಮಾತನಾಡುವ ನೈತಿ ಕತೆಯಿಲ್ಲ ಎಂದು ಕೆ.ಆರ್. ಪೇಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡ ಹಾಗೂ ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು ಕಿಡಿಕಾರಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕಣ್ಣೀರ ನಾಯಕ ಎಂದು ಟೀಕಿಸಿರುವ ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿಕೆಯನ್ನು ಖಂಡಿಸಿದ್ದಾರೆ.

ರಾಜ್ಯದ ಇತಿಹಾಸದಲ್ಲಿ ಬಿಜೆಪಿ ಎಂದೂ ಪೂರ್ಣ ಪ್ರಮಾಣದಲ್ಲಿ ಜನಾಭಿಪ್ರಾಯ ಪಡೆದು ಅಧಿಕಾರಕ್ಕೆ ಬಂದಿಲ್ಲ. ದೇಶದ ಎಲ್ಲೆಡೆ ಬಿಜೆಪಿ ಆಪರೇಷನ್ ಕಮಲದ ಮೂಲಕ ಸದ್ದು ಮಾಡುತ್ತಿದ್ದೆಯೇ ವಿನಃ ಜನ ಬೆಂಬಲದ ಮೇಲೆ ಆಡಳಿತ ನಡೆಸು ತ್ತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ನಂಬಿಕೆಯಿರದ ಬಿಜೆಪಿಗರು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಮಾತನಾಡುವ ನೈತಿಕತೆಯನ್ನು ಕಳೆದು ಕೊಂಡಿದ್ದಾರೆ ಎಂದು ಟೀಕಿಸಿದ್ದಾರೆ.

ಕೆ.ಆರ್.ಪೇಟೆ ಗೆಲುವು ಆಕಸ್ಮಿಕ: ಕಳೆದ ವಿಧಾನಸಭಾ ಉಪ ಚುನಾವಣೆಯಲ್ಲಿ ಹೋಬಳಿ ಗೊಬ್ಬರು ಸಚಿವರನ್ನು ನಿಯೋಜನೆ ಮಾಡಿ, ಆಡಳಿತ ಯಂತ್ರವನ್ನು ದುರುಪಯೋಗ ಪಡಿಸಿಕೊಂಡು ಕೆ.ಆರ್.ಪೇಟೆ ವಿಧಾನಸಭಾ ಉಪ ಚುನಾ ವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿತು. ಅದು ನಿಜವಾದ ಮತದಾರರ ಒಲವಿನ ಗೆಲುವಾಗಿರಲಿಲ್ಲ. ಮತದಾರರ ಖರೀದಿ ಮಾಡಿ ಸಾಧಿಸಿದ ಗೆಲುವಾಗಿದೆ. ಸಚಿವ ಕೆ.ಸಿ.ನಾರಾಯಣಗೌಡರ ಆಕಸ್ಮಿಕ ಗೆಲುವನ್ನೆ ಮಾನದಂಡವನ್ನಾಗಿಸಿಕೊಂಡಿ ರುವ ರಾಜ್ಯ ಬಿಜೆಪಿ ಅಧ್ಯಕ್ಷರು ಮಂಡ್ಯ ಜಿಲ್ಲೆಯಲ್ಲಿ ಕನಿಷ್ಠ ನಾಲ್ಕು ಕ್ಷೇತ್ರಗಳಲ್ಲಿ ಜಯಗಳಿಸುವ ಮಾತುಗಳನ್ನಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಜೆಡಿಎಸ್ ಸುಭದ್ರವಾಗಿದೆ. 2023ಕ್ಕೆ ಜಿಲ್ಲೆಯ ಎಲ್ಲಾ ಏಳು ವಿಧಾನ ಸಭಾ ಕ್ಷೇತ್ರಗಳಲ್ಲೂ ಜೆಡಿಎಸ್ ಅಭ್ಯರ್ಥಿ ಗಳು ಜಯಗಳಿಸಲಿದ್ದು, ನಮ್ಮ ನಾಯಕ ಹೆಚ್.ಡಿ.ಕುಮಾರಸ್ವಾಮಿ ಮತ್ತೆ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಕಮಲ ಅರಳಿಸುವ ಕನಸು ಕಾಣುತ್ತಿರುವ ರಾಜ್ಯ ಬಿಜೆಪಿ ನಾಯಕರಿಗೆ ಮುಂದಿನ ವಿಧಾನ ಸಭಾ ಚುನಾ ವಣೆಯಲ್ಲಿ ಜಿಲ್ಲೆಯ ಜನ ತಕ್ಕ ಪ್ರತ್ಯುತ್ತರ ನೀಡಲಿದ್ದಾರೆ. ಜೆಡಿಎಸ್ ಪಕ್ಷ ಮತ್ತು ಜೆಡಿಎಸ್ ನಾಯಕರ ಬಗ್ಗೆ ಮಾತನಾಡುವ ಮುನ್ನ ರಾಜ್ಯ ಬಿಜೆಪಿ ಅಧ್ಯಕ್ಷರು ಎಚ್ಚರಿಕೆ ವಹಿಸಬೇಕು. ಕೆ.ಆರ್.ಪೇಟೆ ಮತದಾರರು ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷವನ್ನು ತಿರಸ್ಕರಿಸುವ ಮೂಲಕ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿಯನ್ನು ಬೇರು ಸಮೇತ ಕಿತ್ತು ಹಾಕಲಿದ್ದಾರೆ ಎಂದರು.

ಸಣ್ಣೇಗೌಡ ನಿಧನ



ಕೆ.ಆರ್.ಪೇಟೆ,ನ.6– ತಾಲೂಕಿನ ಹೊಸಹೊಳಲು ಗ್ರಾಮದ ಹಿರಿಯ ಮುಖಂಡರಾದ ಸಣ್ಣೇಗೌಡ(75) ಇಂದು ನಿಧನರಾದರು.

ಮೃತರು ತಾಲೂಕು ಪಂಚಾಯಿತಿ ಸದಸ್ಯರಾದ ಹೆಚ್.ಎಸ್.ರಾಜು ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಹೊಸಹೊಳಲು ಗ್ರಾಮದಲ್ಲಿ ನಡೆಯಿತು. ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಟಿ20 ವಿಶ್ವಕಪ್: ಸೆಮಿಫೈನಲ್‌ಗೆ ಟೀಂ ಇಂಡಿಯಾ ದಾಪುಗಾಲು

ಜಿಂಬಾಬ್ವೆ ವಿರುದ್ಧ ಭಾರತಕ್ಕೆ ಭರ್ಜರಿ ಜಯ



ಮೆಲ್ಬರ್ನ್, ನ.6– ಲೀಗ್ ಹಂತದ ಕೊನೆ ಪಂದ್ಯದಲ್ಲಿ ಅಧಿಕಾರಯುತ ಆಟ ವಾಡಿದ ಭಾರತ ಜಿಂಬಾಬ್ವೆಯನ್ನು 71 ರನ್‌ಗಳಿಂದ ಬಗ್ಗು ಬಡಿದಿದೆ. ಪಂದ್ಯಕ್ಕೂ ಮೊದಲೇ ಟಿ20 ವಿಶ್ವಕಪ್ ಪಂದ್ಯಾವಳಿಯ ಸೆಮಿಫೈನಲ್ ಪ್ರವೇಶಿಸಿದ್ದ ಭಾರತ ಜಿಂಬಾಬ್ವೆ ವಿರುದ್ಧ ಗೆಲುವು ಸಾಧಿಸಿ 8 ಅಂಕಗಳೊಂ ದಿಗೆ 'ಬಿ' ಗುಂಪಿನ ಅಗ್ರಸ್ಥಾನಿಯಾಗಿ ಸೆಮಿಫೈನಲ್ಸ್‌ಗೆ ದಾಪುಗಾಲು ಹಾಕಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 186 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ 15ರನ್ ಗಳಿಸಿ ಬಹುಬೇಗ ಔಟಾದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಕನ್ನಡಿಗ ಕೆ.ಎಲ್.ರಾಹುಲ್ ಹಾಗೂ ವಿರಾಟ್ ಕೊಹ್ಲಿ 60 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಕೊಹ್ಲಿ 26 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದು ಬದಿಯಲ್ಲಿ ಅಬ್ಬರಿಸಿದ ರಾಹುಲ್ 35 ಎಸೆತಗಳಲ್ಲಿ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 51 ರನ್ ಗಳಿಸಿ ಭಾರೀ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರು. ಟೂರ್ನಿಯಲ್ಲಿ ಮೊದಲ ಬಾರಿ ಆಡುವ ಅವಕಾಶ ಪಡೆದ ರಿಷಭ್ ಪಂತ್ 3 ರನ್‌ಗೆ ವಿಕೆಟ್ ಕೈಚೆಲ್ಲಿದರು.

ಸೂರ್ಯ ಅಬ್ಬರ: ಒಂದು ಹಂತದಲ್ಲಿ ಭಾರತ ತಂಡದ ಸ್ಕೋರ್ 160ರ ಗಡಿ ದಾಟುವುದು ಕಷ್ಟ ಎಂಬಂತಿತ್ತು. ಆದರೆ ಸ್ಲಾಗ್ ಓವರ್‌ಗಳಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನ ನೀಡಿದ ಸೂರ್ಯ ಕುಮಾರ್ ಯಾದವ್ ಕೇವಲ 22 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು. 360 ಶೈಲಿಯಲ್ಲಿ ಬ್ಯಾಟ್ ಬೀಸಿದ ಸೂರ್ಯ, ಎದುರಿಸಿದ 25 ಎಸೆತಗಳಲ್ಲಿ 6 ಬೌಂಡರಿ ಮತ್ತು 4 ಸಿಕ್ಸರ್‌ಗಳೊಂದಿಗೆ 61 ರನ್ ಸಿಡಿಸಿ ಅಜೇಯರಾಗಿ ಉಳಿದರು. ಇವರ ನೆರವಿನಿಂದ ಭಾರತ ಕೊನೆಯ 5 ಓವರ್‌ಗಳಲ್ಲಿ 80 ರನ್ ಗಳಿಸಿತು. ಉಳಿದಂತೆ ಹಾರ್ದಿಕ್ ಪಾಂಡ್ಯ 18 ರನ್ ಸಿಡಿಸಿದರು. ಜಿಂಬಾಬ್ವೆ ಪರ ಸೀನ್ ವಿಲಿಯಮ್ಸ್‌ನ್ 2, ಮುಜರಬಾನಿ, ಸಿಕಂದರ್ ರಾಜಾ, ನಾಗರವ ತಲಾ ಒಂದೊಂದು ವಿಕೆಟ್ ಕಬಳಿಸಿದರು.

187 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಜಿಂಬಾಬ್ವೆ 17.2 ಓವರ್‌ಗಳಲ್ಲಿ 115ರನ್‌ಗೆ ಆಲೌಟ್ ಆಗುವ ಮೂಲಕ ಸೋಲು ಒಪ್ಪಿಕೊಂಡಿತು. ಇನ್ನಿಂಗ್ಸ್ ಆರಂಭದಿಂದಲೇ ಜಿಂಬಾಬ್ವೆ ವಿಕೆಟ್ ಕಳೆದುಕೊಳ್ಳಲಾರಂಭಿ ಸಿತು. ಮಾಧೆವೆರೆ ಮತ್ತು ಚಕಬ್ವಾ ಶೂನ್ಯಕ್ಕೆ ಔಟಾದರು. ಸಿಕಂದರ್ ರಾಜಾ ಮತ್ತು ರಿಯಾನ್ ಬರ್ಲ್ ಅವರು ಸ್ವಲ್ಪ ಪ್ರತಿ ರೋಧ ತೋರಿದರು. ರಜಾ 34 ರನ್ ಗಳಿಸಿದರೆ ಬರ್ಲ್ 35 ರನ್ ಬಾರಿಸಿದರು. ಸೀನ್ ವಿಲಿಯನ್ಸ್‌ನ್ 11, ಕ್ರೈವ್ ಎರ್ವಿನ್ 13 ರನ್ ಗಳಿಸಿದರು. ಭಾರತದ ಪರ ಅಶ್ವಿನ್ 3, ಹಾರ್ದಿಕ್ ಮತ್ತು ಶಮಿ ತಲಾ 2, ಭುವನೇಶ್ವರ್ ಕುಮಾರ್, ಅರ್ಶದೀಪ್ ಸಿಂಗ್ ಹಾಗೂ ಅಕ್ಷರ್ ಪಟೇಲ್ ಒಂದೊಂದು ವಿಕೆಟ್ ಉರುಳಿಸಿದರು. ಸೂರ್ಯಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಫೈನಲ್‌ನಲ್ಲಿ ಭಾರತ–ಪಾಕಿಸ್ತಾನ ಮತ್ತೆ ಮುಖಾಮುಖಿ?



ಮೆಲ್ಬರ್ನ್: ಈ ಬಾರಿಯ ವಿಶ್ವಕಪ್‌ನಲ್ಲಿ ಭಾರತ–ಪಾಕ್ ತಂಡಗಳು ಸೆಮಿಫೈನಲ್ ಪ್ರವೇಶಿ ಸಿದ್ದು, ಉಭಯ ತಂಡಗಳು ಫೈನಲ್ ಪ್ರವೇಶಕ್ಕೆ ಹೊಂಚು ಹಾಕುತ್ತಿವೆ. ಲೀಗ್ ಹಂತದ ಪಂದ್ಯದಲ್ಲಿ ಭಾರತ ಪಾಕಿಸ್ತಾನವನ್ನು ಸೋಲಿ ಸಿತ್ತು. ಇದೀಗ ಭಾರತ ಹಾಗೂ ಪಾಕಿಸ್ತಾನ ಫೈನಲ್ ಪಂದ್ಯದಲ್ಲಿ ಮತ್ತೆ ಮುಖಾಮುಖಿ ಯಾಗುವ ಅವಕಾಶವಿರುವುದರಿಂದ 2007ರ ಇತಿಹಾಸ ಮತ್ತೆ ಮರುಕಳಿಸುತ್ತಾ ಅನ್ನುವ ಚರ್ಚೆ ಶುರುವಾಗಿದೆ.

2007ರ ಟಿ20 ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ಹಾಗೂ ಪಾಕಿಸ್ತಾನ ಮುಖಾಮುಖಿಯಾಗಿತ್ತು. ಅತ್ಯಂತ ರೋಚಕ ಹೋರಾಟ ಟೈನಲ್ಲಿ ಅಂತ್ಯಗೊಂಡಿತ್ತು. ಹೀಗಾಗಿ ಗೆಲುವು ನಿರ್ಧರಿಸಲು ಬಾಲ್‌ಔಟ್ ಮೊರೆ ಹೋಗಲಾಗಿತ್ತು. ಈ ರೋಚಕ ಹೋರಾಟದಲ್ಲಿ ಭಾರತ ಗೆಲುವು ದಾಖಲಿಸಿತ್ತು. 2022ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತನ್ನ ಮೊದಲ ಹೋರಾಟವನ್ನು ಪಾಕಿಸ್ತಾನ ವಿರುದ್ಧವೇ ಆಡಿದೆ. ಈ ಹೋರಾಟವೂ ಅತ್ಯಂತ ರೋಚಕವಾಗಿತ್ತು. ಕೊನೆಯ ಎಸೆತದಲ್ಲಿ ಭಾರತ ರೋಚಕ ಗೆಲುವು ದಾಖಲಿಸಿತ್ತು. ಹೀಗಾಗಿ ಫೈನಲ್‌ನಲ್ಲಿ ಭಾರತ–ಪಾಕಿಸ್ತಾನ ತಂಡಗಳೇ ಮುಖಾ ಮುಖಿಯಾಗಲಿ ಎಂದು ಕ್ರಿಕೆಟ್ ಅಭಿಮಾನಿಗಳು ಜಪ ಆರಂಭಿಸಿದ್ದಾರೆ.

ಸೆಮೀಸ್‌ಗೆ ಲಗ್ಗೆ: ಆಸ್ಟ್ರೇಲಿಯಾದಲ್ಲಿ ನಡೆಯು ತ್ತಿರುವ ಟಿ20 ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಯ 'ಎ' ಗುಂಪಿನಿಂದ ನ್ಯೂಜಿಲೆಂಡ್, ಇಂಗ್ಲೆಂಡ್ ಹಾಗೂ 'ಬಿ' ಗುಂಪಿನಿಂದ ಭಾರತ, ಪಾಕಿಸ್ತಾನ ತಂಡಗಳು ಸೆಮಿಫೈನಲ್ಸ್‌ಗೆ ಲಗ್ಗೆ ಹಾಕಿವೆ.

'ಎ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿರುವ ನ್ಯೂಜಿಲೆಂಡ್ ಮತ್ತು 'ಬಿ' ಗುಂಪಿನ ಎರಡನೇ ಸ್ಥಾನದಲ್ಲಿರುವ ಪಾಕಿಸ್ತಾನ ನ.9ರಂದು ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆಯುವ ಮೊದಲ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಅದೇ ರೀತಿ, 'ಬಿ' ಗುಂಪಿನಲ್ಲಿ ಮೊದಲ ಸ್ಥಾನದಲ್ಲಿರುವ ಭಾರತ 'ಎ' ಗುಂಪಿನ ಎರಡನೇ ಸ್ಥಾನದಲ್ಲಿರುವ ಇಂಗ್ಲೆಂಡ್ ನ.10ರಂದು ಅಡಿಲೇಡ್‌ನಲ್ಲಿ ನಡೆಯಲಿರುವ ಎರಡನೇ ಸೆಮಿಫೈನಲ್‌ನಲ್ಲಿ ಎದುರಾಗಲಿವೆ. ಈ ಪಂದ್ಯಗಳಲ್ಲಿ ಗೆಲ್ಲುವವರು ನ.13ರಂದು ಮೆಲ್ಬರ್ನ್‌ನಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಿದ್ದಾರೆ.

ಟೂರ್ನಿಯಿಂದ ಹೊರಬಿದ್ದ ದ.ಆಫ್ರಿಕಾ



ಅಡಿಲೇಡ್, ನ.6– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ನೆದರ್ಲೆಂಡ್ಸ್ ಬಲಿಷ್ಠ ದಕ್ಷಿಣ ಆಫ್ರಿಕಾ ವಿರುದ್ಧ 13 ರನ್‌ಗಳ ಜಯ ಸಾಧಿಸಿದೆ.

ಏಕದಿನ ಹಾಗೂ ಟಿ20 ವಿಶ್ವಕಪ್ ಒಳಗೊಂಡಂತೆ ಐಸಿಸಿಯ ಪ್ರಮುಖ ಟೂರ್ನಿ ಗಳಲ್ಲಿ ವೈಫಲ್ಯ ಅನುಭವಿಸುವುದಕ್ಕೆ ದಕ್ಷಿಣ ಆಫ್ರಿಕಾಕ್ಕೆ 'ಚೋಕರ್' ಎಂಬ ಹಣೆಪಟ್ಟಿ ಲಭಿಸಿದ್ದು, ಈ ಬಾರಿಯೂ ಆ ಹಣೆಪಟ್ಟಿ ಕಳಚುವಲ್ಲಿ ತಂಡ ಎಡವಿದ್ದು, ನೆದರ್ಲೆಂಡ್ಸ್ ವಿರುದ್ಧ ಸೋಲು ಅನುಭವಿಸಿದ ದ.ಆಫ್ರಿಕಾ ವಿಶ್ವಕಪ್ ಟೂರ್ನಿಯಿಂದ ಹೊರಬಿದ್ದಿದೆ.

ಅಡಿಲೇಡ್ ಓವಲ್‌ನಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ನೆದರ್ಲೆಂಡ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು. ತಂಡದ ಪರ ಸ್ಟೀಫನ್ ಮೈಬರ್ಗ್ 37, ಮ್ಯಾಕ್ಸ್ ಒಡೌಡ್ 29, ಟಾಮ್ ಕೂಪರ್ 35 ಹಾಗೂ ಕಾಲಿನ್ ಆಕರ್‌ಮನ್ 41, ಎಡ್ವರ್ಡ್ಸ್ 12ರನ್ ಗಳಿಸಿದರು. ದ.ಆಫ್ರಿಕಾ ಪರ ಕೇಶವ್ ಮಹಾರಾಜ್ 2, ನೋಟ್ಜೆ, ಮಾಕರಮ್ ತಲಾ ಒಂದೊಂದು ವಿಕೆಟ್ ಪಡೆದರು.

ನೆದರ್ಲೆಂಡ್ಸ್ ನೀಡಿದ ಗುರಿ ಬೆನ್ನತ್ತಿದ ದ.ಆಫ್ರಿಕಾ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಲಷ್ಟೇ ಶಕ್ತವಾಯಿತು. ಸೆಮಿಫೈನಲ್ ಪ್ರವೇಶಿಸಲು ಗೆಲುವು ಅನಿವಾರ್ಯವಾಗಿದ್ದ ಪಂದ್ಯದಲ್ಲಿ ಕ್ವಿಂಟನ್ ಡಿಕಾಕ್ 13, ಬವುಮಾ 20, ರಿಲೀ ರೂಸೊ 25, ಏಡನ್ ಮರ್ಕರಂ, ಡೇವಿಡ್ ಮಿಲ್ಲರ್ ತಲಾ 17 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಬ್ರೆಂಡನ್ ಗ್ಲೋವರ್ 3, ಫ್ರೆಡ್ ಕ್ಲಾಸೆನ್, ಬಸ್ ಡಿ ಲೀಡ್ 2, ಮೆಕೆರನ್ 1 ವಿಕೆಟ್ ಪಡೆದರು. ಕಾಲಿನ್ ಆಕರ್‌ಮನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅದೃಷ್ಟದ ಮೇಲೆ ಸೆಮಿಫೈನಲ್‌ಗೆ ಪಾಕ್ ಎಂಟ್ರಿ



ಅಡಿಲೇಡ್, ನ.6– ಟಿ20 ವಿಶ್ವಕಪ್ ಟೂರ್ನಿ ಲೀಗ್ ಹಂತದಲ್ಲೇ ಹೊರ ಬೀಳುವ ಆತಂಕದಲ್ಲಿದ್ದ ಪಾಕಿಸ್ತಾನ ಅದೃಷ್ಟದ ನೆರವಿನೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

ಅಡಿಲೇಡ್ ಓವಲ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬಾಬರ್ ಅಜಂ ಬಳಗ ಬಾಂಗ್ಲಾದೇಶ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿತು. ಇದರೊಂದಿಗೆ ಆರು ಪಾಯಿಂಟ್ಸ್ ಕಲೆಹಾಕಿ 'ಗುಂಪು 2' ರಲ್ಲಿ ಎರಡನೇ ಸ್ಥಾನ ಪಡೆದು ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿತು.

ಇದೇ ತಾಣದಲ್ಲಿ ಬೆಳಿಗ್ಗೆ ನಡೆದಿದ್ದ ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡ ದಕ್ಷಿಣ ಆಫ್ರಿಕಾವನ್ನು ಮಣಿಸಿದ್ದು ಕೂಡಾ, ಪಾಕ್ ಸೆಮಿ ಹಾದಿಯನ್ನು ಸುಗಮ ಗೊಳಿಸಿತು. ಮೊದಲು ಬ್ಯಾಟ್ ಮಾಡಿದ ಶಕೀಬ್ ಅಲ್ ಹಸನ್ ಬಳಗವನ್ನು 8 ವಿಕೆಟ್‌ಗಳಿಗೆ 127 ರನ್‌ಗಳಿಗೆ ನಿಯಂ ತ್ರಿಸಿದ ಪಾಕ್, ಬಳಿಕ 18.1 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗೆಲುವು ಸಾಧಿ ಸಿತು. 22 ರನ್‌ಗಳಿಗೆ 4 ವಿಕೆಟ್ ಪಡೆದು ಎದುರಾಳಿ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದ ವೇಗಿ ಶಾಹೀನ್ ಶಾ ಆಫ್ರಿದಿ, ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿ ದರು.ಸುಲಭ ಗುರಿ ಬೆನ್ನಟ್ಟಿದ ಪಾಕ್ ತಂಡಕ್ಕೆ ಮೊಹಮ್ಮದ್ ರಿಜ್ವಾನ್ 32, ಬಾಬರ್ 25, ಮೊಹಮ್ಮದ್ ಹ್ಯಾರಿಸ್ 31 ಹಾಗೂ ಶಾನ್ ಮಸೂದ್ ಔಟಾಗದೆ 24 ರನ್ ಗಳಿಸುವ ಮೂಲಕ ಜವಾಬ್ದಾರಿ ಯುತ ಆಟವಾಡಿ ಗೆಲುವಿಗೆ ಕಾರಣರಾದರು.

ಮಕ್ಕಳ ಸುಪ್ತ ಪ್ರತಿಭೆ ಪ್ರೋತ್ಸಾಹಿಸಿ; ಕೀಳರಿಮೆಗೆ ಆಸ್ಪದ ನೀಡಬೇಡಿ



ಮೈಸೂರಿನ ಮಾನಸಗಂಗೋತ್ರಿ ಸೆನೆಟ್ ಭವನದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ನಡೆದ ರಾಜ್ಯೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್‌ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ನ.6(ಎಸ್‌ಬಿಡಿ)– ಪರೀಕ್ಷೆ ಯಲ್ಲಿ ಕಡಿಮೆ ಅಂಕ ಪಡೆಯುವ ಮಕ್ಕ ಳಲ್ಲಿ ಕೀಳರಿಮೆ ಬೆಳೆಯಲು ಅವಕಾಶ ನೀಡದೆ, ಅವರಲ್ಲಿ ಸುಪ್ತವಾಗಿರುವ ಪ್ರತಿಭೆ ಯನ್ನು ಗುರುತಿಸಿ ಪ್ರೋತ್ಸಾಹಿಸಬೇಕೆಂದು ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್.ರಘು ನಾಥ್ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಮೈಸೂರಿನ ಮಾನಸ ಗಂಗೋತ್ರಿ ಸೆನೆಟ್ ಭವನದಲ್ಲಿ ಆಯೋಜಿ ಸಿದ್ದ ಕನ್ನಡ ರಾಜ್ಯೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್ ಕುಮಾರ್ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರೋತ್ಸಾಹಿ ಸುತ್ತಿರುವುದು ಉತ್ತಮ ಕಾರ್ಯ. ಇದ ರೊಂದಿಗೆ ಕಡಿಮೆ ಅಂಕ ಪಡೆದಿರುವ ಮಕ್ಕಳು ಪ್ರತಿಭಾನ್ವಿತರಲ್ಲವೇ? ಎಂದು ನಾವು ಆತ್ಮಾವಲೋಕನವನ್ನೂ ಮಾಡಿಕೊಳ್ಳ ಬೇಕು. ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸ ದಿದ್ದರೂ ಅವರಲ್ಲಿರುವ ಸಂಗೀತ, ಕ್ರೀಡೆ, ಭಾಷಣ, ಚಿತ್ರಕಲೆ ಇನ್ನಿತರ ಪ್ರತಿಭೆಯನ್ನು ಗುರುತಿಸಿ ಏಕೆ ಪ್ರೋತ್ಸಾಹಿಸುವುದಿಲ್ಲ?. ಹೆಚ್ಚು ಅಂಕ ಪಡೆದವರನ್ನು ಪುರಸ್ಕರಿಸು ವುದರಿಂದ ಇತರೆ ಮಕ್ಕಳಿಗೂ ಪ್ರೇರಣೆ ಯಾಗಬಹುದು. ಹಾಗೆಯೇ ಅವರಲ್ಲಿ ಋಣಾತ್ಮಕ ಚಿಂತನೆಗಳೂ ಮೂಡಬಹುದು. ಇದಕ್ಕೆ ಆಸ್ಪದ ಮಾಡಿಕೊಡದೆ ಕಡಿಮೆ ಅಂಕ ಪಡೆದ ಮಕ್ಕಳನ್ನೂ ಪ್ರೋತ್ಸಾಹಿಸಬೇಕಿದೆ ಎಂದು ಕಿವಿಮಾತು ಹೇಳಿದರು.

ಹೆಚ್ಚು ಅಂಕ ಪಡೆದವರು ಉನ್ನತ ಸಂಸ್ಥೆಗಳಲ್ಲಿ ಕೆಲಸ ಗಿಟ್ಟಿಸಬಹುದು. ಆದರೆ ಕಡಿಮೆ ಅಂಕ ಪಡೆದವರು ಅಂತಹ ಉನ್ನತ ಸಂಸ್ಥೆಗಳನ್ನು ಸ್ಥಾಪಿಸುತ್ತಾರೆ. ಇದಕ್ಕೆ ಇನ್ಫೋಸಿಸ್ ಒಂದು ಉದಾಹರಣೆ. ವಿಪ್ರೋದಲ್ಲಿ ನನಗೆ ಕೆಲಸ ಸಿಕ್ಕಿದ್ದರೆ ಇನ್ಫೋಸಿಸ್ ಸಂಸ್ಥೆ ಹುಟ್ಟುಹಾಕಲು ಸಾಧ್ಯವಾಗುತ್ತಿರಲಿಲ್ಲ ಎಂದು ಸ್ವತಃ ನಾರಾಯಣಮೂರ್ತಿಯವರೇ ಹೇಳಿರುವುದು ನನಗೆ ನೆನಪಿದೆ. ಹಾಗಾಗಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಿರುವ ವಿದ್ಯಾರ್ಥಿಗಳು ಕೀಳರಿಮೆ ಬೆಳೆಸಿಕೊಳ್ಳದೆ ಗುಣಾತ್ಮಕ ಚಿಂತನೆಗಳೊಂದಿಗೆ ಮುನ್ನ ಡೆಯಿರಿ ಎಂದು ಸ್ಥೈರ್ಯ ತುಂಬಿದರು.

ಸಮಾರಂಭದಲ್ಲಿ ನಿವೃತ್ತಿ ಹೊಸ್ತಿಲ ಲ್ಲಿರುವ ಮೈಸೂರು ವಿವಿ ಕುಲಪತಿ ಪ್ರೊ. ಹೇಮಂತ್‌ಕುಮಾರ್ ಅವರನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಇದೇ ವೇಳೆ ಪ್ರತಿ ಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸ ಲಾಯಿತು. ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ ಹಾಗೂ ಡಾ.ಡಿ. ತಿಮ್ಮಯ್ಯ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ, ಗೌರವಾಧ್ಯಕ್ಷ ವೆಂಕಟೇಶ್, ಹಿರಿಯ ಉಪಾ ಧ್ಯಕ್ಷ ರುದ್ರಪ್ಪ, ಜಿಲ್ಲಾಧ್ಯಕ್ಷ ಜೆ.ಗೋವಿಂದ ರಾಜು, ಜಿಲ್ಲಾ ಹಿರಿಯ ಉಪಾಧ್ಯಕ್ಷ ಸುರೇಶ್ ಮಾಲಂಗಿ, ಪದಾಧಿಕಾರಿಗಳಾದ ಮೋಹನ್ ಕುಮಾರ್, ಮಾಲತೇಶ್, ಶಿವಾಜಿರಾವ್, ಶಿವಶಂಕರಮೂರ್ತಿ, ರಂಗಸ್ವಾಮಿ, ಮೋಹನ್‌ಕುಮಾರ್, ಮಹದೇವ್, ಅರುಣ್ ಕುಮಾರ್, ಉಮೇಶ್, ರಮೇಶ್, ಆನಂದ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಚೇಂದಂಡ ಕುಟುಂಬಕ್ಕೆ ಕೊಡವ ಹಾಕಿ ಕಪ್

ಕುಪ್ಪಂಡ ತಂಡಕ್ಕೆ ರನ್ನರ್ ಅಪ್ ಪ್ರಶಸ್ತಿ, ಕೊಡವ ಕೌಟುಂಬಿಕ ಹಾಕಿ ನಮ್ಮೆಗೆ ತೆರೆ



ಗೋಣಿಕೊಪ್ಪ ನ.6– ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಮೈದಾನದಲ್ಲಿ ಕೊಡವ ಹಾಕಿ ಅಕಾಡೆಮಿ ಆಯೋಜಿಸಿದ್ದ ಕೊಡವ ಕೌಟುಂಬಿಕ ಹಾಕಿ ಜನಕ ಪಾಂಡಂಡ ಎಂ. ಕುಟ್ಟಪ್ಪ ಜ್ಞಾಪಕಾರ್ಥದ ಕೊಡವ ಕೌಟುಂಬಿಕ ರಿಂಕ್ ಹಾಕಿ (5 ಎಸೈಡ್) ಚಾಂಪಿಯನ್ ಕಪ್ ಅನ್ನು ಚೇಂದಂಡ ಕುಟುಂಬ ಪಡೆದುಕೊಳ್ಳುವುದರ ಮೂಲಕ ಹಾಕಿ ಇತಿಹಾಸದಲ್ಲಿ 3ನೇ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದ ತಂಡವಾಗಿ ಹೊರಹೊಮ್ಮಿತು. ಫೈನಲ್‌ನಲ್ಲಿ ನಿರಾಸೆ ಅನುಭವಿಸಿದ ಕುಪ್ಪಂಡ (ಕೈಕೇರಿ) ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಭಾನುವಾರ ನಡೆದ ಅಂತಿಮ ಹಣಾಹಣಿಯಲ್ಲಿ ಚೇಂದಂಡ ತಂಡವು 8–2 ಗೋಲುಗಳ ಭರ್ಜರಿ ಗೆಲುವು ಸಾಧಿಸಿತು. ಚೇಂದಂಡ ಆಟಗಾರ ಉತ್ತಪ್ಪ 4 ಗೋಲು ಸಿಡಿಸಿದರು. ತಮ್ಮಯ್ಯ 2, ಕುಶಾಲಪ್ಪ ಬೋಪಣ್ಣ ತಲಾ ಒಂದೊಂದು ಗೋಲು ಹೊಡೆದರು. ಕುಪ್ಪಂಡ ಆಟಗಾರ ಕೆ.ಪಿ. ಸೋಮಯ್ಯ ಆಕರ್ಷಕ 2 ಗೋಲು ದಾಖಲಿಸಿದರು. ನಂತರ ಕುಪ್ಪಂಡ ತಂಡ ಗೋಲು ದಾಖಲಿಸಲಾಗದೆ ಸೋಲಿಗೆ ಶರಣಾಯಿತು.

ಸೆಮಿಫೈನಲ್‌ನಲ್ಲಿ ಚೇಂದಂಡವು ಪರದಂಡವನ್ನು 10–4 ಗೋಲುಗಳ ಅಂತರದಲ್ಲಿ ಮಣಿಸಿತು. ಚೇಂದಂಡ ತಮ್ಮಯ್ಯ, ಉತ್ತಪ್ಪ, ಬೋಪಣ್ಣ ತಲಾ 3 ಗೋಲು ದಾಖಲಿಸಿದರು. ಚೇಂದಂಡ ಸೋನು ಪೊನ್ನಣ್ಣ 1, ಪರದಂಡ ಕೀರ್ತನ್ 3, ಚಶ್ವಿನ್ 1 ಗೋಲು ಹೊಡೆದರು. ಕುಪ್ಪಂಡ (ಕೈಕೇರಿ) ತಂಡವು ನೆಲ್ಲಮಕ್ಕಡ ವಿರುದ್ಧ 5–4 ಗೋಲುಗಳ ರೋಚಕ ಗೆಲುವು ದಾಖಲಿಸಿತು. ಕುಪ್ಪಂಡ ಸೋಮಯ್ಯ 5 ಗೋಲು, ನೆಲ್ಲಮಕ್ಕಡ ಪೂವಣ್ಣ, ಅಪ್ಪಣ್ಣ ತಲಾ 2 ಗೋಲು ಹೊಡೆದರು. ಸೋಮಯ್ಯ ಅವರ ಸಾಕಷ್ಟು ಪ್ರಯತ್ನಗಳು ವಿಫಲಗೊಂಡು ಹೆಚ್ಚು ಗೋಲು ದಾಖಲಿಸಲಾಗದೆ ಪರದಾಡುವಂತಾಯಿತು.

ಅಕ್ಟೋಬರ್ 27 ರಿಂದ ನ.6 ರವರೆಗೆ ನಡೆದ ಕೊಡವ ಕೌಟುಂಬಿಕ ಹಾಕಿ ನಮ್ಮೆಗೆ ಭಾನುವಾರ ಸಂಭ್ರಮದ ತೆರೆ ಎಳೆಯಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಕ್ರೀಡಾಭಿಮಾನಿಗಳು ಹಾಕಿ ಆಟ ನೋಡಿ ಸಂಭ್ರಮಿಸಿದರು. ಹಾಕಿ ಟರ್ಫ್ ಮೈದಾನದಲ್ಲಿ ಮೊದಲ ಬಾರಿಗೆ ಕೊಡವ ಕೌಟುಂಬಿಕ ಹಾಕಿಯನ್ನು ಕಣ್ತುಂಬಿಕೊಂಡರು.

ಉತ್ತಮ: ಚೇಂದಂಡ ಅಪ್ಪಣ್ಣ ಮ್ಯಾನ್ ಆಫ್ ದ ಸೀರಿಸ್ ಪ್ರಶಸ್ತಿ ಪಡೆದುಕೊಂಡರು. ಮ್ಯಾನ್ ಆಫ್ ದ ಮ್ಯಾಚ್ ಪ್ರಶಸ್ತಿಯನ್ನು ಚೇಂದಂಡ ಸೋನು ಪೊನ್ನಣ್ಣ, ಉತ್ತಮ ಗೋಲ್ ಕೀಪರ್ ಪ್ರಶಸ್ತಿಯನ್ನು ಕುಪ್ಪಂಡ ಸುಬ್ಬಯ್ಯ ಪಡೆದುಕೊಂಡರು. 8 ಕಿರಿಯ ಆಟಗಾರರಿಗೆ ಅಪ್ ಕಮಿಂಗ್ ಬೆಸ್ಟ್ ಆಟಗಾರ ಬಹುಮಾನವನ್ನು ನೀಡಲಾಯಿತು. ಅಮ್ಮಂಡ ಗಂಗಮ್ಮ, ಮಾಳೇಟಿರ ದಿಶಾ ಪೊನ್ನಮ್ಮ, ಮುಕ್ಕಾಟೀರ ಕಾವ್ಯ, ಶಿವ ಚಾಳಿಯಂಡ ದೇಚಕ್ಕ, ತಿರ್‌ಟೀರ ಭುವನ್, ನೂರೇರ ಶಾನ್ ಚಿಣ್ಣಪ್ಪ, ಬೊಟ್ಟೋಳಂಡ ಧ್ಯಾನ್, ಕುಮ್ಮಂಡ ನಾಣಯ್ಯ ಹಾಕಿ ಸ್ಟಿಕ್ ಬಹುಮಾನ ಸ್ವೀಕರಿಸಿದರು.

ಟೂರ್ನಿ ನಿರ್ದೇಶಕರಾಗಿ ಬಡಕಡ ದೀನಾ ಪೂವಯ್ಯ, ಅಂಪೈರ್ ಕಮಿಟಿ ಮುಖ್ಯಸ್ಥರಾಗಿ ಬುಟ್ಟಿಯಂಡ ಚಂಗಪ್ಪ, ಪಂದ್ಯದ ಅಂಪೈರ್ ಆಗಿ ಕರವಂಡ ಅಪ್ಪಣ್ಣ, ಬೊಳ್ಳಚಂಡ ನಾಣಯ್ಯ, ಕಾರ್ಯನಿರ್ವಹಿಸಿದರು.

ಸನ್ಮಾನ; ಒಲಿಂಪಿಯನ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ವೊಳ್ಳೆರ ಪಿ.ಗಣೇಶ್ ಅವರನ್ನು ಸನ್ಮಾನಿಸಲಾಯಿತು.

ಕ್ರೀಡಾಂಗಣಕ್ಕೆ ಕುಟ್ಟಪ್ಪ ಹೆಸರು: ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಕ್ರೀಡಾಂಗಣಕ್ಕೆ ಕೊಡವ ಕೌಟುಂಬಿಕ ಹಾಕಿ ಜನಕ ಪಾಂಡಂಡ ಎಂ ಕುಟ್ಟಪ್ಪ ಅವರ ಹೆಸರು ಹಾಕುವಂತೆ ಸಮಾರೋಪ ಸಮಾರಂಭದಲ್ಲಿ ಕೊಡವ ಹಾಕಿ ಅಕಾಡೆಮಿ ಒತ್ತಾಯಿಸಿತು. ಶಾಸಕ ಕೆ.ಜಿ. ಬೋಪಯ್ಯ ಅವರಿಗೂ ಮನವಿ ಸಲ್ಲಿಸಲಾಯಿತು.

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ. ಬೋಪಣ್ಣ ಅಧ್ಯಕ್ಷತೆಯಲ್ಲಿ ಸಮಾರೋಪ ಕಾರ್ಯಕ್ರಮ ನಡೆಯಿತು. ಶಾಸಕ ಕೆ.ಜಿ.ಬೋಪಯ್ಯ, ಮಡಿಕೇರಿ ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಪಿ. ಸುಜಾ ಕುಶಾಲಪ್ಪ, ಪಾಂಡಂಡ ಎಂ. ಕುಟ್ಟಪ್ಪ ಅವರ ಪತ್ನಿ ಪಾಂಡಂಡ ಲೀಲಾ ಕುಟ್ಟಪ್ಪ, ಅಂತರ ರಾಷ್ಟ್ರೀಯ ಹಾಕಿ ತೀರ್ಪುಗಾರ ಅಚ್ಚಾಳೆರ ಬಿ. ಪಳಂಗಪ್ಪ, ಕಾಫಿ ಬೆಳೆಗಾರ ಬಯವಂಡ ಮಹಾಬಲ, ಹಾಕಿ ಕೂರ್ಗ್ ಉಪಾಧ್ಯಕ್ಷ ಬಲ್ಯಾಟಂಡ ಪಾರ್ಥ ಚಂಗಪ್ಪ, ಕೊಡಗು ಜಿಲ್ಲಾ ಹಾಕಿ ಸಂಸ್ಥೆ ಮಾಜಿ ಉಪಾಧ್ಯಕ್ಷ ಪುಚ್ಚಿವಾಡ ಹರೀಶ್ ದೇವಯ್ಯ, ಪೊನ್ನಂಪೇಟೆ ಕೊಡವ ಸಮಾಜದ ಅಧ್ಯಕ್ಷ ಕಾಳಿಮಾಡ ಮೋಟಯ್ಯ ಇದ್ದರು.

ಕರವೇಯಿಂದ ಕನ್ನಡ ರಾಜ್ಯೋತ್ಸವ ಆಚರಣೆ



ವಿರಾಜಪೇಟೆ, ನ.6– ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೆಗೌಡ ಬಣ) ವಿರಾಜಪೇಟೆ ತಾಲೂಕು ಸಮಿತಿ ವತಿಯಿಂದ ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಈ ಸಂದರ್ಭ ರಕ್ಷಣಾ ವೇದಿಕೆಯ ತಾಲೂಕು ಸಮಿತಿ ಅಧ್ಯಕ್ಷ ಅನೀಲ್ ಕುಮಾರ್, ಉಪಾಧ್ಯಕ್ಷ ಸಂತೋಷ್, ಹೋಬಳಿ ಅಧ್ಯಕ್ಷ ಜುನೈದ್, ಖಜಾಂಚಿ ತಬ್ರೆಝ್, ಸಮಿತಿಯ ವಿವೇಕ್, ಉಮೇಶ್, ಡ್ಯಾನಿ, ಶ್ರೀಧರ್ ಉಪಸ್ಥಿತರಿದ್ದರು. ಇದಕ್ಕೂ ಮೊದಲು ಗೋಣಿಕೊಪ್ಪ ರಸ್ತೆ ಆಟೋ ಚಾಲಕರ ಸಂಘದಿಂದ ಪರಸಭೆ ಸದಸ್ಯ ಜಲೀಲ್ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭ ಸಂಘದ ಅಧ್ಯಕ್ಷ ಮೋಹನ್ ದಾಸ್ ಹಾಗೂ ರಕ್ಷಣಾ ವೇದಿಕೆ ಸದಸ್ಯರು ಮತು ಆಟೋ ಚಾಲಕರು ಉಪಸ್ಥಿತರಿದ್ದರು.


ಚಂದ್ರ ಗ್ರಹಣ: ಪೂಜೆ ಇಲ್ಲ

ಮಡಿಕೇರಿ, ನ.6– ಮಡಿಕೇರಿ ತಾಲೂಕು, ಭಾಗಮಂಡಲದಲ್ಲಿರುವ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಶಾಸ್ತ್ರಸಿದ್ಧ ಶ್ರೀಕೃಷ್ಣ ಪಂಚಾಂಗದಂತೆ ನ.8 ರಂದು ಮಧ್ಯಾಹ್ನ 2.39 ನಿಮಿಷಕ್ಕೆ ಗ್ರಸ್ತೋದಯ ಖಗ್ರಾಸ ಚಂದ್ರಗ್ರಹಣ ಪ್ರಾರಂಭಗೊಂಡು ಸಾಯಂಕಾಲ 6.19 ನಿಮಿಷಕ್ಕೆ ಗ್ರಹಣ ಮೋಕ್ಷವಾಗುತ್ತದೆ.

ಇದರಿಂದ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯಗಳ ರೂಢಿ ಸಂಪ್ರದಾಯದಂತೆ ಪಿಂಡಪ್ರದಾನ ಕಾರ್ಯ ಮತ್ತು ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯಗಳಲ್ಲಿ ಸಾರ್ವ ಜನಿಕ ಭಕ್ತಾದಿಗಳಿಗೆ ಯಾವುದೇ ಸೇವೆ ಮತ್ತು ದೇವರ ದರ್ಶನ ಹಾಗೂ ಮಾಸಿಕವಾಗಿ ಜರುಗುವ ಸಾಮೂಹಿಕ ಸತ್ಯನಾರಾಯಣ ಪೂಜೆಗೆ ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದು ಕುಮಾರಸ್ವಾಮಿ ಮುಖ್ಯಮಂತ್ರಿಯಾಗುವುದು ಖಚಿತ

ಜೆಡಿಎಸ್ ವಕ್ತಾರ ಸಂಕೇತ್ ಪೂವಯ್ಯ ಭವಿಷ್ಯ



ವಿರಾಜಪೇಟೆ, ನ.6– ತಾನೊಬ್ಬ ಮಾಜಿ ಪ್ರಧಾನಿ ಪುತ್ರ, ಮಾಜಿ ಮುಖ್ಯಮಂತ್ರಿ ಎಂಬ ಹಮ್ಮು–ಬಿಮ್ಮು ಇಲ್ಲದೆ ಕರ್ನಾಟಕದ ಹೆಮ್ಮೆಯ ಮಗನಾಗಿ ಜನ ಸಾಮಾನ್ಯರ ನೋವುಗಳಿಗೆ ಸ್ಪಂದಿಸುತ್ತಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುವುದರೊಂದಿಗೆ ಮುಖ್ಯಮಂತ್ರಿಯಾಗುವುದು ಶತಸಿದ್ಧ ಎಂದು ಜಾತ್ಯತೀತ ಜನತಾದಳದ ರಾಜ್ಯ ವಕ್ತಾರರು ಮತ್ತು ಕಾರ್ಯದರ್ಶಿಗಳೂ ಆದ ಸಂಕೇತ್ ಪೂವಯ್ಯ ಭವಿಷ್ಯ ನುಡಿದಿದ್ದಾರೆ.

ರಾಜ್ಯ ಜೆಡಿಎಸ್ ವಕ್ತಾರರಾದ ನಂತರ ಇದೇ ಮೊದಲ ಬಾರಿಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಹಲವಾರು ವರ್ಷಗಳಿಂದ ಆಡಳಿತ ನಡೆಸುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದಿಂದ ಬೇಸತ್ತಿರುವ ಮತದಾರರು ಬದಲಾವಣೆ ಬಯಸಿ ಪ್ರಾದೇಶಿಕ ಪಕ್ಷ ಜೆಡಿಎಸ್‌ನತ್ತ ಮುಖ ಮಾಡಿರುವುದೇ ಇದಕ್ಕೆ ಸಾಕ್ಷಿ ಎಂದರು.

ಕುಮಾರಸ್ವಾಮಿ ಅವರು ಬಿಜೆಪಿ ಮತ್ತು ಕಾಂಗ್ರೆಸ್ ಜೊತೆ ಸೇರಿ ಸರ್ಕಾರ ರಚನೆ ಮಾಡಿ ಮುಖ್ಯಮಂತ್ರಿಯಾದ ನಂತರ ರೈತರ ಸಾಲ ಮನ್ನಾ ಸೇರಿದಂತೆ ಜನಪರ ಮತ್ತು ಬಡವರ ಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು ನಮ್ಮ 'ಕುಮಾರಣ್ಣ' ಎಂದು ಕರೆಸಿಕೊಂಡರು. ಅವರ ಜನಪ್ರಿಯತೆಯನ್ನು ಕಂಡು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಲಾಯಿತು. ಈಗಲೂ ಆ ನೋವು ಜನರ ಮನಸ್ಸಿನಲ್ಲಿದೆ ಎಂದು ಅವರು ಹೇಳಿದರು.

ಈ ಹಿನ್ನಲೆಯಲ್ಲಿ ಕುಮಾರಸ್ವಾಮಿ ಮತ್ತು ದೇವೇಗೌಡರ ನೇತೃತ್ವದ ಜೆಡಿಎಸ್‌ಗೆ ಪೂರ್ಣ ಬಹುಮತ ನೀಡಬೇಕು ಎಂದು ರಾಜ್ಯದ ಜನತೆ ಬಯಸಿರುವುದು ಇತ್ತೀಚಿನ ದಿನಗಳಲ್ಲಿ ಜೆಡಿಎಸ್ ವತಿಯಿಂದ ನಡೆದ 'ಜಲಧಾರೆ' ಮತ್ತು 'ಪಂಚರತ್ನ' ಕಾರ್ಯಕ್ರಮಗಳಿಂದ ಸಾಬೀತಾಗಿದೆ. ರಾಜ್ಯದ ಜನತೆಯೇ ನಮ್ಮ ಪಕ್ಷದ ಬಲ ಎಂದ ಅವರು, ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರುಗಳು ಪಕ್ಷದ ಬೇರನ್ನು ಮತ್ತಷ್ಟು ಬಲಗೊಳಿ ಸುವತ್ತ ಮುನ್ನಡೆಯಬೇಕು. ಈ ಮೂಲಕ ಕುಮಾರಣ್ಣನ ಕೈ ಬಲ ಪಡಿಸಬೇಕು ಎಂದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹಗಲಿರುಳು ರೈತರು ಮತ್ತು ನೊಂದವರ ಕಣ್ಣೀರು ಒರೆಸುವ ಸಲುವಾಗಿ ಪಕ್ಷವನ್ನು ಅಧಿಕಾರಕ್ಕೆ ತರಲು ಚಿಂತನೆ ನಡೆಸುತ್ತಿದ್ದರೆ, ಎಲ್ಲಾ ಸಮಾಜದ ಜನರು ಜೆಡಿಎಸ್ ಬೆಂಬಲಿಸಲು ನಿರ್ಧರಿಸಿದ್ದಾರೆ. ಪಕ್ಷ ಅಧಿಕಾರಕ್ಕೆ ಬಂದರೆ ರಾಜ್ಯ ಸುವರ್ಣ ಕರ್ನಾಟಕ ಆಗುವುದರಲ್ಲಿ ಯಾವುದೇ ಸಂದೇಹಗಳು ಇಲ್ಲ ಎಂದು ಸಂಕೇತ್ ಭರವಸೆ ವ್ಯಕ್ತಪಡಿಸಿದರು. ಶೀಘ್ರದಲ್ಲೇ ಎಲ್ಲಾ ಜಿಲ್ಲೆ, ತಾಲೂಕು ಮತ್ತು ಗ್ರಾಮಗಳ ಕಾರ್ಯಕರ್ತರು, ಮುಖಂಡರುಗಳ ಜೊತೆ ಚರ್ಚಿಸಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸುವುದಾಗಿ ಅವರು ಇದೇ ವೇಳೆ ಹೇಳಿದರು.

ಸರ್ಕಾರಿ ದಾಖಲೆಗಳಲ್ಲಿ 'ಕೊಡಗರು' ಬದಲು 'ಕೊಡವರು' ಎಂದು ನಮೂದಿಸಿ

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ಸಿಎನ್‌ಸಿ ಮನವಿ



ಮಡಿಕೇರಿ,ನ.6– ಸರ್ಕಾರಿ ದಾಖಲೆಗಳಲ್ಲಿ ಕೊಡವರನ್ನು 'ಕೊಡವರು' ಎಂದು ನಮೂದಿಸಬೇಕು. ಪ್ರಸ್ತುತ ಚಾಲ್ತಿಯಲ್ಲಿರುವ 'ಕೊಡಗರು' ಪದ ಬಳಕೆಯನ್ನು ಕೈಬಿಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಹಾಗೂ ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿತು.

ಈ ಸಂದರ್ಭ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, 2010ರಲ್ಲಿ ಆಯೋಗವು 'ಕೊಡಗರು' ಬದಲಿಗೆ 'ಕೊಡ ವರು' ಎಂದು ಸರಿಪಡಿಸಲು ಶಿಫಾರಸು ಮಾಡಿದೆ. ಸರ್ಕಾರದ ಆದೇಶದ ಹೊರತಾಗಿಯೂ ಇದುವರೆಗೆ ಗೆಜೆಟ್ ಅಧಿಸೂಚನೆ ಹೊರಡಿಸಿಲ್ಲ ಎಂದು ಗಮನ ಸೆಳೆದರು. ಈ ವಿಚಾರದಲ್ಲಿ 2014ರಲ್ಲಿ ಸಿಎನ್‌ಸಿ ಹೈಕೋರ್ಟ್ ಮೊರೆ ಹೋಗಿತ್ತು. ಇದರ ಪರಿಣಾಮ 2021ಡಿ.8ರಂದು 'ಕೊಡವ' ಪದ ಬಳಕೆ ಮಾಡುವಂತೆ ಕೋರ್ಟ್ ಮಹತ್ವದ ತೀರ್ಪು ನೀಡಿತು. ಇದು ತ್ವರಿತವಾಗಿ ಅನುಷ್ಠಾನಗೊಳ್ಳಲು ಆಯೋಗ ಮಧ್ಯ ಪ್ರವೇಶ ಮಾಡಬೇಕೆಂದು ನಾಚಪ್ಪ ಅವರು ಜಯಪ್ರಕಾಶ್ ಹೆಗ್ಡೆ ಅವರಲ್ಲಿ ಮನವಿ ಮಾಡಿದರು.

ನ.11 ರಂದು ವಿಷ್ಣುಮೂರ್ತಿ ಕೋಲ

ಮಡಿಕೇರಿ, ನ.6– ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಪ್ರತೀ ವರ್ಷ ಸಂಪ್ರದಾಯದಂತೆ ನಡೆಸಿಕೊಂಡು ಬರುತ್ತಿರುವ "ವಿಷ್ಣುಮೂರ್ತಿ ಕೋಲ" (ಚಾಮುಂಡಿ)ವು ನವೆಂಬರ್ 11 ರಂದು ಬೆಳಗ್ಗೆ 10 ಗಂಟೆಯಿಂದ ನಡೆಯಲಿದೆ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು "ವಿಷ್ಣುಮೂರ್ತಿ ಕೋಲ" ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ದೇವರ ಕೃಪೆಗೆ ಪಾತ್ರರಾಗುವಂತೆ ಕಾರ್ಯನಿರ್ವಾಹಣಾಧಿಕಾರಿ ಬಿ.ಎಂ.ಕೃಷ್ಣಪ್ಪ ಅವರು ಕೋರಿದ್ದಾರೆ.

ಕಾಂಗ್ರೆಸ್ ಪ್ರಕಾ ವೇಣುಗೋಪಾಲ್ ಭೇಟಿ ಮಾಡಿದ ಜೀವಿಜಯ



ಮಡಿಕೇರಿ,ನ.6– ರಾಷ್ಟ್ರೀಯ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರನ್ನು ಕೇರಳ ರಾಜ್ಯದ ಕಣ್ಣೂರಿನ ಸ್ವಗೃಹದಲ್ಲಿ ಮಾಜಿ ಸಚಿವ ಬಿ.ಎ.ಜೀವಿಜಯ ಭೇಟಿಯಾದರು. ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆ ಪಕ್ಷ ಸಂಘಟನೆ ಕುರಿತು ಚರ್ಚಿಸಿದರು. ಈ ಸಂದರ್ಭ ಕರ್ನಾಟಕ ರಾಜ್ಯ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ಪಿ.ಸಿ.ಹಸೈನಾರ್ ಹಾಜರಿದ್ದರು.

ಇಂದು ಕಣ್ಣಿನ ತಪಾಸಣಾ ಶಿಬಿರ

ಚಾಮರಾಜನಗರ, ನ.6–ಮೈಸೂರಿನ ವಿವೇಕಾನಂದ ಸ್ಮಾರಕ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆಯಿಂದ ತಾಲೂಕಿನ ಸಂತೇಮರಹಳ್ಳಿ ಸಮೀಪದ ತೊರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಶ್ರಯದಲ್ಲಿ ಸೋಮವಾರ(ನ.7) ಬೆಳಗ್ಗೆ ಕಣ್ಣಿನ ಉಚಿತ ತಪಾಸಣೆ, ಶಸ್ತ್ರಚಿಕಿತ್ಸೆ ಹಾಗೂ ಸಕ್ಕರೆ ಖಾಯಿಲೆ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಸೋಮವಾರ ಬೆಳಗ್ಗೆ 9.30ರಿಂದ ಮಧ್ಯಾಹ್ನ 1.30ರ ವರೆಗೆ ವಿವೇಕಾನಂದ ಸ್ಮಾರಕ ಆಸ್ಪತ್ರೆ ನುರಿತ ವೈದ್ಯರಿಂದ ತಪಾಸಣೆ ನಡೆಯಲಿದೆ. ಸಾರ್ವಜನಿಕರು ಶಿಬಿರ ಸದುಪಯೋಗ ಪಡೆದುಕೊಳ್ಳುವಂತೆ ಸಂಘದ ಅಧ್ಯಕ್ಷ ಟಿ.ಎಸ್.ಶಿವಕುಮಾರ್, ನಿರ್ದೇಶಕರು ಮನವಿ ಮಾಡಿದ್ದಾರೆ.

ಇಂದು ಗುರುವಂದನೆ

ಚಾಮರಾಜನಗರ, ನ.6–ಎಸ್ಸಿ, ಎಸ್ಟಿ ಸಮುದಾಯಗಳಿಗೆ ಮೀಸಲಾತಿ ಹೆಚ್ಚಳ ಮಾಡಲು ಕಾರಣೀಭೂತರಾದ ಶ್ರೀಗಳಿಗೆ ನ.7ರಂದು ಸೋಮವಾರ ಗುರುವಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಾಲೂಕು ನಾಯಕ ವಿದ್ಯಾ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ಜಿಲ್ಲಾ ಸಮಿತಿಯಿಂದ ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ 253 ದಿನಗಳ ಕಾಲ ಅಹೋರಾತ್ರಿ ಧರಣಿ ನಡೆಸಿ ಎಸ್‌ಸಿಗೆ ಶೇ.17, ಎಸ್‌ಟಿ ಶೇ.7ರಷ್ಟು ಮೀಸಲಾತಿ ಹೆಚ್ಚಳಕ್ಕೆ ಸಮುದಾಯದ ಶ್ರೀಪ್ರಸನ್ನಾನಂದಪುರಿಸ್ವಾಮಿ, ಜ್ಞಾನಪ್ರಕಾಶ ಸ್ವಾಮೀಜಿ, ವರಾದಾರಚೆನ್ನಯ್ಯ ಸ್ವಾಮೀಜಿ, ಸೇವಾಲಾಲ್ ಸ್ವಾಮೀಜಿ, ಕೇದಾರನಾಥ ಸ್ವಾಮೀಜಿ ಸೇರಿದಂತೆ 9 ಮಂದಿ ಶ್ರೀಗಳಿಗೆ ಅಂದು ಗುರುವಂದನೆ ಮೀಸಲಾತಿ ಹೆಚ್ಚಳ ಮಾಡಿದ ರಾಜ್ಯ ಸರ್ಕಾರ ಹಾಗೂ ವಿರೋಧಪಕ್ಷಗಳ ನಾಯಕರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಾಯಕ ಜನಾಂಗದ ಮುಖಂಡರಾದ ಕಪಿನಿ ನಾಯಕ, ನಗರಸಭಾ ಮಾಜಿ ಸದಸ್ಯ ಚೆಂಗುಮಣಿ, ಪರಶಿವಮೂರ್ತಿ, ಬಿಎಸ್ಪಿ ಜಿಲ್ಲಾ ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ ಹಾಜರಿದ್ದರು.

ಕನಕ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ

ಚಾಮರಾಜನಗರ, ನ.6–ದಾಸಶ್ರೇಷ್ಠ ಕನಕದಾಸರ ಜಯಂತಿ ಆಚರಣೆ ಕಾರ್ಯಕ್ರಮವನ್ನು ನ.11ರಂದು ಜಿಲ್ಲಾಡಳಿತದಿಂದ ಎಲ್ಲರ ಸಹಕಾರದೊಂದಿಗೆ ನಗರದಲ್ಲಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಕನಕದಾಸರ ಭಾವಚಿತ್ರದ ಮೆರವಣಿಗೆಗೆ ಚಾಲನೆ, ರಥದಲ್ಲಿ ಕನಕದಾಸರ ಭಾವಚಿತ್ರ ಪ್ರತಿಷ್ಠಾಪಿಸಿ, ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಹಾಗೂ ಜಿಲ್ಲಾಡಳಿತ ಭವನದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಸಲು ಸಭೆ ತೀರ್ಮಾನಿಸಿತು.



ವಿವಿಧ ಸಂಘಟನೆಗಳು ಹಾಗೂ ಸಮುದಾಯದ ಮುಖಂಡರು ಮಾತನಾಡಿ, ಹೆಚ್ಚಿನ ಜನರು ಜಯಂತಿಗೆ ಆಗಮಿಸುವ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ಹೆಚ್ಚು ಕಲಾತಂಡಗಳ ನಿಯೋಜನೆ, ನಿಗದಿತ ಸಮಯದೊಳಗೆ ಆಹ್ವಾನ ಪತ್ರಿಕೆ ಮುದ್ರಣ ಮತ್ತು ವಿತರಣೆಯಾಗಬೇಕು. ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಕಡ್ಡಾಯ ಹಾಜರಾಗಬೇಕು ಎಂದು ಸಲಹೆ ನೀಡಿದರು.

ಎಡಿಸಿ ಎಸ್.ಕಾತ್ಯಾಯಿನಿದೇವಿ ಮಾತನಾಡಿ, ಕನಕದಾಸರ ಜಯಂತಿ ಆಚರಣೆ ಸುವ್ಯವಸ್ಥಿತವಾಗಿ ನಡೆಯಲು ಅಗತ್ಯವಿರುವ ಸಿದ್ಧತೆ ಮಾಡಲಾಗುತ್ತದೆ. ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿ ಕಾರ್ಯಕ್ರಮ ಆಯೋಜಿಸಲು ಸೂಚಿಸಲಾಗುವುದು. ಸರ್ವರೂ ಸಹಕರಿಸುವ ಮೂಲಕ ಕನಕದಾಸರ ಜಯಂತಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಜಿಪಂ ಉಪಕಾರ್ಯದರ್ಶಿ ಗುಡೂರು ಭೀಮಸೇನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಎನ್.ಮಂಜುನಾಥ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ.ಮಂಜುಳಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಗೀತಾಲಕ್ಷ್ಮಿ, ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ, ಮುಖಂಡರಾದ ಸಿ.ಎನ್.ಬಾಲರಾಜು, ಶಾ.ಮುರಳಿ, ಕುಮಾರಸ್ವಾಮಿ, ಎಂ.ಸ್ವಾಮಿ, ಬಿ.ಶಿವಲಿಂಗೇಗೌಡ, ರವಿಕುಮಾರ್ ಮಾದಾಪುರ, ಕೆ.ಪಿ.ನಾಗರಾಜು, ಜಿ.ಬಂಗಾರು, ಪಿ.ಮಾದಮ್ಮ, ಎಸ್.ಮಲ್ಲೇಶ, ಎಂ.ರಾಜು, ಕುಮಾರ್, ಬಿ.ಸ್ವಾಮಿ, ಎಂ.ಶಿವಣ್ಣ, ಎಸ್.ಪಿ.ಚಂದ್ರಶೇಖರ್, ನಂಜುಂಡಸ್ವಾಮಿ, ನಾಗೇಶ್ ಇತರರು ಸಭೆಯಲ್ಲಿದ್ದರು.

ಆರೋಗ್ಯ ಸಚಿವ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ನ.6–ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಇಬ್ಬರು ಮಕ್ಕಳ ಸಮೇತ ಮಹಿಳೆ ಸಾವನ್ನಪ್ಪಿರುವ ಪ್ರಕರಣ ಸಂಬಂಧ ಆರೋಗ್ಯ ಸಚಿವ ಡಾ.ಸುಧಾಕರ್ ರಾಜೀನಾಮೆ ನೀಡಬೇಕು ಎಂದು ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಆಗ್ರಹಿಸಿದರು.



ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಚಾಮರಾಜನಗರ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ತಮ್ಮ ಬೆಂಬಲಿಗರೊಂದಿಗೆ ಪ್ರತಿಭಟಿಸಿದರು. ಈ ವೇಳೆ ಮಾತನಾಡಿದ ಅವರು, ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಇಬ್ಬರು ಮಕ್ಕಳ ಸಮೇತ ಮಹಿಳೆ ಸಾವನ್ನಪ್ಪಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವರು ರಾಜೀನಾಮೆ ನೀಡಬೇಕು. ಅಲ್ಲದೆ ಸರ್ಕಾರ ಪ್ರಕರಣದ ಉನ್ನತ ಮಟ್ಟದ ತನಿಖೆ ನಡೆಸಬೇಕು. ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆಯಿಂದ ಪ್ರಾಣಹಾನಿ ಸಂಭವಿಸುತ್ತಲಿವೆ. ಸೌಲಭ್ಯ ಕೊರತೆ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆರಿಸಬೇಕು. ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಕ್ಸಿಜನ್ ಸಿಗದೆ ಮೃತಪಟ್ಟ ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಅಜಯ್, ಶಿವಲಿಂಗಮೂರ್ತಿ, ಹುಂಡಿ ಬಸವಣ್ಣ, ಪಾರ್ಥಸಾರಥಿ, ರೇವಣ್ಣಸ್ವಾಮಿ, ಚೆನ್ನಂಜಪ್ಪ ಇತರರಿದ್ದರು.

ಶ್ರೀ ಚಲುವನಾರಾಯಣಸ್ವಾಮಿ, ತುಳಸಮ್ಮನವರ ಕಲ್ಯಾಣೋತ್ಸವ

ಚಾಮರಾಜನಗರ, ನ.6–ಗುಂಡ್ಲುಪೇಟೆ ತಾಲೂಕಿನ ಕಬ್ಬಳ್ಳಿ ಗ್ರಾಮದಲ್ಲಿ ಭಾನುವಾರ ಗ್ರಾಮ ದೇವತೆ ಶ್ರೀ ಚಲುವನಾರಾಯಣಸ್ವಾಮಿ ಹಾಗೂ ತುಳಸಮ್ಮನವರ ಕಲ್ಯಾಣೋತ್ಸವ ವಿಜೃಂಭಣೆಯಿಂದ ಜರುಗಿತು.

ಕಲ್ಯಾಣೋತ್ಸವದ ಅಂಗವಾಗಿ ಶನಿವಾರ ಗ್ರಾಮದ ಶ್ರೀ ಚಲುವನಾರಾಯಣ ಸ್ವಾಮಿ ದೇಗುಲದಲ್ಲಿ ವಿಶೇಷ ಪೂಜಾ ಕೈಂಕರ್ಯ ನೆರವೇರಿತು. ರಾತ್ರಿ ಕಲಾವಿದ ಮಲ್ಲುಆಚಾರ್ ನೇತೃತ್ವದಲ್ಲಿ ಶ್ರೀ ವಿಶ್ವಕರ್ಮ ಸಮಾಜದವರಿಂದ ಸೂತ್ರದ ಬೊಂಬೆ ನಾಟಕ ಜರುಗಿತು. ಭಾನುವಾರ ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಶ್ರೀ ಚಲುವನಾರಾಯಣಸ್ವಾಮಿ ಹಾಗೂ ತುಳಸಮ್ಮನವರ ಕಲ್ಯಾಣೋತ್ಸವ ಶಾಸ್ತ್ರೋಕ್ತವಾಗಿ ನೆರವೇರಿತು.

ಈ ವೇಳೆ ಸುರೇಶ್‌ಆಚಾರ್, ಮಲ್ಲುಆಚಾರ್ ತಂಡದವರಿಂದ ದಶಾವತಾರ ಪಾರಾಯಣ ಜರುಗಿತು. ಕಬ್ಬಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಕಲ್ಯಾಣೋತ್ಸವದಲ್ಲಿ ಭಾಗವಹಿಸಿ, ದೇವರ ಕೃಪೆಗೆ ಪಾತ್ರರಾದರು.



ಯಳಂದೂರು ಸಾಹಿತ್ಯ ವೈಭವ ತೆರೆದಿಟ್ಟ ಉಪನ್ಯಾಸ

ಯಳಂದೂರು, ನ6–ಪಟ್ಟಣದ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಡೆದ 'ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಯಳಂದೂರಿನ ಕೊಡುಗೆಗಳು' ವಿಶೇಷ ಉಪನ್ಯಾಸ ತಾಲೂಕಿನ ಸಾಹಿತ್ಯ ನೆಲದ ಕವಿಗಳ ಬಗ್ಗೆ ಬೆಳಕು ಚೆಲ್ಲಿತು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಎನ್.ಮಹೇಶ್, ನಮಗೆ ಸದಾ ಹತ್ತಿರವಾಗಿರುವ ಮಾತೃಭಾಷೆಯನ್ನು ಜೀವಂತವಾಗಿಟ್ಟುಕೊಳ್ಳಲು ನಾವು ಕಟಿಬದ್ಧರಾಗಿರಬೇಕು. ಅನೇಕ ಕವಿಪುಂಗವರು ತಾಲೂಕಿನಲ್ಲಿ ಉದಯಿಸಿದ್ದಾರೆ. ಲಿಂಗತಾರತಮ್ಯದ ಬಗ್ಗೆ 17ನೇ ಶತಮಾನದಲ್ಲಿ ಧ್ವನಿ ಎತ್ತಿದ ಇಲ್ಲಿನ ಸಂಚಿ ಹೊನ್ನಮ್ಮ ಇಂದಿಗೂ ಮಾದರಿ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತಮ್ಮ ಮನ್ ಕಿ ಬಾತ್‌ನಲ್ಲಿ ಉಲ್ಲೇಖಿಸಿದ್ದಾರೆ. ಇದನ್ನು ಉಳಿಸಿ ಬೆಳೆಸಲು ಎಲ್ಲರೂ ಶ್ರಮಿಸಿದರು.

ಸಾಹಿತಿ ಮದ್ದೂರು ದೊರೆಸ್ವಾಮಿ ಮಾತನಾಡಿ ವಿಶೇಷ ಉಪನ್ಯಾಸ ನೀಡಿದರು.

ಕಸಾಪ ಜಿಲ್ಲಾಧ್ಯಕ್ಷ ಶೈಲಕುಮಾರ್ ಮಾತನಾಡಿದರು. ಕಸಾಪ ತಾಲೂಕು ಅಧ್ಯಕ್ಷ ಯರಿಯೂರು ನಾಗೇಂದ್ರ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪಪಂ ಅಧ್ಯಕ್ಷೆ ಪ್ರಭಾವತಿ ಕನ್ನಡಾಂಬೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಉಪಾಧ್ಯಕ್ಷೆ ಲಕ್ಷ್ಮಿ, ಸದಸ್ಯರಾದ ಮಹೇಶ್, ಸುಶೀಲಾ, ಕಾಲೇಜು ಪ್ರಾಂಶುಪಾಲ ಹೆಚ್.ಎಸ್. ಚಂದ್ರಶೇಖರ್, ಕನ್ನಡ ಉಪನ್ಯಾಸಕ ಉಮೇಶ್ ಕಸಾಪ ಕಾರ್ಯದರ್ಶಿ ಡಿ.ಪಿ.ಮಹೇಶ್, ಕೋಶಾಧ್ಯಕ್ಷ ಫೈರೋಜ್‌ಖಾನ್, ವೈ.ಎಂ.ಭಾನುಪ್ರಕಾಶ್, ವಿವೇಕಾನಂದ, ಚೆನ್ನರಾಜು ದಾನವ, ವೈ.ಕೆ. ಮೋಳೆ ನಾಗರಾಜು, ವಿಜಯ್, ನಾಗೇಂದ್ರ ಮೌರ್ಯ ಸೇರಿದಂತೆ ಅನೇಕರಿದ್ದರು.

ರಂಗಭೂಮಿ ಉಳಿಸಿ, ಬೆಳೆಸುವುದು ಅಪ್ಪಾಜಿ ಆಶಯ

ನಟ ರಾಘವೇಂದ್ರ ರಾಜ್‌ಕುಮಾರ್

ಚಾಮರಾಜನಗರ, ನ.6–ರಂಗಭೂಮಿ ಉಳಿಸಿ, ಬೆಳೆಸುವುದು ಅಪ್ಪಾಜಿ ಅವರ ಆಶಯವಾಗಿತ್ತು ಎಂದು ವರನಟ ರಾಜ್‌ಕುಮಾರ್ ಪುತ್ರ ನಟ ರಾಘವೇಂದ್ರ ರಾಜಕುಮಾರ್ ಸ್ಮರಿಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ರಾಜಕುಮಾರ್ ಕಲಾಮಂದಿರದಲ್ಲಿ ಶ್ರೀ ಸಿದ್ದಮಲ್ಲೇಶ್ವರ ಕಲಾ ಸಂಘದಿಂದ ಕನ್ನಡ ರಾಜ್ಯೋತ್ಸವ ಹಾಗೂ ನಟ ಪುನೀತ್‌ರಾಜ್‌ಕುಮಾರ್ ಸ್ಮರಣಾರ್ಥ ನಡೆದ ದಕ್ಷಯಜ್ಞ ನಾಟಕ ಪ್ರದರ್ಶನ ಹಾಗೂ ಉಚಿತ ವೈದ್ಯಕೀಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ನಮ್ಮ ತಂದೆ ಡಾ.ರಾಜಕುಮಾರ್ ಅವರು ಸಹ ರಂಗಭೂಮಿ ಕಲಾವಿದರು. ಅವರ ತಂದೆ ಪುಟ್ಟಸ್ವಾಮಯ್ಯ ಅವರ ನಟನೆ ನೋಡಿ ಬೆಳೆದವರು. ಚಾಮರಾಜನಗರ ಜಿಲ್ಲೆ ರಂಗಭೂಮಿ ಕಲಾವಿದರ ಬೀಡು. ನಾಟಕ ನೋಡಿ ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.



ಚಾಮರಾಜನಗರ ಜಿಲ್ಲೆ ನಮ್ಮ ತವರು. ಅಪ್ಪಾಜಿ ಅವರ ಹೆಸರಿನಲ್ಲಿರುವ ಡಾ.ರಾಜಕುಮಾರ್ ರಂಗಮಂದಿರದಲ್ಲಿ ದಕ್ಷಯಜ್ಞ ನಾಟಕ ಉದ್ಘಾಟನೆ ಮಾಡಿದ್ದು ನನ್ನ ಪುಣ್ಯ ಎಂದರಲ್ಲದೆ, ಸಹೋದರ ಪುನೀತ್ ರಾಜ್‌ಕುಮಾರ್ ನೆನೆದು ಕಣ್ಣೀರಾದರು. ಬಳಿಕ ಬೊಂಬೆ ಹೇಳುತೈತೆ.. ಹಾಡು ಹಾಡಿ ಭಾವುಕರಾದರು.

ಇದಕ್ಕೂ ಮುನ್ನ ವೇದಿಕೆಯಲ್ಲಿ ಡಾ. ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು. ಇದೇ ಸಂದರ್ಭದಲ್ಲಿ ನಟ ರಾಘವೇಂದ್ರ ರಾಜ್‌ಕುಮಾರ್, ಪತ್ನಿ ಮಂಗಳಾ ರಾಘವೇಂದ್ರ ರಾಜ್‌ಕುಮಾರ್ ಅವರಿಗೆ ಶ್ರೀಬಸವೇಶ್ವರ ಪುತ್ಥಳಿ ನೀಡಿ ಸನ್ಮಾನಿಸಲಾಯಿತು. ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿದರು. ನಗರ ಮಠದ ಶ್ರೀ ಚನ್ನಬಸವಸ್ವಾಮೀಜಿ, ಮರಿಯಾಲ ಮಠದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಿದ್ದಮಲ್ಲೇಶ್ವರ ಕಲಾ ಬಳಗ ಅಧ್ಯಕ್ಷ ಎನ್.ಆರ್. ಪುರುಷೋತ್ತಮ್, ಕಾರ್ಯದರ್ಶಿ ಬಸವರಾಜು, ಹಿರಿಯ ಕಲಾವಿದೆ ಪಂಕಜಾ ರವಿಶಂಕರ್, ಚಾಮುಲ್ ಅಧ್ಯಕ್ಷ ನಾಗೇಂದ್ರ, ನಿರ್ದೇಶಕರಾದ ಹೆಚ್.ಎಸ್.ಬಸವರಾಜು, ಸದಾಶಿವಮೂರ್ತಿ, ನಗರಸಭಾ ಸದಸ್ಯರಾದ ಮಮತಾ ಬಾಲಸುಬ್ರಮಣ್ಯ, ರಾಜಪ್ಪ ಮುಖಂಡರಾದ ಉಮೇಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿದೇಶಕ ಗುರುಲಿಂಗಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನ ಡಾ.ಎ.ಆರ್. ಬಾಬು, ಪಿ.ಮರಿಸ್ವಾಮಿ, ಎಂ.ರಾಮಚಂದ್ರ, ಪಿ.ರಾಜಣ್ಣ, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಗುರುಸ್ವಾಮಿ ಇತರರಿದ್ದರು.

ಗುಂಡ್ಲುಪೇಟೆಯಲ್ಲಿ ಕನ್ನಡ ಮಾಸಾಚರಣೆ

ಗುಂಡ್ಲುಪೇಟೆ, ನ.6–ಕನ್ನಡ ಡಿಂಡಿಮವನ್ನು ನಮ್ಮ ಅಂತರಂಗದಲ್ಲಿ ಮಾತ್ರವಲ್ಲದೆ, ಎಲ್ಲೆಡೆಯೂ ಬಾರಿಸಬೇಕು ಎಂದು ತಾಲೂಕು ಬಸವ ಕೇಂದ್ರದ ಅಧ್ಯಕ್ಷ ಚಂದ್ರು. ಎನ್. ಲಕ್ಕೂರು ಹೇಳಿದರು.



ತಾಲೂಕಿನ ತೆರಕಣಾಂಬಿಯಲ್ಲಿರುವ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಜೆಎಸ್‌ಬಿ ಪ್ರತಿಷ್ಠಾನದಿಂದ ಆಯೋಜಿಸಿದ್ದ ಕನ್ನಡ ಮಾಸಾಚರಣೆ–2022 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ನಮ್ಮ ಮಾತೃಭಾಷೆಯೂ ಹೌದು, ನಮ್ಮ ರಾಷ್ಟ್ರಭಾಷೆಯೂ ಹೌದು ಎಂದು ತಿಳಿಸಿದರು. ಭಾರತದ ಪ್ರತಿಯೊಂದು ಭಾಷೆಯು ಮಾತೃಭಾಷೆಯೇ. ಎಲ್ಲಾ ಭಾಷೆಗಳೂ ರಾಷ್ಟ್ರಭಾಷೆ ಎಂದು ತಿಳಿಯಬೇಕು. ಕನ್ನಡಕ್ಕಾಗಿ ಬದುಕಬೇಕೆನ್ನುವ ಭಾವ ನಮ್ಮ ಹೃದಯಾಂತರಾಳದಿಂದ ಬರಬೇಕು ಎಂದರು. ಸಮಾರಂಭದಲ್ಲಿ ಉಪನ್ಯಾಸಕಿ ಶ್ವೇತಾ, ಜೆಎಸ್‌ಬಿ ಪ್ರತಿಷ್ಠಾನದ ಶಶಿಕುಮಾರ್, ಶಿವಪ್ರಸಾದ್, ಮಹೇಶ್, ಪುರುಷೋತ್ತಮ ಮತ್ತು ಕಾಲೇಜು ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು.

42 ಜನರನ್ನು ಹೊತ್ತಿದ್ದ ವಿಮಾನ ಸರೋವರದಲ್ಲಿ ಪತನ

ಡೊಡೊಮಾ: ಹವಾಮಾನ ವೈಪರಿತ್ಯದಿಂದಾಗಿ 42 ಜನರನ್ನು ಹೊತ್ತ ವಿಮಾನವೊಂದು ಸರೋವರದಲ್ಲಿ ಪತನವಾಗಿರುವ ಘಟನೆ ಭಾನುವಾರ ಬೆಳಗ್ಗೆ ಪೂರ್ವ ಆಫ್ರಿಕಾದ ತಾಂಜಾನಿಯಾದಲ್ಲಿ ನಡೆದಿದೆ. ತಾಂಜಾನಿಯಾದ ಬುಕೋಬಾದಲ್ಲಿನ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿದ್ದ ವಿಮಾನ ಹವಾಮಾನ ವೈಪರಿತ್ಯದಿಂದಾಗಿ ಕೇವಲ 100 ಮೀ. ದೂರದಲ್ಲಿದ್ದ ವಿಕ್ಟೋರಿಯಾ ಸರೋವರಕ್ಕೆ ಅಪ್ಪಳಿಸಿದೆ ಎಂದು ವರದಿಗಳು ತಿಳಿಸಿವೆ. 39 ಪ್ರಯಾಣಿಕರು, ಇಬ್ಬರು ಪೈಲಟ್‌ಗಳು ಮತ್ತು ಇಬ್ಬರು ಕ್ಯಾಬಿನ್ ಸಿಬ್ಬಂದಿ ಸೇರಿದಂತೆ ಒಟ್ಟು 43 ಜನರನ್ನು ಹೊತ್ತಿದ್ದ ವಿಮಾನ ದಾರ್ ಎಸ್ ಸಲಾಮ್‌ನಿಂದ ಹೊರಟಿತ್ತು. 26 ಜನರನ್ನು ಈಗಾಗಲೇ ರಕ್ಷಿಸಲಾಗಿದ್ದು, ಉಳಿದವರ ರಕ್ಷಣೆಗಾಗಿ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕಾಂಗ್ರೆಸ್ ಅಧಿಕಾರಕ್ಕೆ ತನ್ನಿ



ತಳ ಮಟ್ಟದಿಂದ ಬೆಳೆಯಬೇಕು. ನನ್ನ ಸೇವೆಯನ್ನು ಪಕ್ಷ ಪರಿಗಣಿಸಿದೆ. ವಕೀಲ ವೃತ್ತಿಗಾಗಿ ಬೆಂಗಳೂರಿಗೆ ಬಂದಿದ್ದೆ. ಇಲ್ಲಿನ ಬಾರ್ ಕೌನ್ಸಿಲ್‌ಗೆ ಬಂದು ಕುಳಿತಾಗೆಲ್ಲಾ ನನ್ನನ್ನು ನಾಯಕರನ್ನಾಗಿಸುವ ಪ್ರಯತ್ನವನ್ನು ನಡೆಸುತ್ತಿದ್ದರು. ದೇಶದಲ್ಲಿ ಕಾಂಗ್ರೆಸ್ ಪಕ್ಷ ಬಲವಾಗಿದೆ. ಇಂದಿರಾ ಗಾಂಧಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುತ್ತದೆ. ಪಕ್ಷ ಇಬ್ಭಾಗ ಆದರೂ ಇಂದಿರಾ ನಾಯಕತ್ವ ಗೆಲ್ಲಲಿದೆ ಎಂದು ವಿವರಿಸುವ ಕಾರ್ಯ ನನಗಾಯಿತು. ಮಾಜಿ ಸಿಎಂ ದೇವರಾಜ್ ಅರಸ್ ರಾಜ್ಯಕ್ಕೆ ಸಮನ್ವಯಕಾರರಾಗಿದ್ದರು. 35 ವರ್ಷದ ಒಳಗಿನ 10-15 ಮಂದಿಯನ್ನು ಕರೆದು ಕಲಬುರಗಿಯಲ್ಲಿ ಪಕ್ಷದ ಕೆಲಸ ಮಾಡಿ. ನಿಮಗೆ ಟಿಕೆಟ್ ಕೊಡುತ್ತೇನೆ. ನೀವು ಶಾಸಕರಾಗುತ್ತೀರಿ, ನಿಮ್ಮಿಂದ ಸಾಕಷ್ಟು ಕೆಲಸ ಆಗಬೇಕು ಎಂದು ಹೇಳಿದ್ದರು.

1969ರಲ್ಲಿ ಕಲಬುರಗಿ ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರನ್ನಾಗಿ ಮಾಡಿದರು. ಹಂತ ಹಂತವಾಗಿ ಬೆಳೆದು ಇಂದು ರಾಷ್ಟ್ರೀಯ ಅಧ್ಯಕ್ಷಸ್ಥಾನ ಅಲಂಕರಿಸಿದ್ದೇನೆ. ಪಕ್ಷದ ರಾಷ್ಟ್ರೀಯ ನಾಯಕರ ಕೊಡುಗೆ ಇದು. ನಾನು ಒಂದೇ ಸಾರಿ ಮೇಲಕ್ಕೆ ಹಾರಿಲ್ಲ. ಮೆಟ್ಟಿಲುಗಳನ್ನು ಹತ್ತಿಕೊಂಡು ಬಂದು ಇಂದು ಉತ್ತುಂಗ ತಲುಪಿದ್ದೇನೆ. ಇಂದಿನ ಯುವ ಜನಾಂಗದವರು ಶಾಸಕ, ಮಂತ್ರಿ, ಸಿಎಂ, ಕೇಂದ್ರ ಸಚಿವರಾಗಬೇಕೆಂದು ಬಯಸುತ್ತಾರೆ. ರಾಜಕಾರಣಕ್ಕೆ ಬರುತ್ತಿದ್ದಂತೆ ತಾವು ಅಧಿಕಾರದ ಆಸೆ ಪಡುತ್ತಾರೆ. ಕಠಿಣ ಪರಿಶ್ರಮದಿಂದ ಸಾಗಿದರೆ, ನಿಷ್ಠೆಯಿಂದ ಮುನ್ನಡೆದರೆ ಗುರಿ ತಲುಪುತ್ತೀರಿ ಎಂದರು.

ಇದಕ್ಕೂ ಮುನ್ನ ಎಐಸಿಸಿ ಅಧ್ಯಕ್ಷರಾಗಿ ಪ್ರಥಮ ಬಾರಿಗೆ ಬೆಂಗಳೂರಿಗೆ ಆಗಮಿಸಿದ ಖರ್ಗೆ ಅವರನ್ನು ದೇವನಹಳ್ಳಿ ರಸ್ತೆಯಲ್ಲಿರುವ ಟೋಲ್‌ಗೇಟ್‌ನಲ್ಲಿ ಕೆಪಿಸಿಸಿ ವತಿಯಿಂದ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕ್ರೇನ್ ಮೂಲಕ ಸೇಬಿನ ಹಾರವನ್ನು ಅರ್ಪಿಸಲಾಯಿತು. ಈ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ, ಮಾಜಿ ಸಂಸದ ಕೆ.ಹೆಚ್.ಮುನಿಯಪ್ಪ, ಮಾಜಿ ಸಚಿವರಾದ ಕೃಷ್ಣ ಭೈರೇಗೌಡ ಇನ್ನಿತರರು ಉಪಸ್ಥಿತರಿದ್ದರು. ಸಮಾವೇಶದಲ್ಲಿ ಸಾವಿರಾರು ಅಭಿಮಾನಿಗಳು ನೆರೆದಿದ್ದರು.

ಕುರ್ಚಿ ಆಸೆ ಬಿಟ್ಟು ಕೆಲಸ ಮಾಡಿ



ಹಾಗೆಯೇ ವಿದೇಶಾಂಗ ನೀತಿ ರೂಪಿಸಿದ್ದು ನೆಹರು. ಪದೇ-ಪದೇ ನೆಹರು, ಇಂದಿರಾಗಾಂಧಿ, ಸೋನಿಯಾ ಬೈಯ್ಯುವುದು ಬಿಡಿ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ನಮ್ಮ ಪಕ್ಷವನ್ನು ಅವ್ವ ಮಕ್ಕಳ ಪಾರ್ಟಿ ಅಂತಾ ಈ ಶಾ ಕರಿತಾರೆ, ಈ ಚುನಾವಣೆಯಲ್ಲಿ ಗಾಂಧಿ ಕುಟುಂಬದವರು ಸ್ಪರ್ಧೆ ಮಾಡಿಲ್ಲ. ಆದರೂ ಶಾ ಮಾತನಾಡೋದನ್ನು ಬಿಡಲ್ಲ. ಅರೆ, ನಮ್ಮ ಪಾರ್ಟಿ ಚಿಂತೆ ನಿಮಗ್ಯಾಕಪ್ಪ? ನಮ್ಮ ಪಾರ್ಟಿ ಚಿಂತಿ ನಮಗ ಬಿಡ್ರಿ, ನಿಮಗ್ಯಾಕೆ? ಎಂದು ಅಮಿತ್ ಶಾಗೆ ಟಾಂಗ್ ನೀಡಿದರು.

ಮತ್ತೆ ಚಿರತೆ ಪ್ರತ್ಯಕ್ಷ

ಸಿಬ್ಬಂದಿ ಬೋನ್ ಇರಿಸಿ ಕ್ಯೂಬಿಂಗ್ ಕೂಡ ನಡೆಸಿದ್ದರು, ಆದರೆ ನಂತರ ಅತ್ತ ಚಿರತೆ ಸುಳಿದಿರಲಿಲ್ಲ. ಮತ್ತೆ ಅ.27ರಂದು ನಾರ್ಥ್‌ಗೇಟ್ ಬಳಿ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ ಅಧಿಕಾರಿ ಸಂತೋಷ್ ಕಣ್ಣಿಗೆ ಬಿದ್ದಿತ್ತು. ನಂತರ ಅಧಿಕಾರಿಗಳು ಮತ್ತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ತಿಳಿಸಿದಾಗ ಸ್ಥಳಕ್ಕೆ ಬಂದ ಪಾಂಡವಪುರ ಅರಣ್ಯ ಇಲಾಖೆ ಅಧಿಕಾರಿಗಳಿಗೂ ಅದೇ ಸ್ಥಳದಲ್ಲಿ ರಾತ್ರಿ 10ರ ಸುಮಾರಿಗೆ ಚಿರತೆ ಕಾಣಿಸಿಕೊಂಡಿತ್ತು. ನಂತರ ಅಲ್ಲಿಂದ ಚಿರತೆ ಕಾಲ್ಕಿತ್ತಿತ್ತು, ಇದೇ ಸ್ಥಳದಲ್ಲಿ ಬೋನ್ ಇರಿಸಿ ಮಾರನೆ ದಿನ ಕ್ಯೂಬಿಂಗ್ ಕೂಡ ನಡೆಸಿ ನಂತರ ನಾರ್ಥ ಗೇಟ್ ಬಳಿಯ ಉದ್ಯಾನವನ ಹಾಗೂ ಮ್ಯೂಜಿ ಕಲ್ ಫೌಂಟೇನ್ ಬಂದ್ ಮಾಡಿಸಿ ಈ ಪ್ರದೇಶಕ್ಕೆ ಪ್ರವಾಸಿಗರಿಗೆ ನಿರ್ಬಂಧ ಹೇರಲಾಗಿತ್ತು. ಇಷ್ಟೊಂದು ಬಾರಿ ಚಿರತೆ ಕಾಣಿಸಿಕೊಂಡರು ಕೂಡ ಕಾವೇರಿ ನೀರಾವರಿ ನಿಗಮ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ ತೋರುತ್ತಿದ್ದಾರೆ ಎಂದು ನಾಗರಿಕರು ದೂರಿದ್ದಾರೆ. ಚಿರತೆ ಕಾಣಿಸಿಕೊಳ್ಳುತ್ತಿದ್ದರೂ ಅಧಿಕಾರಿಗಳು ಆಳೆತ್ತರ ಬೆಳೆದಿರುವ ಗಿಡಗಂಟೆಗಳ ತೆರವುಗೊಳಿಸಿಲ್ಲ. ಇದರಿಂದ ಮತ್ತೆ ಮತ್ತೆ ಚಿರತೆ ಕಾಣಿಸಿಕೋಳ್ಳುತ್ತಿದೆ ಇದರ ಪರಿಣಾಮ ಅಣೆಕಟ್ಟೆ ಹಾಗೂ ಬೃಂದಾವನದಲ್ಲಿ ಅಲ್ಲಿ ಕೆಲಸ ಮಾಡುವ ಸಿಬ್ಬಂದಿ ಹಾಗೂ ಪ್ರವಾಸಿಗರಲ್ಲಿ ಭಯ ತರಿಸಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

> “ಶನಿವಾರ ರಾತ್ರಿ ಮತ್ತು ಇಂದು ಚಿರತೆ ಕಾಣಿಸಿಕೊಂಡಿದೆ. ಆದ್ದರಿಂದ ಇಂದು ಸಂಜೆ 6 ಗಂಟೆಗೆ ಬೃಂದಾವನ ಪ್ರವೇಶಕ್ಕೆ ಸಂಪೂರ್ಣ ನಿರ್ಬಂಧಿಸಲಾಗಿದೆ. ನಾಳೆಯೂ ಕೂಡ ಪ್ರವೇಶ ನಿರ್ಬಂಧಿಸಲು ತೀರ್ಮಾನಿಸಲಾಗಿದೆ. ಹಿಂದೆ ಇರಿಸಿದ್ದ ಬೋನ್ ಅನ್ನು ಈಗ ಚಿರತೆ ಕಾಣಿಸಿಕೊಂಡಿರುವ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ, ನಮ್ಮ ಮೇಲಧಿಕಾರಿ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಿ ಮುಂದಿನ ತೀರ್ಮಾನ ತಿಳಿಸಲಾಗುವುದು.
>
> **-ಫಾರುಕ್ ಅಬು, ಕಾವೇರಿ ನೀರಾವರಿ ನಿಗಮದ ಎಇಇ.**

ಮೂವರು ರೈತರ ಸಾವು

ಆಕ್ರೋಶ: ಸ್ಥಳಕ್ಕಾಗಮಿಸಿದ ಸೆಸ್ಕ್ ಎಇಇ ಹಾಗೂ ಜೆಇಗಳನ್ನು ತರಾಟೆಗೆ ತೆಗೆದುಕೊಂಡ ನೀಲಸೋಗೆ ಗ್ರಾಮಸ್ಥರು, ಈ ದುರ್ಘಟನೆಗೆ ಚೆಸ್ಕಾಂ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ. ನಾಲೆಗೆ ನೀರು ಬಿಡುವ ಮುನ್ನಾ ಜೋತು ಬಿದ್ದಿರುವ ವಿದ್ಯುತ್ ತಂತಿಗಳು ಹಾಗೂ ವಾಲಿರುವ ವಿದ್ಯುತ್ ಕಂಬಗಳನ್ನು ದುರಸ್ತಿಪಡಿಸುವಂತೆ ಹಲವು ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದರೂ, ಯಾವುದೇ ಪ್ರಯೋಜನವಾಗಿಲ್ಲ. ಈ ಘಟನೆಗೆ ಅಧಿಕಾರಿಗಳೇ ಕಾರಣ. ಹೀಗಾಗಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಕ್ರೋಶ ವ್ಯಕ್ತಪಡಿಸಿ, ಶಾಸಕರಿಗೆ ಮನವಿ ಸಲ್ಲಿಸಿದರು. ಅಲ್ಲದೇ ಘಟನೆಯಲ್ಲಿ ಸಾವನ್ನಪ್ಪಿದ ರೈತರ ಕುಟುಂಬದವರಿಗೆ ತಲಾ 10 ಲಕ್ಷ ರೂ. ಪರಿಹಾರ, ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಸ್ಥಳದಲ್ಲಿದ್ದ ಚೆಸ್ಕಾಂ ಇಲಾಖೆ ಅಧಿಕಾರಿಗಳು ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದರು. ಸ್ಥಳಕ್ಕೆ ಡಿವೈಎಸ್‌ಪಿ ಗೋವಿಂದರಾಜು, ಚೆಸ್ಕಾಂ ಎಇಇ ನಾಗೇಶ್, ಜೆಇ ವಿಜಯಕುಮಾರ್, ಸಿಪಿಐ ಕೃಷ್ಣಪ್ಪ, ಎಸ್‌ಐ ಪಚ್ಚೇಗೌಡ, ಡಾ.ರೇವಣ್ಣ, ಕರೋಹಟ್ಟಿ ಪ್ರಭುಸ್ವಾಮಿ, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಗ್ರಾಪಂ ಅಧ್ಯಕ್ಷೆ ನಳಿನಾ, ಸದಸ್ಯ ಮಹೇಶ್, ಡೈರಿ ನಂಜುಂಡಸ್ವಾಮಿ, ಮಲ್ಲಪ್ಪಸ್ವಾಮಿ ಸೇರಿದಂತೆ ಅನೇಕ ಅಧಿಕಾರಿಗಳು ಭೇಟಿ ನೀಡಿದ್ದರು.

ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆ ಹಿನ್ನೆಲೆ

ಮಾನಸ ಗಂಗೋತ್ರಿ ಆವರಣಕ್ಕೆ ಸಾರ್ವಜನಿಕರ ವಾಹನ ಪ್ರವೇಶ ಬಂದ್

ಮೈಸೂರು ವಿವಿ ಸಿಂಡಿಕೇಟ್ ಸಭೆ ಖಡಕ್ ನಿರ್ಧಾರ



ಮೈಸೂರು, ನ. 6(ಆರ್‌ಕೆ)- ವಾಯುವಿಹಾರ ಮಾಡುತ್ತಿದ್ದ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋ (ಐಬಿ) ನಿವೃತ್ತ ಸಹಾಯಕ ನಿರ್ದೇಶಕ ಆರ್.ಎನ್. ಕುಲಕರ್ಣಿ ಅವರನ್ನು ಕಾರು ಹರಿಸಿ ಹತ್ಯೆಗೈದಿರುವ ಹಿನ್ನೆಲೆಯಲ್ಲಿ ಮೈಸೂರಿನ ಮಾನಸ ಗಂಗೋತ್ರಿ ಆವರಣಕ್ಕೆ ಸಾರ್ವಜನಿಕರ ವಾಹನ ಪ್ರವೇಶ ನಿರ್ಬಂಧಿಸಲು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆ ನಿರ್ಧರಿಸಿದೆ.

ಶುಕ್ರವಾರ ಸಂಜೆ ಮಾನಸ ಗಂಗೋತ್ರಿಯ ಬಯೋಟೆಕ್ನಾಲಜಿ ಮತ್ತು ಕಂಪ್ಯೂಟರ್ ಸೈನ್ಸ್ ಅಧ್ಯಯನ ಸಂಸ್ಥೆ ಬಳಿ ವಾಯು ವಿಹಾರ ಮಾಡುತ್ತಿದ್ದಾಗ ಕುಲಕರ್ಣಿ ಅವರಿಗೆ ಕಾರು ಡಿಕ್ಕಿ ಹೊಡೆದು ಕೊಲೆ ಮಾಡಲಾಗಿದೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಕುಲಪತಿ ಪ್ರೊ. ಜಿ. ಹೇಮಂತ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ವಿಜ್ಞಾನ ಭವನದಲ್ಲಿ ನಡೆದ ತುರ್ತು ಸಿಂಡಿಕೇಟ್ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಆರ್. ಶಿವಪ್ಪ ತಿಳಿಸಿದ್ದಾರೆ.

ಈ ಕುರಿತು ನಾಳೆ (ನ. 7) ಕುಲಪತಿಗಳು ಅಧಿಸೂಚನೆ ಹೊರಡಿಸುವ ಸಾಧ್ಯತೆ ಇದೆ. ಸಭೆ ಕೈಗೊಂಡ ನಿರ್ಣಯದಂತೆ ಈಗಾಗಲೇ ಸಾರ್ವಜನಿಕರು ಹಾಗೂ ಅವರ ವಾಹನಗಳನ್ನು ಗಂಗೋತ್ರಿ ಆವರಣಕ್ಕೆ ಬಿಡಬಾರದು ಎಂದು ಎಲ್ಲಾ ದ್ವಾರಗಳ ಭದ್ರತಾ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.


ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶಾವಕಾಶ ನೀಡಬಾರದು, ಎಲ್ಲಾ ಗೇಟ್‌ಗಳನ್ನು ಬಂದ್ ಮಾಡಿ ಗುರುತಿನ ಚೀಟಿ ಪರಿಶೀಲಿಸಿ ಯೂನಿವರ್ಸಿಟಿಗೆ ಸಂಬಂಧಿಸಿದ ಪ್ರಾಧ್ಯಾಪಕರು, ಕಾಲೇಜು ವಿದ್ಯಾರ್ಥಿಗಳು, ಕಚೇರಿ ಸಿಬ್ಬಂದಿಗಳ ವಾಹನಗಳಿಗೆ ಪ್ರವೇಶ ನೀಡಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಪ್ರೊ. ಶಿವಪ್ಪ ತಿಳಿಸಿದರು.

ಈ ಹಿಂದೆ ಪ್ರೊ. ಕೆ.ಎಸ್. ರಂಗಪ್ಪ ಅವರು ಕುಲಪತಿಗಳಾಗಿದ್ದಾಗ ಕೆಎಸ್‌ಆರ್‌ಟಿಸಿ ಸಿಟಿ ಬಸ್‌ಗಳ ಸಂಚಾರವನ್ನು ಗಂಗೋತ್ರಿ ಆವರಣದಲ್ಲಿ ನಿರ್ಬಂಧಿಸಿದ್ದರು. ದೇಶದ ಯಾವುದೇ ಯೂನಿವರ್ಸಿಟಿಗಳ ಕ್ಯಾಂಪಸ್‌ನಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅವಕಾಶ ನೀಡಿಲ್ಲ ಎಂದು ಅವರು ನುಡಿದರು.

ಇನ್ನು ಮುಂದೆ ವಾಯುವಿಹಾರ ಮಾಡುವವರು, ಪಡುವಾರಹಳ್ಳಿ ಕಡೆಯಿಂದ, ಬೋಗಾದಿ ರಸ್ತೆಯಿಂದ, ಎಸ್‌ಜೆಸಿಇ ಕಡೆಯಿಂದ ಹಾಗೂ ಬಿ.ಎನ್. ಬಹದ್ದೂರ್ ಇನ್ಸ್‌ಟಿಟ್ಯೂಟ್ ಕಡೆಯಿಂದ ಬರುವ ಸಾರ್ವಜನಿಕ ವಾಹನಗಳಿಗೆ ಮಾನಸ ಗಂಗೋತ್ರಿ ಕ್ಯಾಂಪಸ್ ಪ್ರವೇಶವಿರುವುದಿಲ್ಲ ಹಾಗೂ ಕ್ಯಾಂಪಸ್‌ಗೆ ಸಂಪರ್ಕ ಕಲ್ಪಿಸುವ ಎಲ್ಲಾ ಗೇಟ್‌ಗಳಲ್ಲೂ ಸಾರ್ವಜನಿಕರ ಪ್ರವೇಶ ಬಂದ್ ಆಗಿರುತ್ತದೆ ಎಂದು ಪ್ರೊ ಶಿವಪ್ಪ ತಿಳಿಸಿದರು.

ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆ ಪ್ರಕರಣ: ನೆರೆಮನೆಯವರ ವಿರುದ್ಧ ದೂರು ದಾಖಲು

ಅಳಿಯನಿಂದ ಪೋಲೀಸರಿಗೆ ದೂರು ಸಲ್ಲಿಕೆ



ಮೈಸೂರು, ನ. 6- ನಿವೃತ್ತ ಇಂಟೆಲಿಜೆನ್ಸ್ ಬ್ಯೂರೋ (ಐಬಿ) ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಹತ್ಯೆ ಸಂಬಂಧ ನೆರೆಮನೆಯವರ ವಿರುದ್ಧ ದೂರು ದಾಖಲಾಗಿದೆ.

ಕುಲಕರ್ಣಿಯವರ ಅಳಿಯ ಸಂಜಯ್ ಅಂಗಡಿ ಅವರು ನವೆಂಬರ್ 5ರಂದು ಬೆಳಗ್ಗೆ 8.45ರಲ್ಲಿ ಜಯಲಕ್ಷ್ಮೀಪುರಂ ಠಾಣೆ ಪೊಲೀಸರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ.

ಕುಲಕರ್ಣಿಯವರ ಪುತ್ರಿ ಶ್ರೀಮತಿ ಪರಿಣಿತಾರವರ ಪತಿ ಸಂಜಯ್ ಅಂಗಡಿಯವರು, ತಾನು ಹಾಗೂ ಪತ್ನಿ ಅಮೆರಿಕಾದಲ್ಲಿ ವಾಸವಿದ್ದು, ತಮ್ಮ ಮಾವ ಕುಲಕರ್ಣಿಯವರು ನಮ್ಮೊಂದಿಗೆ ಪ್ರತಿದಿನ ವಾಟ್ಸಾಪ್ ಕಾಲ್ ಮೂಲಕ ಮಾತನಾಡುತ್ತಿದ್ದರು. ಮಾವನ ಮನೆಯ ದಕ್ಷಿಣದ ಕಡೆಗೆ ಮಾದಪ್ಪ ಅವರು ಕಾನೂನುಬಾಹಿರವಾಗಿ ನಗರಪಾಲಿಕೆ ಬೈಲಾಗೆ ವಿರುದ್ಧವಾಗಿ ಮನೆ ಕಟ್ಟಲು ಪ್ರಾರಂಭಿಸಿದ್ದಾರೆ ಎಂಬುದನ್ನು ಕೂಡ ತಮಗೆ ತಿಳಿಸಿದ್ದರು ಎಂದು ದೂರಿನಲ್ಲಿ ಹೇಳಿದ್ದಾರೆ.

ಈ ಸಂಬಂಧ ಮಾವ ಕುಲಕರ್ಣಿಯವರು ನೆರೆಮನೆಯ ಮಾದಪ್ಪ ಹಾಗೂ ನಗರಪಾಲಿಕೆ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಅಲ್ಲದೇ, ಮಾದಪ್ಪನವರು ಮನೆ ಕಟ್ಟದಂತೆ ನ್ಯಾಯಾಲಯದಿಂದ ತಡೆಯಾಜ್ಞೆಯೂ ತಂದಿದ್ದರು. ಈ ತಡೆಯಾಜ್ಞೆ ವಿರುದ್ಧ ಹೈಕೋರ್ಟ್ ಮೊರೆ ಹೋದ ಮಾದಪ್ಪನವರು ಸಿವಿಲ್ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಆದೇಶವಾದರೆ ಕಾನೂನುಬಾಹಿರವಾಗಿ ಕಟ್ಟಿರುವ ಮನೆಯನ್ನು ಒಡೆಯುತ್ತೇನೆ ಎಂದು ಪ್ರಮಾಣಪತ್ರ ನೀಡಿದ ಹಿನ್ನೆಲೆಯಲ್ಲಿ ಹೈಕೋರ್ಟ್‌ನಲ್ಲಿ ಮಾವ ತಂದಿದ್ದ ತಡೆಯಾಜ್ಞೆಯ ಅರ್ಜಿಯನ್ನು ಮುಕ್ತಾಯಗೊಳಿಸಲಾಗಿತ್ತು ಎಂದು ಅವರು ದೂರಿನಲ್ಲಿ ವಿವರಿಸಿದ್ದಾರೆ.

ಮಾವನವರು ನನ್ನ ಹಾಗೂ ಪತ್ನಿ ಜೊತೆ ಮಾತನಾಡುವಾಗ ನೆರೆಮನೆಯ ಮಾದಪ್ಪ ಹಾಗೂ ಅವರ ಮಕ್ಕಳು ಮತ್ತು ಸಹಚರರು ಅವರನ್ನು (ಕುಲಕರ್ಣಿ) ಕೊಲೆ ಮಾಡಲು ಪ್ರಯತ್ನ ಪಡುತ್ತಿದ್ದಾರೆ ಎಂದು ಸಾಕಷ್ಟು ಬಾರಿ ಹೇಳಿದ್ದರು. ನಾವು ನೀಡಿದ ನಿರ್ದೇಶನದಂತೆ ಈ ಸಂಬಂಧ ಪೊಲೀಸರಿಗೂ ದೂರು ಸಲ್ಲಿಸಿದ್ದರು. ಮಾವನವರನ್ನು ಮಾದಪ್ಪ ಹಾಗೂ ಸಹಚರರು ಕೆಎ 09-ಇವೈ 8190 ಸಂಖ್ಯೆಯ ಇನ್ನೋವಾ ಕಾರು, ಕೆಎ 09-ಎಂಎ 1890 ಮತ್ತು ಕೆಎ 09-ಎಂ 3177 ಫಾರ್ಚೂನರ್ ಕಾರುಗಳಲ್ಲಿ ತನ್ನನ್ನು ಕೊಲೆ ಮಾಡಲು ಪ್ರಯತ್ನಿಸುತ್ತಿರುವ ವಿಚಾರವನ್ನು ತಿಳಿಸಿದ್ದರು. ಅಲ್ಲದೇ ಈ ಸಂಬಂಧಸ್ಥಳೀಯ ಪೊಲೀಸ್ ಠಾಣೆ, ಪೊಲೀಸ್ ಆಯುಕ್ತರು ಮತ್ತು ಪ್ರಧಾನಮಂತ್ರಿಗಳಿಗೆ ದೂರು ನೀಡಿದ್ದರು ಎಂದು ಸಂಜಯ್ ಅಂಗಡಿ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಈ ನಡುವೆ ಮಾದಪ್ಪ ಕಾನೂನುಬಾಹಿರವಾಗಿ ಮನೆ ಕಟ್ಟುತ್ತಿರುವ ಬಗ್ಗೆ ನಗರಪಾಲಿಕೆ ಆಯುಕ್ತರಿಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಮನೆ ಕಟ್ಟುವುದನ್ನು ನಿಲ್ಲಿಸುವಂತೆ 2022ರ ಜೂನ್ 23 ಮತ್ತು ಜುಲೈ 14ರಂದು ಮಾದಪ್ಪನವರಿಗೆ ನಗರಪಾಲಿಕೆ ಆಯುಕ್ತರು ನೋಟಿಸ್ ಜಾರಿ ಮಾಡಿದ್ದರು. ಹಾಗಿದ್ದೂ ಯಾವುದೇ ಕ್ರಮ ಕೈಗೊಳ್ಳದಿದ್ದರಿಂದ ಮಾವನವರು ಪಾಲಿಕೆ ವಿರುದ್ಧ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ವಿಚಾರಣೆ ಪ್ರಗತಿಯಲ್ಲಿದೆ. ಈ ಮಧ್ಯೆ ನವೆಂಬರ್ 2ರಂದು ಮಾದಪ್ಪ ಕಾನೂನುಬಾಹಿರವಾಗಿ ಕಟ್ಟುತ್ತಿರುವ ಮನೆಯನ್ನು ತೆರವುಗೊಳಿಸುವಂತೆ ಪಾಲಿಕೆಯವರು ಆದೇಶ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಮಾದಪ್ಪ ಹಾಗೂ ಅವರ ಮಕ್ಕಳು ಮತ್ತು ಸಹಚರರು ಮಾವನವರನ್ನು ಕೊಲೆ ಮಾಡಿರುವುದು ಖಚಿತವಾಗಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ಸಂಜಯ್ ಅಂಗಡಿ ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 302 (ಕೊಲೆ) ಮತ್ತು 34 (ಒಬ್ಬರಿಗಿಂತ ಹೆಚ್ಚು ಮಂದಿ ಕೃತ್ಯ ನಡೆಸಿರುವುದು)ರಡಿ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಇಂದು ಕುಲಕರ್ಣಿ ಅವರ ಅಂತ್ಯಕ್ರಿಯೆ

ಮೈಸೂರು, ನ. 6(ಆರ್‌ಕೆ)- ಶುಕ್ರವಾರ ಸಂಜೆ ಹತ್ಯೆಯಾದ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋ (ಐಬಿ) ನಿವೃತ್ತ ಸಹಾಯಕ ನಿರ್ದೇಶಕ ಆರ್.ಎನ್. ಕುಲಕರ್ಣಿ ಅವರ ಅಂತ್ಯಕ್ರಿಯೆ ನಾಳೆ (ನ. 7) ಬೆಳಗ್ಗೆ 10 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿದ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಕುಲಕರ್ಣಿ ಅವರ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. ದೇಹವನ್ನು ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಂಯೋಗ್ ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದ್ದು, ಸೋಮವಾರ ಬೆಳಗ್ಗೆ 8 ಗಂಟೆಗೆ ಶಾರದಾದೇವಿನಗರದಲ್ಲಿರುವ ಅವರ ನಿವಾಸಕ್ಕೆ ತಂದು 9.30 ಗಂಟೆವರೆಗೆ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ವಿದೇಶದಲ್ಲಿದ್ದ ಪುತ್ರ ರೋಹನ್ ಆರ್. ಕುಲಕರ್ಣಿ ಅವರು ಇಂದು ಮೈಸೂರಿಗೆ ಬಂದಿದ್ದು, ಪುತ್ರಿ ಪರಿಣಿತ ಆರ್. ಕುಲಕರ್ಣಿ ಇಂದು ತಡರಾತ್ರಿ ಅಥವಾ ನಾಳೆ (ನ. 7) ಮುಂಜಾನೆ ಮೈಸೂರು ತಲುಪುವರು. ನಂತರ ಸೋಮವಾರ ಬೆಳಗ್ಗೆ ಆರ್.ಎನ್.ಕುಲಕರ್ಣಿ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಹಂಚ್ಯಾ-ಸಾತಗಳ್ಳಿಯಲ್ಲಿ ಎಸ್‌ಟಿಪಿ ಘಟಕ ನಿರ್ಮಿಸಲು ಮುಂದಾದ ಮುಡಾ ಅಧಿಕಾರಿಗಳು

ಕಾಮಗಾರಿಗೆ ತಡೆಯೊಡ್ಡಿದ ನಿವಾಸಿಗಳು



ಮೈಸೂರು, ನ.6(ಆರ್‌ಕೆಬಿ)- ಮೈಸೂರಿನ ಹೊರವಲಯದ ಹಂಚ್ಯಾ-ಸಾತಗಳ್ಳಿ ಬಿ ವಲಯದ ಉದ್ಯಾನವನದಲ್ಲಿ ಕೊಳಚೆ ನೀರಿನ ಸಂಸ್ಕರಣಾ ಘಟಕ (ಎಸ್‌ಟಿಪಿ ಘಟಕ) ನಿರ್ಮಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಧಿಕಾರಿಗಳು ಅವೈಜ್ಞಾನಿಕವಾಗಿ ಮುಂದಾಗಿದ್ದಾರೆ ಎಂದು ಸ್ಥಳೀಯ ನಿವಾಸಿಗಳು ವಿರೋಧಿಸಿದ್ದು, ಇಂದು ನಡೆಯಬೇಕಿದ್ದ ಎಸ್‌ಟಿಪಿ ಘಟಕದ ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದಾರೆ.

ಸಾರ್ವಜನಿಕ ವಸತಿ ಗೃಹಗಳ ಮತ್ತು ನಿವೃತ್ತ ಯೋಧರು, ವೀರಪ್ಪನ್ ವಿರುದ್ಧದ ಎಸ್‌ಟಿಎಫ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಪೊಲೀಸ್ ಅಧಿಕಾರಿಗಳ ವಸತಿ ಗೃಹಗಳು ಸಹ ನೂರಡಿ ಅಕ್ಕಪಕ್ಕದಲ್ಲಿವೆ. ಒಂದು ವೇಳೆ ಇಲ್ಲಿ ಎಸ್‌ಟಿಪಿ ಘಟಕ ನಿರ್ಮಿಸಿದರೆ ನಿವಾಸಿಗಳು ಕೆಟ್ಟ ವಾಸನೆ ಸೇವಿಸುವ ಜೊತೆಗೆ ನಾನಾ ರೋಗಗಳಿಗೆ ತುತ್ತಾಗಬೇಕಾಗುತ್ತದೆ ಎದು ತಿಳಿಸಿದ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿ, ಕೆಲಸ ನಡೆಸದಂತೆ ತಡೆ ಒಡ್ಡಿದರು.

ಮುಡಾ ಅಧಿಕಾರಿಗಳು ಇನ್ನು ಮುಂದಾದರೂ ಇಂತಹ ಸಾರ್ವಜನಿಕರ ವಿರೋಧಿ ಕೆಲಸಗಳನ್ನು ಬಿಟ್ಟು, ನಿವಾಸಿಗಳಿಗೆ, ನಾಗರಿಕರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ವಿಶಾಲ ಜಾಗದಲ್ಲಿ ಎಸ್‌ಟಿಪಿ ಘಟಕ ನಿರ್ಮಿಸಲಿ ಎಂದು ಅಲ್ಲಿನ ನಿವಾಸಿಗಳು, ನಿವೃತ್ತ ಎಸ್‌ಟಿಎಫ್ ಯೋಧರು ಒತ್ತಾಯಿಸಿದ್ದಾರೆ.

> **ಇಂದು ಅಧಿಕಾರಿಗಳಿಂದ ಪರಿಶೀಲನೆ ಸಾಧ್ಯತೆ**
>
> ಸಾರ್ವಜನಿಕರ ವಿರೋಧದ ನಡುವೆಯೂ ಕೊಳಚೆ ನೀರಿನ ಘಟಕ (ಎಸ್‌ಟಿಪಿ ಘಟಕ) ನಿರ್ಮಿಸಲು ಮುಂದಾಗಿದ್ದ ಅಧಿಕಾರಿಗಳಿಗೆ ನಿವಾಸಿಗಳು ಅಡ್ಡಿಪಡಿಸಿ ಕೆಲಸ ನಡೆಸದಂತೆ ಸ್ಥಗಿತಗೊಳಿಸಿದ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆ ಮುಡಾ ಮತ್ತು ಇತರೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆಂದು ಹೇಳಲಾಗಿದೆ.

ಚಂದ್ರ ಗ್ರಹಣ ಶಾಂತಿ

ಮೈಸೂರು, ನ.6- ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ನ.8ರಂದು ಮಂಗಳವಾರ ಹುಣ್ಣಿಮೆ ಪ್ರಯುಕ್ತ ಚಂದ್ರಗ್ರಹಣ ಇರುವುದರಿಂದ ಅಂದು ಸಂಕಲ್ಪಗಳನ್ನು ಮಾಡಿಸಿ ನ.9ರಂದು ಬುಧವಾರ ಗ್ರಹಣ ಶಾಂತಿ ಮಾಡಲಾಗುವುದು. ಮೇಷ ರಾಶಿಯಲ್ಲಿ ಗ್ರಹಣವಾಗುವುದರಿಂದ ನಿಮ್ಮ ನಿಮ್ಮ ಜ್ಯೋತಿಷಿಗಳ ಸಲಹೆಯಂತೆ ಶಾಂತಿ ಮಾಡಲಾಗುವುದು ಬೆಳಿಗ್ಗೆ 8.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ.

ಶನಿ ಮಹಾ ಶಾಂತಿ: ಬುಧವಾರ ಬೆಳಗ್ಗೆ ಮಿಥುನ, ಕನ್ಯಾ, ಧನಸ್ಸು, ಮಕರ, ಕುಂಭ ರಾಶಿಯವರಿಗೆ ಶನಿ ಮಹಾ ಶಾಂತಿ ಮತ್ತು ಮಹಾ ಮೃತ್ಯುಂಜಯ ಹೋಮ ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರು 9845183392/9845183399 ಸಂಪರ್ಕಿಸಬಹುದು.

ಕನ್ನಡದ ಬಗ್ಗೆ ಅಂತರಂಗದಲ್ಲಿ ಪ್ರೀತಿ ಬೆಳೆಸಿಕೊಳ್ಳಿ; ಪ್ರೊ.ಎಂ.ಕೃಷ್ಣೇಗೌಡ



ಮೈಸೂರು, ನ.6(ಆರ್‌ಕೆಬಿ)- ಮೈಸೂರಿನ ಜಯಲಕ್ಷ್ಮೀಪುರಂ ಮಹಾಜನ ಪ್ರೌಢಶಾಲೆ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಪದವಿಪೂರ್ವ ಕಾಲೇಜು ಸಹಯೋಗದಲ್ಲಿ 67ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸಂತ ಫಿಲೋಮಿನಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ, ಕನ್ನಡದ ಹಾಸ್ಯ ಚಕ್ರವರ್ತಿ ಹಾಗೂ ರಾಜ್ಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ.ಎಂ.ಕೃಷ್ಣೇಗೌಡ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕನ್ನಡ ಭಾಷೆ ಹೃದಯಕ್ಕೆ ಹತ್ತಿರವಾದ ಹಾಗೂ ಸರಳ, ಸುಂದರವೂ ಆದದ್ದು. ಕಣ್ಣು, ಕಿವಿ, ನಾಲಿಗೆಗೆ ಇರುವ ಭಾಷೆ ಕನ್ನಡದ ಬಗ್ಗೆ ನಮ್ಮ ಅಂತರಂಗದಲ್ಲಿ ಪ್ರೀತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಲೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳಿಧರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಎಸ್.ಉಮಾರಾಣಿ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಎ.ಎಂ.ರಘುರಾಂ ಇನ್ನಿತರರು ಉಪಸ್ಥಿತರಿದ್ದರು.



ಚಲನಚಿತ್ರ ನಿರ್ಮಾಪಕರು ಹಾಗೂ ಹೋಟೆಲ್ ಉದ್ಯಮಿಯೂ ಆದ ಸಂದೇಶ್ ಅವರನ್ನು ಹುಟ್ಟುಹಬ್ಬದ ಅಂಗವಾಗಿ ಹೋಟೆಲ್ ಮಾಲೀಕರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ನಾರಾಯಣ ಗೌಡ, ಕಾರ್ಯಕಾರಿ ಸಮಿತಿಯ ಎ.ಸಿ.ರವಿ, ಪ್ರಭುರಾಜ್, ರವಿ, ಶಿವಪ್ರಕಾಶ್ ಮತ್ತಿತರರಿದ್ದರು.

ಮೈಸೂರಲ್ಲಿ ಸುಲಲಿತವಾಗಿ ನಡೆದ ಶಿಕ್ಷಕರ ಅರ್ಹತಾ ಪರೀಕ್ಷೆ

ಪರೀಕ್ಷೆ ಬರೆದ ಸಾವಿರಾರು ಅಭ್ಯರ್ಥಿಗಳು



ಮೈಸೂರು, ನ.6(ಆರ್‌ಕೆಬಿ)- ಸಾರ್ವಜನಿಕ ಶಿಕ್ಷಣ ಇಲಾಖೆಯು ಭಾನುವಾರ ನಡೆಸಿದ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಮೈಸೂರಿನ 38 ಪರೀಕ್ಷಾ ಕೇಂದ್ರಗಳಲ್ಲಿ ಸುಲಲಿತವಾಗಿ ನಡೆದು, ಅರ್ಹ ಸಾವಿರಾರು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

1 ರಿಂದ 8 ನೇ ತರಗತಿಯ ಶಿಕ್ಷಕರ ನೇಮಕಾತಿಗಾಗಿ ರಾಜ್ಯಾದ್ಯಂತ ಟಿಇಟಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಅಂತೆಯೇ ಮೈಸೂರಿನಲ್ಲಿ ಭಾನುವಾರ ಬೆಳಗ್ಗೆ 9.30ರಿಂದ ಮಧ್ಯಾಹ್ನ 12ರವರೆಗೆ 27 ಕೇಂದ್ರಗಳಲ್ಲಿ 1 ರಿಂದ 5ನೇ ಪ್ರಾಥಮಿಕ ತರಗತಿಗಳಿಗೆ ನಡೆದ ಪರೀಕ್ಷೆಯಲ್ಲಿ ನೋಂದಾಯಿತ 7,136 ಅಭ್ಯರ್ಥಿಗಳ ಪೈಕಿ 6453 ಮಂದಿ ಹಾಜರಾಗಿದ್ದರು. 683 ಮಂದಿ ಗೈರು ಹಾಜರಾಗಿದ್ದರು.

ಮಧ್ಯಾಹ್ನ 2ರಿಂದ 4.30ರವರೆಗೆ ನಡೆದ 6 ರಿಂದ 8ನೇ ತರಗತಿಯ ಉನ್ನತ ಪ್ರಾಥಮಿಕ ತರಗತಿಗಳಿಗೆ 38 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಒಟ್ಟು 10,102 ಶಿಕ್ಷಕರ ಆಕಾಂಕ್ಷಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ 9,387 ಮಂದಿ ಹಾಜರಾಗಿ, 720 ಮಂದಿ ಗೈರು ಹಾಜರಾಗಿದ್ದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ (ಡಿಡಿಪಿಐ) ರಾಮಚಂದ್ರ ರಾಜೇ ಅರಸ್ ಅವರು ಇಂದು ಬೆಳಗ್ಗೆ ನಗರಾದ್ಯಂತ ಎಂಟು ಪರೀಕ್ಷಾ ಕೇಂದ್ರಗಳನ್ನು ಪರಿಶೀಲಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಿಡಿಪಿಐ, ಪರೀಕ್ಷೆ ಸುಗಮವಾಗಿ ನಡೆಯಲು ಭದ್ರತಾ ಕ್ರಮವಾಗಿ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿತ್ತು ಇಲಾಖೆಯು ಪರೀಕ್ಷೆಯನ್ನು ಸುಗಮವಾಗಿ ನಡೆಸಲೆಂದು ಮೈಸೂರು ನಗರಪಾಲಿಕೆಯ ವಲಯ ಕಚೇರಿಗಳ ಏಳು ಮಂದಿ ಸಹಾಯಕ ಆಯುಕ್ತರು ಮತ್ತು ಇತರೆ ಇಲಾಖೆಗಳ ಮೂವರು ಸೇರಿದಂತೆ ಒಟ್ಟು 10 ಮಂದಿ ಅಧಿಕಾರಿಗಳು ಹಾಗೂ ಸಿಟ್ಟಿಂಗ್ ಸ್ಕ್ವಾಡ್‌ಗಳ ಸಹಾಯ ಪಡೆಯಲಾಯಿತು.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಸಿಸಿಟಿವಿ ಇಲ್ಲದ ಕಡೆಗಳಲ್ಲಿ ವೀಡಿಯೋ ಚಿತ್ರೀಕರಣ ನಡೆಸಲಾಗಿದೆ. ಅಲ್ಲದೆ ಆರೋಗ್ಯದ ತುರ್ತು ಸಂದರ್ಭಗಳಿಗಾಗಿ ಎಲ್ಲಾ ಕೇಂದ್ರಗಳಲ್ಲೂ ಒಬ್ಬ ಆರೋಗ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಡಿಡಿಪಿಐ ಕಚೇರಿಯ ಇಓ ಕಮಲಮ್ಮ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಮರಿಮಲ್ಲಪ್ಪ ಪ್ರೌಢಶಾಲೆ, ಸದ್ವಿದ್ಯಾ ಪ್ರೌಢಶಾಲೆ, ಅವಿಲಾ ಕಾನ್ವೆಂಟ್, ಸೇಂಟ್ ಮೇರಿಸ್ ಗರ್ಲ್ಸ್ ಹೈಸ್ಕೂಲ್, ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್; ಐಡಿಯಲ್ ಜಾವಾ ರೋಟರಿ ಶಾಲೆ, ಮಹಾರಾಣಿ ಪ್ರೌಢಶಾಲೆ, ಡಿ.ಬನುಮಯ್ಯನವರ ಬಾಲಕರ ಪ್ರೌಢಶಾಲೆ, ನಿರ್ಮಲಾ ಪ್ರೌಢಶಾಲೆ, ಸೆಂಟ್ರಲ್ CBSE ಪ್ರೌಢಶಾಲೆ, ಕೆ.ಪಿ.ಕಾನ್ವೆಂಟ್, ರೋಟರಿ ಬೃಂದಾವನ ಶಾಲೆ, ಗುಡ್ ಶೆಪರ್ಡ್ ಕಾನ್ವೆಂಟ್ ಹೈಸ್ಕೂಲ್, ಸೇಂಟ್ ಫಿಲೋಮಿನಾ ಪ್ರೌಢಶಾಲೆ, ಸೇಂಟ್ ಆನ್ಸ್ ಹೈಸ್ಕೂಲ್, ಕರ್ನಾಟಕ ಪಬ್ಲಿಕ್ ಸ್ಕೂಲ್, ಮಹಾಜನ ಪ್ರೌಢಶಾಲೆ, ಸದ್ವಿದ್ಯಾ ಸೆಮಿ ರೆಸಿಡೆನ್ಶಿಯಲ್ ಹೈ ಸ್ಕೂಲ್, ಮಾನಸ ಸರೋವರ ಪುಷ್ಕರಿಣಿ ವಿದ್ಯಾಶ್ರಮ, ಚಿನ್ಮಯ ವಿದ್ಯಾಲಯ, ಸೇಂಟ್ ಥಾಮಸ್ ಹೈಸ್ಕೂಲ್, ಮಹರ್ಷಿ ಪಬ್ಲಿಕ್ ಸ್ಕೂಲ್, ಜೆಎಸ್‌ಎಸ್ ಪ್ರೌಢಶಾಲೆ, ಸೇಂಟ್ ರೋಸೆಲ್ಲೊ ಸೆಂಟ್ರಲ್ ಸ್ಕೂಲ್, ದೀಪಾ ಪ್ರೌಢಶಾಲೆ, ಚೈತ್ರ ಪ್ರೌಢಶಾಲೆ, ನಿರ್ಮಲಾ ಪ್ರೌಢಶಾಲೆ, ಜ್ಞಾನಗಂಗಾ ಶಾಲೆ, ಪ್ರಮತಿ ಹಿಲ್ ವ್ಯೂ, ಕರ್ನಾಟಕ ಪಬ್ಲಿಕ್ ಸ್ಕೂಲ್, ವಿವಿಎಸ್ ಪಂಡಿತ್ ನೆಹರು ಪ್ರೌಢಶಾಲೆ, ಜೆಎಸ್‌ಎಸ್ ಬಾಲಕಿಯರ ಪ್ರೌಢಶಾಲೆ, ಮಾತಾ ಅಮೃತಾನಂದಮಯಿ, ವಿಜಯ ವಿಠ್ಠಲ, ಮಹಾರಾಜ ಪ್ರೌಢಶಾಲೆ, ಜೆಎಸ್‌ಎಸ್ ಪ್ರೌಢಶಾಲೆ, ಕಾವೇರಿ ಪ್ರೌಢಶಾಲೆ ಮತ್ತು ಗೋಪಾಲಸ್ವಾಮಿ ಶಿಶುವಿಹಾರ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದವು.



ಶ್ರೀಗುಂಜಾನರಸಿಂಹಸ್ವಾಮಿ ದೇಗುಲದಲ್ಲಿ ಲಕ್ಷ ದೀಪೋತ್ಸವ



● ತ್ರಿವೇಣಿ ಸಂಗಮದಲ್ಲಿ ತೆಪ್ಪೋತ್ಸವ ● ವೈಭವದ ಪ್ರಥಮ ಕಪಿಲಾರತಿ





ತಿ.ನರಸೀಪುರ, ನ.6– ಇಲ್ಲಿನ ಕಾವೇರಿ ಕಪಿಲ ಸ್ಫಟಿಕ ಸರೋವರದ ತಟದಲ್ಲಿ ನೆಲೆಸಿರುವ ಐತಿಹಾಸಿಕ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಕಪಿಲಾರತಿ ಹಾಗೂ ಲಕ್ಷ ದೀಪೋತ್ಸವ ಸಂಭ್ರಮದಿಂದ ನಡೆಯಿತು.

ಶ್ರೀಗುಂಜಾನರಸಿಂಹಸ್ವಾಮಿ ಸೇವಾ ಸಮಿತಿ ಹಾಗೂ ಯುವ ಬ್ರಿಗೇಡ್ ಸಹಯೋಗದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಶುಭಕೃತ ನಾಮ ಸಂವತ್ಸರದ ಕಾರ್ತಿಕ ಶುದ್ಧ ತ್ರಯೋದಶಿ ಶುಭ ಲಗ್ನದಲ್ಲಿ ಹಮ್ಮಿಕೊಂಡಿದ್ದ 11ನೇ ವರ್ಷದ ಲಕ್ಷ ದೀಪೋತ್ಸವದಲ್ಲಿ ಮಣ್ಣಿನ ಹಣತೆಯಿಂದ ದೀಪ ಬೆಳಗಲಾಯಿತು.

ದೇಗುಲದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಮಹಿಳೆಯರಾದಿಯಾಗಿ ಭಕ್ತರ ಮಹಾಪೂರವೇ ದೇವಾಲಯಕ್ಕೆ ಹರಿದು ಬಂದಿತ್ತು. ದೇವಸ್ಥಾನಕ್ಕೆ ಜಗಮಗಿಸುವ ವಿದ್ಯುತ್ ದೀಪಾಲಂಕಾರಗಳು ಒಂದೆಡೆಯಾದರೆ, ಹಣತೆಗಳಲ್ಲಿನ ಹೊಂಬೆಳಕು ಕಣ್ಣಿಗೆ ಮುದ ನೀಡಿತ್ತಲ್ಲದೆ ಭಕ್ತರನ್ನು ಆಕರ್ಷಿಸಿತು. ದೇವಾಲಯದ ಆವರಣದಲ್ಲಿ ಬಣ್ಣ ಬಣ್ಣದ ಬೃಹತ್ ರಂಗೋಲಿಗಳನ್ನು ಬಿಡಿಸಿ ಅದರ ಮೇಲೆ ದೀಪಗಳನ್ನಿಡಲಾಗಿತ್ತು. ದೇವಸ್ಥಾನ ಮುಂದಿನ ಎರಡೂ ಬದಿಯಲ್ಲೂ ಸಾಲು ಕಂಬಗಳ ಮೇಲೆ, ಆವರಣದಲ್ಲಿ, ಅಶ್ವತ್ಥ ಕಟ್ಟೆ, ಅರಳೀಮರ ಕಟ್ಟೆ ಸುತ್ತಲಿನ ಶ್ರೀ ಅಂಡಾಳಮ್ಮ ಗುಡಿ, ಶ್ರೀಮಹಾಲಕ್ಷೀ ದೇಗುಲಗಳಲ್ಲೂ ಸಾಲು ಸಾಲು ದೀಪಗಳನ್ನು ಜೋಡಿಸಲಾಗಿತ್ತು. ಸರ್ವಜನರೂ ಸೇರಿ ಆಚರಿಸಿದ ಲಕ್ಷ ದೀಪೋತ್ಸವ ಎಲ್ಲರ ಮನಸೂರೆಗೊಂಡಿತು. ಸಾಗರೋಪಾದಿಯಲ್ಲಿ ಭಕ್ತರ ದಂಡು ದೇವಸ್ಥಾನಕ್ಕೆ ಹರಿದು ಬಂದು ದೇವರ ದರ್ಶನ ಪಡೆದರು. ಬಳಿಕ ಶ್ರೀಗುಂಜಾ ನರಸಿಂಹಸ್ವಾಮಿ ಸೇವಾ ಸಮಿತಿಯಿಂದ ಭಕ್ತರಿಗೆ ಪುಳಿಯೊಗರೆ ಪ್ರಸಾದ ವಿತರಿಸಲಾಯಿತು. ಭಕ್ತರು ಸರದಿ ಸಾಲಿನಲ್ಲಿ ತೆರಳಲು ಬ್ಯಾರಿಕೇಡ್ ಹಾಕಲಾಗಿತ್ತು. ಇದಕ್ಕೂ ಮೊದಲು ಬೆಳಗ್ಗೆ ಶ್ರೀಗುಂಜಾನರಸಿಂಹಸ್ವಾಮಿಗೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಇದರ ನೇತೃತ್ವವನ್ನು ಪ್ರಧಾನ ಅರ್ಚಕರಾದ ಶ್ರೀಧರ್ ಭಟ್ ಹಾಗೂ ಸಂಪತ್ ಕುಮಾರ್ ವಹಿಸಿದ್ದರು.

ತೆಪ್ಪೋತ್ಸವ: ಇದೇ ವೇಳೆ ಶ್ರೀಗುಂಜಾನರಸಿಂಹಸ್ವಾಮಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ, ಕಪಿಲಾ ನದಿ ತಟದಲ್ಲಿ ಬಣ್ಣಬಣ್ಣದ ವಿದ್ಯುತ್ ದೀಪ ಹಾಗೂ ಹೂ ಗಳಿಂದ ಮಧುವಣಗಿತ್ತಿಯಂತೆ ಸಿಂಗರಿಸಿದ್ದ ತೆಪ್ಪದಲ್ಲಿ ಪ್ರತಿಷ್ಠಾಪಿಸಿ, ಕಪಿಲಾ ನದಿಯಲ್ಲಿ ಮೂರು ಸುತ್ತು ಪ್ರದಕ್ಷಿಣ ಹಾಕಲಾಯಿತು. ಈ ವೇಳೆ ನೆರೆದಿದ್ದ ಭಕ್ತರು ನರಸಿಂಹಸ್ವಾಮಿಗೆ ಜೈಕಾರ ಹಾಕಿದರು. ಈ ವೇಳೆ ಸಿಡಿದ ಬಾಣಬಿರುಸು ತೆಪ್ಪೋತ್ಸವಕ್ಕೆ ಮೆರಗು ನೀಡಿತು.

ವೈಭವದ ಪ್ರಥಮ ಕಪಿಲಾರತಿ: ಕಪಿಲಾ ನದಿಯಲ್ಲಿ ಗಂಗಾವತಿ ಮಾದರಿ ಕಪಿಲಾ – ಕಾವೇರಿ ಆರತಿಯನ್ನು ಇದೇ ಮೊದಲ ಬಾರಿಗೆ ವಿಶೇಷವಾಗಿ ಆಯೋಜಿಸಲಾಗಿತ್ತು. ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸುತ್ತ ಸಹಸ್ರಾರು ಭಕ್ತರು ಗಂಗರ ಕಪಿಲಾರತಿ ವೀಕ್ಷಿಸಿ, ಲಕ್ಷ ದೀಪೋತ್ಸವದಲ್ಲಿ ಪಾಲ್ಗೊಂಡು ಪುನೀತರಾದರು.

ಸ್ವಚ್ಛತೆ: ಪಟ್ಟಣದ ಯುವ ಬ್ರಿಗೇಡ್ ಯುವಕರ ತಂಡ ಕಳೆದ ಒಂದು ವಾರದಿಂದ ದೇವಾಲಯದ ಸುತ್ತಮುತ್ತ ಸ್ವಚ್ಛತೆ ಕೈಗೊಂಡಿದ್ದರು. ಅಲ್ಲದೇ ಲಕ್ಷ ದಿಪೋತ್ಸವದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಭಕ್ತು ಪಾಲ್ಗೊಂಡಿದ್ದಾರೆ ಎಂದು ದೇವಸ್ಥಾನದ ಪಾರುಪತ್ತೇದಾರ್ ತಿರುಮಕೂಡಲು ದೀಪು ತಿಳಿಸಿದ್ದಾರೆ.

ಈ ವೇಳೆ ಸಮಿತಿಯ ಪುಳ್ಳಾರಿ ಗೌಡ್ರು, ಮಹದೇವ ಸ್ವಾಮಿ, ರಾಜಣ್ಣ, ವೀರೇಶ್ ಸೇರಿದಂತೆ ಸೇವಾ ಸಮಿತಿ ಪದಾಧಿಕಾರಿಗಳು ಹಾಜರಿದ್ದು, ಲಕ್ಷ ದಿಪೋತ್ಸವದ ಉಸ್ತುವಾರಿಯನ್ನು ನೋಡಿಕೊಂಡರು.

ಅದ್ಧೂರಿ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ಗರುಡೋತ್ಸವ



ಮೂಗೂರು, ನ.6– ಸುಮಾರು 65 ವರ್ಷದಿಂದ ಸ್ಥಗಿತಗೊಂಡಿದ್ದ ಗ್ರಾಮದ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ಗರುಡೋತ್ಸವ ಅದ್ಧೂರಿಯಾಗಿ ನಡೆಯಿತು.

ಚೋಳರ ಕಾಲದಲ್ಲಿ ನಿರ್ಮಿಸಲ್ಪಟ್ಟ ಪುರಾತನ ಕಾಲದ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ದೇವಾಲಯ ಪಾಳುಬಿದ್ದು ಶಿಥಿಲಗೊಂಡಿತ್ತು. ಈ ಹಿನ್ನೆಲೆಯಲ್ಲಿ ಸ್ಥಳೀಯ ದಾನಿಯೊಬ್ಬರ ಸಹಾಯದಿಂದ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅಲ್ಲದೇ ಗ್ರಾಮಸ್ಥರು ಗರುಡೋತ್ಸವ ನಡೆಸಲು ತೀರ್ಮಾನ ಕೈಗೊಂಡಿದ್ದರು. ಅದರಂತೆ ಗ್ರಾಮಸ್ಥರು ದೇವಾಲಯವನ್ನು ವಿವಿಧ ಹೂ ಹಾಗೂ ತಳಿರು ತೋರಣ ದಿಂದ ಸಿಂಗರಿಸಿ ಉತ್ಥಾನ ದ್ವಾದಶಿಯಂದು ತುಳಸಿ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಿದರು. ಬಳಿಕ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ಉತ್ಸವ ಮೂರ್ತಿಯನ್ನು ದೇವಾಲಯದ ಆವರಣದಲ್ಲಿ ಪ್ರದಕ್ಷಿಣೆ ಹಾಕಿ ಗರುಡ ವಾಹನದಲ್ಲಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು. ಗರುಡೋತ್ಸವ ಕಣ್ತುಂಬಿಕೊಂಡ ಭಕ್ತರು ಪೂಜೆ ಸಲ್ಲಿಸಿ ದರ್ಶನ ಪಡೆದು ನಮಿಸಿದರು. ಗ್ರಾಮದ ಎಲ್ಲಾ ಸಮುದಾಯದ ಮುಖಂಡರು ಉತ್ಸವದಲ್ಲಿ ಪಾಲ್ಗೊಂಡಿದ್ದರು. ಸಂಜೆ ದೇಗುಲದ ಆವರಣದಲ್ಲಿ ಪ್ರಸಾದ ವಿನಿಯೋಗ ನಡೆಯಿತು.

280 ಕೋಟಿ ರೂ. ವೆಚ್ಚದಲ್ಲಿ 277 ಗ್ರಾಮಕ್ಕೆ ಕುಡಿಯುವ ನೀರು



ಹುಣಸೂರು, ನ.6– ಬಾಚಹಳ್ಳಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ 280 ಕೋಟಿ ರೂ. ಅನುದಾನದಲ್ಲಿ ತಾಲೂಕಿನ 277 ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗುವುದು ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ನಗರದಲ್ಲಿ ಜಿಪಂ ಕುಡಿಯುವ ನೀರು ಯೋಜನೆ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, 20 ವರ್ಷಗಳ ಹಿಂದೆ ಕೆ.ಆರ್.ನಗರದ ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ ತಾಲೂಕಿನ ಕೆಲವು ಭಾಗಕ್ಕೆ ನೀರು ಒದಗಿಸಲಾಗಿತ್ತು. 6 ವರ್ಷಗಳ ಸತತ ಪ್ರಯತ್ನದಿಂದಾಗಿ ಈಗ ಬಾಚಹಳ್ಳಿ ಬಹುಗ್ರಾಮ ಕುಡಿಯುವ ನೀರು ಯೋಜನೆ ಸಂಪುಟ ಸಭೆಯಲ್ಲಿ ಅನುಮೋದನೆ ಹಂತಕ್ಕೆ ಬಂದಿದ್ದು, ಶೀಘ್ರ ಕಾಮಗಾರಿ ಆರಂಭವಾಗಲಿದೆ ಎಂದರು.

250 ಕೋಟಿ ಅನುದಾನ: ಜಲಜೀವನ್ ಮಿಷನ್ ಯೋಜನೆಯಡಿ 250 ಕೋಟಿ ರೂ. ವೆಚ್ಚದಲ್ಲಿ ಕ್ಷೇತ್ರದ 247 ಗ್ರಾಮಗಳಿಗೆ ಕುಡಿಯುವ ನೀರು ಸಂಪರ್ಕ ಕಲ್ಪಿಸುವ ಯೋಜನೆ ಪ್ರಗತಿಯಲ್ಲಿದೆ. ಮೊದಲ ಹಂತದಲ್ಲಿ ಬಿಳಿಕೆರೆ ಗ್ರಾಪಂ ವ್ಯಾಪ್ತಿಯ 28 ಗ್ರಾಮಗಳಿಗೆ 10 ಕೋಟಿ ರೂ. ವೆಚ್ಚದ ಯೋಜನೆ ಚಾಲನೆಯಲ್ಲಿದ್ದು, ಶೇ.70ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದರು.

2018–19ನೇ ಸಾಲಿನಲ್ಲಿ ಎರಡನೇ ಹಂತದ ಯೋಜನೆ ಯೋಜನೆ ಮುಂದುವರೆಯಲಿಲ್ಲ. ಉಪ ಚುನಾವಣೆಯಲ್ಲಿ ಗೆದ್ದ ಬಳಿಕ 3ನೇ ಹಂತಕ್ಕೆ ಚಾಲನೆ ನೀಡಿ 211 ಗ್ರಾಮಗಳಿಗೆ ನೀರು ಒದಗಿಸುವ ಕೆಲಸ ನಡೆದಿದೆ. 4ನೇ ಹಂತದಲ್ಲಿ 60 ಗ್ರಾಮಗಳಲ್ಲಿ ಕಾಮಗಾರಿ ಆರಂಭಿಸಲು ಟೆಂಡರ್ ಹಂತದಲ್ಲಿದೆ ಎಂದರು. ನ.14ರ ಬಳಿಕ ಜಲಜೀವನ್ ಮಿಷನ್ ಯೋಜನೆಯಲ್ಲಿ ಅನುಷ್ಠಾನಗೊಂಡಿರುವ ಶುದ್ಧ ಕುಡಿಯುವ ನೀರು ಯೋಜನೆಗೆ ನಾನು ಹಾಗೂ ಸಂಸದ ಪ್ರತಾಪ್ ಸಿಂಹ ಚಾಲನೆನೀಡಲಿದ್ದೇವೆ ಎಂದು. ಈ ವೇಳೆ ಜಿಪಂ ಕುಡಿಯುವ ನೀರು ವಿಭಾಗದ ಎಇಇ ಕಲೀಂ, ಜಿಪಂ ಸಿವಿಲ್ ವಿಭಾಗದ ಎಇಇ ನರಸಿಂಹಯ್ಯ ಮತ್ತು ಜೂನಿಯರ್ ಇಂಜಿನಿಯರ್ ಹಾಜರಿದ್ದರು.

ತಳಮಟ್ಟದಿಂದ ಪಕ್ಷ ಸಂಘಟಿಸಿ: ಶಾಸಕ ಹರ್ಷವರ್ಧನ್



ಮಲ್ಕುಂಡಿ, ನ.6– ತಳಮಟ್ಟದಿಂದ ಪಕ್ಷ ಸಂಘಟಿಸಿ ಮುಂಬರುವ ಚುನಾವಣೆಗೆ ಸಜ್ಜಾಗಬೇಕಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಕುರಿಹುಂಡಿ, ತರಗನಹಳ್ಳಿ ಹಾಗೂ ದುಗ್ಗಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಕಾರ್ಯಕರ್ತರ ಸಭೆ ನಡೆಸಿ ಮಾತನಾಡಿದ ಅವರು, ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿದ್ದೇನೆ. ರೈತರ ಬಹು ದಿನಗಳ ಕನಸು ನುಗು ಏತ ನೀರಾವರಿ ಯೋಜನೆಗೆ 80 ಕೋಟಿ ರೂ. ಅನು ದಾನ ತಂದಿದ್ದೇನೆ. ಈ ಯೋಜನೆಗೆ ಚಾಲನೆ ನೀಡಲು ನ.28 ರಂದು ನಂಜನ ಗೂಡಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಗಮಿಸಲಿದ್ದಾರೆ. ಕ್ಷೇತ್ರದ ಅಭಿವೃದ್ಧಿ ನನ್ನ ಮುಂದಿನ ಚುನಾವಣೆಗೆ ಶ್ರೀರಕ್ಷೆಯಾಗಿದೆ. ಪ್ರತಿ ಗ್ರಾಮದ ಎಲ್ಲಾ ಸಮುದಾಯದ ಬೀದಿಗಳಿಗೆ ಕಾಂಕ್ರೀಟ್ ರಸ್ತೆ, ಬೀದಿದೀಪ, ಶುದ್ಧ ಕುಡಿಯುವ ನೀರು, ಶಾಲೆ ಕೊಠಡಿಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದೇನೆ. ಮುಂದಿನ ದಿನಗಳಲ್ಲೂ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆ. ಬಿಜೆಪಿ ಸರ್ಕಾರದ ಜನಪರ ಯೋಜನೆಗಳನ್ನು ಕಾರ್ಯಕರ್ತರು ಪ್ರತಿ ಮನೆ ಮನೆಗೂ ತಲುಪಿಸುವ ಮೂಲಕ ಒಗ್ಗಟ್ಟಿನಿಂದ ಚುನಾವಣೆ ಎದುರಿಸಲು ಸಜ್ಜಾಗಬೇಕಿದೆ ಎಂದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಜಿಲ್ಲಾ ಉಪಾಧ್ಯಕ್ಷ ಹೆಚ್.ಎಂ. ಕೆಂಡಗಣ್ಣಪ್ಪ, ಬಸವರಾಜ್, ನಟರಾಜ್ ಸೇರಿದಂತೆ ಇನ್ನಿತರರಿದ್ದರು.

ಜನಸಾಮಾನ್ಯರಿಗೆ ಕಾನೂನಿನ ಅರಿವು ಅಗತ್ಯ



ಕಂಪಲಾಪುರ, ನ.6– ಜನಸಾಮಾನ್ಯರಿಗೆ ಕಾನೂನಿನ ಅರಿವು ಅಗತ್ಯ ಎಂದು ಪಿರಿಯಾಪಟ್ಟಣ ನ್ಯಾಯಾಲಯದ ಹಿರಿಯಶ್ರೇಣಿ ನ್ಯಾಯಾಧೀಶ ಸಮಿವುಲ್ಲಾ ತಿಳಿಸಿದರು.

ತಾಲೂಕು ವಕೀಲರ ಸಂಘ, ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಪಂ, ಗ್ರಾಪಂ ಸಹಯೋಗದಲ್ಲಿ ಆಯೋಜಿಸಿದ್ದ ಕಾನೂನು ಅರಿವು–ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾವು ಪ್ರತಿ ಹಳ್ಳಿ ಹಳ್ಳಿಗಳಿಗೆ, ಮನೆ ಮನೆಗೆ ತೆರಳಿ ಜನರಿಗೆ ಕಾನೂನಿನ ಅರಿವು ಮೂಡಿಸಲು ಸಾಧ್ಯವಿಲ್ಲ. ನಮಗೂ ನ್ಯಾಯಾಲಯದ ಕಲಾಪ ಇರುತ್ತದೆ. ಆದ್ದರಿಂದ ಸಾರ್ವಜನಿಕರ ಅನುಕೂಲಕ್ಕಾಗಿಯೇ ಇಂತಹ ಶಿಬಿರಗಳನ್ನು ಸರ್ಕಾರದಿಂದ ಹಮ್ಮಿಕೊಂಡಿದ್ದು, ಉಚಿತವಾಗಿ ಕಾನೂನಿನ ಅರಿವು ಪಡೆಯಿರಿ. ಯಾವುದೇ ಆಸ್ತಿ, ಮನೆಗಳನ್ನು ಕೊಂಡುಕೊಳ್ಳುವಾಗ ದುಡುಕಿ ಹಣ ಹಾಗೂ ಸಮಯ ವ್ಯರ್ಥ ಮಾಡಿಕೊಳ್ಳಬೇಡಿ. ಅದಕ್ಕಾಗಿ ವಕೀಲರ ಸಲಹೆ ಪಡೆಯಿರಿ ಎಂದರು.

ಕಿರಿಯ ಶ್ರೇಣಿ ನ್ಯಾಯಾಧೀಶ ಎಂ.ಆರ್.ಯೋಗೇಶ್ ಮಾತನಾಡಿ, ಸಮಾಜದ ಕಟ್ಟಕಡೆ ವ್ಯಕ್ತಿಗೂ ಕಾನೂನಿನ ನೆರವು ಸಿಗಬೇಕೆಂಬ ಸದುದ್ದೇಶದಿಂದ ಇಂತಹ ಶಿಬಿರ ಆಯೋಜಿಸಿದ್ದು, 3 ಲಕ್ಷಕ್ಕಿಂತ ಕಡಿಮೆ ಆದಾಯ ಉಳ್ಳವರು ಉಚಿತವಾಗಿ ಕಾನೂನಿನ ನೆರವು ಪಡೆಯಬಹುದು. ತಿಳುವಳಿಕೆ ಇಲ್ಲದ ಹಳ್ಳಿಗಾಡಿನ ಕೆಲ ಸಂಸಾರಗಳ ಗಲಾಟೆ ನ್ಯಾಯಾಲಯದವರೆಗೂ ಬಂದು ರಾಜಿಯಾದರೂ ಮೆಲ್ಮನವಿ ಸಲ್ಲಿಸಲು ಅವಕಾಶವಿರುತ್ತದೆ ಎಂದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಬಿ.ಜಿ.ಸತೀಶ್, ಮಾಜಿ ಅಧ್ಯಕ್ಷ ಕೆ.ಭಾಸ್ಕರ್ ಮಾತನಾಡಿದರು. ಈ ವೇಳೆ ವಕೀಲರ ಸಂಘದ ಕಾರ್ಯದರ್ಶಿ ಬಿ.ಎನ್.ಹರೀಶ್, ಖಜಾಂಚಿ ಮಾದೇಗೌಡ, ಗ್ರಾಪಂ ಅಧ್ಯಕ್ಷೆ ಮಮತ, ಉಪಾದ್ಯಕ್ಷ ರಾಮಲಿಂಗಂ, ಪಿಡಿಓ ಪರಮೇಶ್, ಕಾರ್ಯದರ್ಶಿ ಸುಷ್ಮಾ, ಸುಮಿತ್ರಾ ಸೇರಿದಂತೆ ಗ್ರಾಪಂ ಸದಸ್ಯರು, ಸ್ವಸಹಾಯ ಸಂಘದ ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

ಬ್ಯಾಂಕ್ ಆಫ್ ಬರೋಡಾದಿಂದ ಸಾಲ ಸೌಲಭ್ಯ



ಹುಣಸೂರು, ನ.6– ತಾಲೂಕಿನ ರೈತರು, ಸಣ್ಣಪುಟ್ಟ ವ್ಯಾಪಾರಸ್ಥರು ಹಾಗೂ ವಾಣಿಜ್ಯೋದ್ಯಮಿಗಳಿಗಾಗಿ ಸಾಲ ಸೌಲಭ್ಯ ಒದಗಿಸಲು ಬ್ಯಾಂಕ್ ಆಫ್ ಬರೋಡಾದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾವಂದೂರು ಶಾಖಾ ವ್ಯವಸ್ಥಾಪಕ ವಿ.ಮಹೇಶ್ ತಿಳಿಸಿದರು.

ಬ್ಯಾಂಕ್ ಆಫ್ ಬರೋಡಾ ಸಾರ್ವಜನಿಕರಿಗೆ ಮನೆ ರಿಪೇರಿಗಾಗಿ, ಮನೆ ನಿರ್ಮಾಣಕ್ಕೆ ಗೃಹ ಸಾಲ, ದ್ವಿಚಕ್ರ ಮತ್ತಿತರ ವಾಹನಗಳ ಖರೀದಿ, ಕೃಷಿ ಚಟುಚಟಿಕೆ, ಸಣ್ಣಪುಟ್ಟ ವ್ಯಾಪಾರಸ್ಥರಿಗೆ, ವ್ಯಾಪಾರ–ವಾಣಿಜ್ಯೋದ್ಯಮಗಳಿಗೆ ಹಾಗೂ ಕೈಗಾರಿಕೋದ್ಯಮ ಸೇರಿದಂತೆ ಇನ್ನಿತರ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆಯಲು ಸರ್ಕಾರಿ ರಜಾ ದಿನಗಳನ್ನು ಬಿಟ್ಟು ಕೆಲಸದ ವೇಳೆಯಲ್ಲಿ ಶಾಖೆಗೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆದುಕೊಳ್ಳಬಹುದು ಎಂದು ವ್ಯವಸ್ಥಾಪಕ ವಿ.ಮಹೇಶ್ ತಿಳಿಸಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು, ನ.6– ಡಾ. ವಿಜಯಲಕ್ಷ್ಮಿ ಅವರ ಮಾರ್ಗದರ್ಶನದಲ್ಲಿ ಕೆ.ಬಿ. ಮಣಿಕಂಠ ಅವರು ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ 'ನಂಜನಗೂಡು ತಾಲೂಕಿನ ಜನಪದ ರಂಗಭೂಮಿ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಶಿರೇನಹಳ್ಳಿಯಲ್ಲಿ ಕಾನೂನು ಅರಿವು ಕಾರ್ಯಕ್ರಮ



ಹಿರೀಕ್ಯಾತನಹಳ್ಳಿ, ನ.6– ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮೈಸೂರು, ಹುಣಸೂರು ಕಾನೂನು ಸೇವೆಗಳ ನ್ಯಾಯಾಲಯ ಸಲಹಾ ಸಮಿತಿ ಹಾಗೂ ಹಿರೀಕ್ಯಾತನಹಳ್ಳಿ ಗ್ರಾಪಂ ಸಹಯೋಗದಲ್ಲಿ ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಶಿರೇನಹಳ್ಳಿ ಗ್ರಾಮದಲ್ಲಿ ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಕಾನೂನು ಶಿಬಿರದ ಸಲಹಾ ಸಮಿತಿ ಸದಸ್ಯ ಹಾಗೂ ವಕೀಲ ರಘುಕುಮಾರ್ ಮಾತನಾಡಿ, ಕಾನೂನು ತಿಳಿದ ವ್ಯಕ್ತಿಗೆ ಅಧಿಕಾರಿಗಳನ್ನು ಪ್ರಶ್ನಿಸುವ ಧೈರ್ಯ ಬರುತ್ತದೆ. ಆದ್ದರಿಂದ ಗ್ರಾಮೀಣ ಜನರಿಗೆ ಕಾನೂನಿನ ಅರಿವು ಮುಖ್ಯ. ಗ್ರಾಮೀಣ ಜನರು ಶ್ರೀಮಂತರಿಗೆ ಅಷ್ಟೇ ಕಾನೂನು. ಬಡವರಿಗೆ ಕಾನೂನು ಇಲ್ಲ ಎನ್ನುವ ನೋವಿನಿಂದ ದೂರು ದಾಖಲು ಮಾಡುತ್ತಿರಲಿಲ್ಲ. ಆದರೆ ಅಂತಹವರಿಗೆ ಸಲಹೆ ನೀಡಲು ಸಮಿತಿ ರಚಿಸಲಾಗಿದ್ದು, ಯಾವುದೇ ಇಲಾಖೆಯಲ್ಲಿ ದೂರುಗಳಿದ್ದರೂ ಅಂತಹ ದೂರುಗಳನ್ನು ಸಲಹಾ ಸಮಿತಿಗೆ ನೀಡಿದರೆ ನೀವು ಅದರ ಪ್ರಯೋಜನ ಪಡೆಯಬಹುದು. ತಂದೆ ತಾಯಿಯಿಂದ ಮಕ್ಕಳು ಆಸ್ತಿ ಬರೆಸಿಕೊಂಡು ನಂತರ ಅವರ ಜೀವನಕ್ಕೆ ತೊಂದರೆ ನೀಡಿದರೆ ಅಥವಾ ಚೆನ್ನಾಗಿ ನೋಡಿಕೊಳ್ಳದಿದ್ದರೆ ಪುನಃ ಮಕ್ಕಳಿಂದ ತಂದೆ ತಾಯಿಗಳಿಗೆ ಆಸ್ತಿ ವಾಪಸ್ ಬರೆಸಿಕೊಳ್ಳುವ ಹಕ್ಕಿದೆ ಎಂದರು.

ಯಾವುದೇ ಇಲಾಖೆಯಲ್ಲಿ ತಮಗೆ ಅನ್ಯಾಯವಾಗಿದ್ದರೆ ಕಾನೂನು ಸಲಹಾ ಸಮಿತಿ ಭೇಟಿಯಾಗಬಹುದು. ಆಗ ಸೂಕ್ತ ಮಾಹಿತಿ ನೀಡಲಾಗುವುದು. ಕಾನೂನು ವಿಷಯಗಳನ್ನು 20 ರೂ. ನೀಡಿ ಪುಸ್ತಕ ಪಡೆದು ತಿಳಿದುಕೊಳ್ಳಬಹುದು. ಆರೋಪ ಮಾಡುವವರು ಸತ್ಯದ ಪರ ಇರಬೇಕು. ಇಲ್ಲದಿದ್ದರೆ ಅಂತವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಅನಕ್ಷರಸ್ಥರಿಗೆ ಕಾನೂನು ಅರಿವು ಕಡಿಮೆ ಇದ್ದು ಇದರ ನೆರವಿನಿಂದ ಅರಿವು ಹೆಚ್ಚಾಗುತ್ತದೆ ಎಂದರು.

ಕಾನೂನು ಅರಿವು ಕೊರತೆಯಿಂದ ಹಳ್ಳಿಗಳಲ್ಲಿ ಬಾಲ್ಯ ವಿವಾಹ ಹೆಚ್ಚಾಗಿದೆ. ಸರ್ಕಾರದ ಜೊತೆ ಸ್ವಯಂ ಸೇವಕರಾಗಿ ಇಂತಹ ಬಾಲ್ಯ ವಿವಾಹ ತಡೆಗಟ್ಟಬೇಕು. ಬಾಲ್ಯ ವಿವಾಹದಿಂದ ಶಾಲಾ ದಾಖಲಾತಿ ಕುಂಠಿತವಾಗುತ್ತಿವೆ. ಮಕ್ಕಳಿಗೆ ಶಿಕ್ಷಣ ಕೊಡಿಸುವ ಜವಾಬ್ದಾರಿ ಪೋಷಕರದು. ಮಕ್ಕಳಿಗೆ ಶಿಕ್ಷಣದ ಹಕ್ಕು ಇದೆ. ಶಿಕ್ಷಣ ವಂಚಿತರಾಗಿ ಮಾಡಬೇಡಿ. ಕಾನೂನು ಬಾಹಿರ ಮಿತಿ ಮೀರಿದ ಬಡ್ಡಿಯಿಂದ ರೈತ ಆತ್ಮಹತ್ಯೆ ಹೆಚ್ಚಾಗುತ್ತಿವೆ. ಬಡ್ಡಿ ನೀಡುವವರು ದುಪ್ಪಟ್ಟು ಹಣ ನೀಡಿದಂತೆ ಪತ್ರ ಬರೆಸಿಕೊಳ್ಳುವುದರಿಂದಲೂ ಆತ್ಮಹತ್ಯೆ ಹೆಚ್ಚಾಗುತ್ತಿವೆ. ಎಲ್ಲಾ ಆಯಾಮಗಳಿಗೆ ಕಾನೂನು ಸಲಹೆಗಳನ್ನು ಸರ್ಕಾರ ನೀಡುತ್ತಿದ್ದು, ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾನೂನು ಸಲಹಾ ಸಮಿತಿ ಸದಸ್ಯ ಶಂಕರೇಗೌಡ, ಪಿಡಿಓ ಶ್ರೀನಿವಾಸ್, ಗ್ರಾಪಂ ಸದಸ್ಯರಾದ ಸುಜಾತ, ಕುಮಾರಿ, ಕಲಾವತಿ, ಅಭಿ, ಮಂಜು, ಬೀರೇಗೌಡ, ಶಾಲಾ ಮುಖ್ಯಶಿಕ್ಷಕ ಜಗದೀಶ್, ಗ್ರಾಪಂ ನೌಕರರು ಹಾಗೂ ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು, ಶಾಲಾ ಮಕ್ಕಳು ಹಾಜರಿದ್ದರು.




ಪಿರಿಯಾಪಟ್ಟಣ ತಾಲೂಕಿನ ಕುರುಬ ಸಮಾಜದ ಅಧ್ಯಕ್ಷ ಹೆಚ್.ಡಿ. ಗಣೇಶ್ ಅವರು ಕುಟುಂಬ ಸಮೇತರಾಗಿ ಮೈಸೂರಿನ ಕರುಣಾಮಯಿ ಅಂಧ ಮಕ್ಕಳ ಸೇವಾ ಟ್ರಸ್ಟಿಗೆ ಭೇಟಿ ನೀಡಿ ಹುಟ್ಟುಹಬ್ಬ ಆಚರಿಸಿಕೊಂಡರು.




ಮೂಲತಃ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಚಿಕ್ಕವಡ್ಡರಗುಡಿ ಗ್ರಾಮದ ನಿವೃತ್ತ ಸೈನಿಕರಾದ ಶ್ರೀಧರ್ ಅವರು ಮೈಸೂರಿನಲ್ಲಿ ನಡೆಸುತ್ತಿರುವ ಸೈನಿಕ್ ಅಕ್ಯಾಡೆಮಿ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅಕ್ಯಾಡೆಮಿಯಲ್ಲಿ ತರಬೇತಿ ಪಡೆದು ಉನ್ನತ ಹುದ್ದೆ ಅಲಂಕರಿಸಿದವರನ್ನು ಸನ್ಮಾನಿಸಲಾಯಿತು. ಈ ವೇಳೆ ಶಾಸಕ ಸಾ.ರಾ.ಮಹೇಶ್, ಎಂಎಲ್‌ಸಿ ಮಂಜೇಗೌಡ ಇದ್ದರು.

ಪರ್ವತಪ್ಪ ನಿಧನ



ಹಂಪಾಪುರ, ನ.6– ನಂಜನಗೂಡು ತಾಲೂಕಿನ ಹರದನಹಳ್ಳಿ ಗ್ರಾಮದ ವೀರಶೈವ ಮುಖಂಡ ಪರ್ವತಪ್ಪ (80) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೋವಿಂದೇಗೌಡ



ಹನಗೋಡು, ನ.6– ಇಲ್ಲಿಗೆ ಸಮೀಪದ ಅಬ್ಬೂರು ಗ್ರಾಮದ ನಿವಾಸಿ ಗೋವಿಂದೇಗೌಡ (55) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ರಕ್ರಿಯೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಮಹಿಳಾ ಸಮಾಜದ ಬೆಳ್ಳಿ ಹಬ್ಬ



ಮೈಸೂರಿನ ವಿಜಯನಗರ 2ನೇ ಹಂತದ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ಭಾನುವಾರ ನಡೆದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಮಹಿಳಾ ಸಮಾಜದ ಬೆಳ್ಳಿ ಹಬ್ಬ 'ಸಂಬಂಧ' ಕಾರ್ಯಕ್ರಮವನ್ನು ಪಿ.ಎಸ್. ಲೀಲಾವತಿ (ಬಲದಿಂದ ನಾಲ್ಕನೆಯವರು) ಅವರು ಉದ್ಘಾಟಿಸಿದರು. (ಎಡದಿಂದ) ಕೊಡಗನ ಅನಸೂಯ ಕಿಶೋರ್, ಹೊಸೂರು ಮಮತ ವಸಂತ, ಅಚ್ಚುಡ ಆರತಿ ಹರೀಶ್, ದೇವಜನ ಗೀತಾ ಮೋಂಟಡ್ಕ, ಪಿ.ಎಸ್. ಲೀಲಾವತಿ, ಕೆ.ಎಂ. ಸುಲೋಚನ, ಉಳುವಾರನ ಫನಾವತಿ ಚಂದ್ರಶೇಖರ್, ಕೋಳಿಮಾಡು ಅನುರಾಧ ಅಶೋಕ್, ನಡುವಟ್ಟಿರ ಅನುರಾಧ ಜೋಯಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ನ. 6(ಆರ್‌ಕೆ)– ಮೈಸೂರಿನ ವಿಜಯನಗರ 2ನೇ ಹಂತದ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ಇಂದು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಮಹಿಳಾ ಸಮಾಜದ ಬೆಳ್ಳಿಹಬ್ಬ ಸಡಗರದಿಂದ ಆಚರಿಸಲಾಯಿತು.

ಸಮಾಜದ ಅಧ್ಯಕ್ಷೆ ದೇವಜನಗೀತಾ ಮೋಂಟಡ್ಕ ಅವರು ಅಧ್ಯಕ್ಷತೆ ವಹಿಸಿದ್ದ 'ಸಂಬಂಧ' ಹೆಸರಿನ ಕಾರ್ಯಕ್ರಮವನ್ನು ಬೆಂಗಳೂರಿನ ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯ ಸಹಾಯಕ ನಿರ್ದೇಶಕಿ ಪಿ.ಎಸ್. ಲೀಲಾವತಿ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತರಾದ ಕೆ.ಎಂ. ಸುಲೋಚನ ಅವರು ಬೆಳ್ಳಿ ಹಬ್ಬದ ಅಂಗವಾಗಿ ಸಮಾಜವು ಹೊರತಂದಿರುವ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಇದೇ ವೇಳೆ ಸಾಧಕಿಯರಾದ ಉಳುವಾರನ ಲಲಿತ ಮಾದಯ್ಯ, ಟಿ.ಎಂ. ಮೀನಾಕ್ಷಿ, ಪಾಣತ್ತಲೆ ಆಶಾ ವಸಂತ ಹಾಗೂ ಕುಮಾರಿ ಮುಕ್ಕಾಟಿ ದಿವ್ಯ ಅವರನ್ನು ಸನ್ಮಾನಿಸಲಾಯಿತು.

ಮಡಿಕೇರಿ, ಹಾಸನ, ಹೊಸಪೇಟೆಯ ಸಾಧ್ಯ ಟ್ರಸ್ಟ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್ ಸಂಸ್ಥಾಪಕಿ ಅಚ್ಚುಡ ಆರತಿ ಹರೀಶ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಮಹಿಳಾ ಸಮಾಜದ ಗೌರವಾಧ್ಯಕ್ಷೆ ಉಳುವಾರನ ಫನಾವತಿ ಚಂದ್ರಶೇಖರ, ಉಪಾಧ್ಯಕ್ಷೆ ಕಡ್ಯೆದ ಸರೋಜ ಭೀಮಯ್ಯ, ಕಾರ್ಯದರ್ಶಿ ಕೊಡಗನ ಅನಸೂಯ ಕಿಶೋರ್, ಸಹಕಾರ್ಯದರ್ಶಿ ಕುಂಟುಮಣಿ ಶೀಲ ರಮೇಶ್, ಖಜಾಂಚಿ ನಡುವಟ್ಟಿರ ಗೀತ ಲಕ್ಷ್ಮಣ್ ಅವರು ಭಾಗವಹಿಸಿದ್ದರು.

ಪದಾಧಿಕಾರಿಗಳು ಹಾಗೂ ನಿರ್ದೇಶಕರು ಸ್ವಾಗತ ನೃತ್ಯ ಮತ್ತು ಗೀತೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟು ಗಮನ ಸೆಳೆದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಶ್ರೀ ಹೆಚ್. ಹನುಮಂತಯ್ಯ ಬಿನ್ ಲೇಟ್ ಹನುಮಂತೇಗೌಡ ಮತ್ತು ಶ್ರೀ ಹನುಮಂತಯ್ಯ ಬಾಬು ಜಗದೀಶ್ ಬಿನ್ ಶ್ರೀ ಹೆಚ್. ಹನುಮಂತಯ್ಯ, ಶ್ರೀ ಚಲುವಯ್ಯ ಕೆ. ಬಿನ್ ಕುಂಟಯ್ಯ, ಶ್ರೀ ಚಲುವರಾಜು ಎನ್. ಚಲುವಯ್ಯ, ಶ್ರೀ ಸ್ವಾಮಿ ಬಿನ್ ಚಲುವಯ್ಯ, ಶ್ರೀ ರಾಜೇಂದ್ರ ಬಿನ್ ಚಲುವಯ್ಯ, ಶ್ರೀ ರವಿಚಂದ್ರ ಬಿನ್ ಚಲುವಯ್ಯ, ಶ್ರೀಮತಿ ಪುಟ್ಟಸಿದ್ದಮ್ಮ ಕೋಂ ಚಾಮಯ್ಯ, ಶ್ರೀ ಚಾಮಯ್ಯ ಬಿನ್ ಲೇಟ್ ಸೋಸಲೆ ಮರಯ್ಯ, ಶ್ರೀಮತಿ ಕಾವ್ಯ ಬಿನ್ ಪುಟ್ಟಸಿದ್ದಮ್ಮ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರು ಯಾವುದೇ ರೀತಿ ಹಕ್ಕು ಹಿತಾಸಕ್ತಿ ಭಾಗಾಂಶ, ಋಣಭಾಧ್ಯತೆಗಳು ಇದ್ದಲ್ಲಿ ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂತ, ಋಣಭಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮೈದನಹಳ್ಳಿ ಗ್ರಾಮದ ಸರ್ವೆ ನಂಬರ್ 125/2 ರಲ್ಲಿ ಹೆಚ್. ಹನುಮಂತಯ್ಯ ಬಿನ್ ಲೇಟ್ ಹನುಮಂತೇಗೌಡ ರವರ ಹೆಸರಿನಲ್ಲಿ ಖಾತೆಯಿರುವ ಒಟ್ಟು ವಿಸ್ತೀರ್ಣ 1 ಎಕರೆ 31 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸಣ್ಣರಿಯಯ್ಯರವರ ಜಮೀನು, ಪಶ್ಚಿಮಕ್ಕೆ: ಸರ್ಕಾರಿ ಕಟ್ಟೆ ; ಉತ್ತರಕ್ಕೆ: ಸರ್ವೆ ನಂಬರ್ 125/1 ರಲ್ಲಿ ನಿರ್ಮಿಸಿರುವ ಖಾಸಗಿ ಬಡಾವಣೆ ; ದಕ್ಷಿಣಕ್ಕೆ: ರಸ್ತೆ, ಈ ಮಧ್ಯೆ ಇರುವ ವಿಸ್ತೀರ್ಣ 1 ಎಕರೆ 31 ಗುಂಟೆ ಖುಷ್ಕಿ ಜಮೀನು.

Sd/- D. Kumara, B.Com., LL.B.
Advocate & Legal Advisor
KAR 625 / 04, #706/1, 2nd Cross,
Thyagaraja Road, Mysuru-570004.
Mob: 9620439571, 9449987859

ಸ್ಥಳ: ಮೈಸೂರು
ದಿನಾಂಕ: 03-11-2022